ಕರ್ನಾಟಕ ಸರ್ಕಾರ

ಸಿರಿ ಕನ್ನಡ

ಪ್ರಥಮಭಾಷಾ ಕನ್ನಡ ಪಠ್ಯಪುಸ್ತಕ

೫

ಐದನೆಯ ತರಗತಿ

ಮೊದಲನೆಯ ಮತ್ತು ಎರಡನೆಯ ಸೆಮಿಸ್ಟರ್

೨೦೧೫

ಕರ್ನಾಟಕ ಪಠ್ಯಪುಸ್ತಕ ಸಂಘ (ರಿ)
೧೦೦ ಅಡಿ ವರ್ತುಲ ರಸ್ತೆ, ಬನಶಂಕರಿ ೩ನೆಯ ಹಂತ,
ಬೆಂಗಳೂರು–೫೬೦೦೮೫.

ಪಠ್ಯಪುಸ್ತಕ ರಚನಾ ಸಮಿತಿ

ಅಧ್ಯಕ್ಷರು

ಡಾ॥ ನಾ. ದಾಮೋದರ ಶೆಟ್ಟಿ, ನಿವೃತ್ತ ಪ್ರಾಧ್ಯಾಪಕರು, ಸಂತ ಎಲೋಶಿಯಸ್ ಕಾಲೇಜು, ಮಂಗಳೂರು.

ಸದಸ್ಯರು

೧. **ಶ್ರೀ ವೀರೇಶ್ ಕೌಲಗಿ,** ಸ. ಶಿ. ಸರ್ಕಾರಿ ಪ್ರೌಢಶಾಲೆ, ಹಿರೇಗೌಜ ಅಂಚೆ, ಚಿಕ್ಕಮಗಳೂರು ಜಿಲ್ಲೆ.

೨. **ಶ್ರೀ ರವಿಕುಮಾರ್,** ಸ. ಶಿ., ಸರ್ಕಾರಿ ಪ್ರೌಢಶಾಲೆ, ಎಸ್. ಮಾದಾಪುರ, ಕಡೂರು ತಾಲೂಕು

೩. **ಶ್ರೀಮತಿ ಕೆ.ಎನ್. ಕಲ್ಪನ,** ಸ.ಶಿ. ಸ.ಹಿ.ಪ್ರಾ.ಶಾಲೆ ಪೇಟೆ, ಹೊಳೆನರಸೀಪುರ, ಹಾಸನ ಜಿಲ್ಲೆ.

೪. **ಶ್ರೀಮತಿ ರೋಹಿಣಿ ಎಸ್ ದಾನಿ,** ಸ.ಶಿ., ಸ.ಹಿ.ಪ್ರಾ.ಶಾಲೆ, ರಬಕವಿ, ಜಮಖಂಡಿ ತಾ॥, ಬಾಗಲಕೋಟೆ ಜಿ.

೫. **ಶ್ರೀ ಜೆ. ಸುರೇಶ್ ಸಿ.ಆರ್.ಪಿ.,** ನಲ್ಲೂರು ಕ್ಲಸ್ಟರ್, ಶೃಂಗೇರಿ ತಾಲ್ಲೂಕು.

೬. **ಶ್ರೀ ಜಾನ್ ಚಂದ್ರನ್,** ಚಿತ್ರಕಲಾ ಶಿಕ್ಷಕರು, ಸಂತ ಎಲೋಶಿಯಸ್ ಪ್ರೌಢಶಾಲೆ, ಮಂಗಳೂರು.

ಪರಿಶೀಲಕರು

ಶ್ರೀ ಕಾ. ತ. ಚಿಕ್ಕಣ್ಣ, ಜಂಟಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಬೆಂಗಳೂರು.

ಸಂಪಾದಕೀಯ ಮಂಡಳಿ ಸದಸ್ಯರು

೧. **ಪ್ರೊ॥ ಸಾ.ಶಿ. ಮರುಳಯ್ಯ,** ಸಾಹಿತಿಗಳು, 'ರಾಗಿಣಿ' ಹಂಪಿನಗರ, ಬೆಂಗಳೂರು.

೨. **ಪ್ರೊ॥ ಅ.ರಾ.ಮಿತ್ರ,** ಸಾಹಿತಿಗಳು, ಕೆ.ಎಚ್.ಬಿ. ಕಾಲೋನಿ, ಯಲಹಂಕ, ಬೆಂಗಳೂರು.

೩. **ಡಾ॥ ವಿಷ್ಣು ಎಂ. ಶಿಂದೆ,** ಸಹಾಯಕ ಪ್ರಾಧ್ಯಾಪಕರು, ಶಿಕ್ಷಣ ವಿಭಾಗ, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಾಪುರ.

ಮುಖ್ಯ ಸಂಯೋಜಕರು

ಪ್ರೊ॥ ಜಿ. ಎಸ್. ಮುಡಂಬಡಿತ್ತಾಯ, ಪಠ್ಯಕ್ರಮ ಪರಿಷ್ಕರಣೆ ಮತ್ತು ಪಠ್ಯಪುಸ್ತಕ ರಚನೆ, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

ಸಲಹೆ ಮತ್ತು ಮಾರ್ಗದರ್ಶನ

ಶ್ರೀ ನಾಗೇಂದ್ರ ಕುಮಾರ್, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು – ೮೫.

ಶ್ರೀ ಪಾಂಡುರಂಗ, ಉಪನಿರ್ದೇಶಕರು (ಪ್ರಭಾರಿ), ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು – ೮೫.

ಕಾರ್ಯಕ್ರಮ ಸಂಯೋಜಕರು :

ಶ್ರೀ ಪಾಂಡುರಂಗ, ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯ ಪುಸ್ತಕ ಸಂಘ, ಬೆಂಗಳೂರು.

ಮುನ್ನುಡಿ

೨೦೦೫ರ ರಾಷ್ಟ್ರೀಯ ಪಠ್ಯಕ್ರಮದ ಆಧಾರದ ಮೇಲೆ ರಚಿತವಾದ ಕರ್ನಾಟಕ ರಾಜ್ಯ ಪಠ್ಯವಸ್ತುವಿಗೆ ಅನುಗುಣವಾಗಿ ಕರ್ನಾಟಕ ಪಠ್ಯಪುಸ್ತಕ ಸಂಘವು ೨೦೧೦ ನೇ ಸಾಲಿನಿಂದ ಒಂದನೆಯ ತರಗತಿಯಿಂದ ಹತ್ತನೆಯ ತರಗತಿವರೆಗಿನ ಪಠ್ಯಪುಸ್ತಕಗಳ ರಚನಾ ಕಾರ್ಯದಲ್ಲಿ ತೊಡಗಿದೆ. ಒಟ್ಟು ಹನ್ನೊಂದು ಭಾಷೆಗಳಲ್ಲಿ ಭಾಷಾ ಪಠ್ಯಪುಸ್ತಕಗಳನ್ನು ಹಾಗೂ ಏಳು ಮಾಧ್ಯಮಗಳಲ್ಲಿ ಕೋರ್ ವಿಷಯಗಳನ್ನು ರಚನೆ ಮಾಡಲಾಗುತ್ತಿದೆ. ೧ ರಿಂದ ೪ ನೆಯ ತರಗತಿಯವರೆಗೆ ಪರಿಸರ ವಿಜ್ಞಾನ ಮತ್ತು ೫ ರಿಂದ ೧೦ ನೆಯ ತರಗತಿಯವರೆಗೆ ಐಚ್ಛಿಕ ವಿಷಯಗಳಾದ ಗಣಿತ ವಿಜ್ಞಾನ ಮತ್ತು ಸಮಾಜ ವಿಜ್ಞಾನ ವಿಷಯಗಳಿರುತ್ತವೆ.

೨೦೦೫ರ ರಾಷ್ಟ್ರೀಯ ಪಠ್ಯಕ್ರಮವು ಈ ಕೆಳಗಿನ ವೈಶಿಷ್ಟ್ಯಗಳನ್ನು ಹೊಂದಿದೆ.

- ಕಲಿಕೆಯನ್ನು ಜೀವನದ ಆವಶ್ಯಕತೆಗಳೊಂದಿಗೆ ಜೋಡಿಸುವುದು.
- ಕಂಠಪಾಠ ವಿಧಾನದಿಂದ ಕಲಿಕೆಯನ್ನು ಮುಕ್ತಗೊಳಿಸುವುದು.
- ಪಠ್ಯಪುಸ್ತಕಗಳ ಹೊರತಾಗಿ ಪಠ್ಯಕ್ರಮವನ್ನು ಶ್ರೀಮಂತಗೊಳಿಸುವುದು
- ಜ್ಞಾನದ ಅಭಿವೃದ್ಧಿಗೆ ಕಲಿಕಾ ಅನುಭವಗಳನ್ನು ಬಳಸುವುದು.
- ಭಾರತದ ಪ್ರಜಾಸತ್ತಾತ್ಮಕ ನೀತಿಯನ್ವಯ ಮಕ್ಕಳ ಆವಶ್ಯಕತೆಗಳಿಗೆ ತಕ್ಕಂತೆ ಸ್ಪಂದಿಸುವುದು
- ಶಿಕ್ಷಣವನ್ನು ಇಂದಿನ ಹಾಗೂ ಭವಿಷ್ಯದ ಜೀವನಾವಶ್ಯಕತೆಗಳಿಗೆ ಹೊಂದುವಂತೆ ಮಾಡುವುದು
- ವಿಷಯಗಳ ಮೇರೆಗಳನ್ನು ಮುರಿದು ಅವುಗಳ ಸಮಗ್ರದೃಷ್ಟಿಯ ಬೋಧನೆಯನ್ನು ಅಳವಡಿಸುವುದು
- ಶಾಲೆಯ ಹೊರಗಿನ ಬದುಕಿಗೆ ಜ್ಞಾನ ಸಂಯೋಜನೆ.
- ಮಕ್ಕಳಿಂದಲೇ ಜ್ಞಾನವನ್ನು ಅಭಿವೃದ್ಧಿ ಪಡಿಸುವುದು.

ನೂತನ ಪಠ್ಯಪುಸ್ತಕಗಳನ್ನು ಕೆಳಗಿನ ಮೂಲಭೂತ ವಿಧಾನಗಳ ಆಧಾರದ ಮೇಲೆ ರಚಿಸಲಾಗಿದೆ. * ಅಂತರ್ಗತ ವಿಧಾನ (Integrated Approach), * ರಚನಾತ್ಮಕ ವಿಧಾನ (Constructive Approach) ಹಾಗೂ * ಸುರುಳಿಯಾಕಾರದ ವಿಧಾನ (Spiral Approach) .

ಪಠ್ಯಪುಸ್ತಕಗಳ ವಿಷಯ ಹಾಗೂ ಅಭ್ಯಾಸಗಳು ವಿದ್ಯಾರ್ಥಿಗಳನ್ನು ಯೋಚನೆ ಮಾಡುವಂತೆ ಮಾಡಿ, ಚಟುವಟಿಕೆಗಳ ಮೂಲಕ ಜ್ಞಾನ ಹಾಗೂ ಸಾಮರ್ಥ್ಯಗಳನ್ನು ಪಡೆಯುವಂತೆ ಮಾಡುವ ಪ್ರಯತ್ನ ಮಾಡಲಾಗಿದೆ. ಪಠ್ಯವಸ್ತುಗಳೊಂದಿಗೆ ಅತ್ಯಂತ ಆವಶ್ಯಕ ಭಾರತೀಯ ಜೀವನ ಮೌಲ್ಯಗಳನ್ನು ಅಂತರ್ಗತವಾಗಿ ಬಳಸಲಾಗಿದೆ. ಈ ನೂತನ ಪಠ್ಯಪುಸ್ತಕಗಳು ಪರೀಕ್ಷಾಪೂರಕ ದೃಷ್ಟಿಯಿಂದ ರಚಿತವಾಗಿಲ್ಲ. ಬದಲಾಗಿ ಅವುಗಳು ವಿದ್ಯಾರ್ಥಿಗಳ ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿವೆ. ತನ್ಮೂಲಕ ಅವರನ್ನು ಸ್ವತಂತ್ರ ಭಾರತದ ಸ್ವಸ್ಥಸಮಾಜದ ಉತ್ತಮ ಪ್ರಜೆಗಳನ್ನಾಗಿ ಮಾಡುವ ಪ್ರಯತ್ನ ನಡೆದಿದೆ.

ಭಾಷಾಕಲಿಕೆಯಲ್ಲಿ ಅತ್ಯಂತ ಮುಖ್ಯ ಗುರಿಗಳಾದ ಆಲಿಸುವುದು, ಮಾತನಾಡುವುದು, ಓದುವುದು, ಬರೆಯುವುದು ಹಾಗೂ ಆಕರಗ್ರಂಥಗಳಿಂದ ವಿಷಯ ಸಂಗ್ರಹಣೆಯಂತಹ ಕ್ಷೇತ್ರವಾರು ಸಾಮರ್ಥ್ಯಗಳಿಗೆ ಒತ್ತು ನೀಡಲಾಗಿದೆ. ಈ ಕೌಶಲಗಳೊಂದಿಗೆ ಕ್ರಿಯಾತ್ಮಕ ವ್ಯಾಕರಣ, ಸೌಂದರ್ಯಪ್ರಜ್ಞೆ, ಪ್ರಶಂಸಾ ಮನೋಭಾವ, ಮೌಲ್ಯಗಳ ಸಂವರ್ಧನೆ ಹಾಗೂ ಮಕ್ಕಳ ಅಭ್ಯಾಸ ಪುಸ್ತಕಗಳಲ್ಲಿ ಅನೇಕ ಚಟುವಟಿಕೆಗಳನ್ನು ಮಕ್ಕಳಿಂದ ಮಾಡಿಸಿ ಅವರಲ್ಲಿ ಸಂಬಂಧಪಟ್ಟ ಸಾಮರ್ಥ್ಯ ಸಂವರ್ಧನೆಗೆ ಅನುವು ಮಾಡಿಕೊಡಬೇಕು. ಈ ಸಾಮರ್ಥ್ಯ ಮಕ್ಕಳಲ್ಲಿ ಬಂದಾಗ ಅವರು ಪರೀಕ್ಷೆಗಳಿಗಾಗಿ ಕಂಠಪಾಠಕ್ಕೆ ಶರಣು ಹೋಗಬೇಕಾಗಿಲ್ಲ. ಪಠ್ಯಪುಸ್ತಕವು ಭಾಷಾ ಕೌಶಲಗಳ ಸಂವರ್ಧನೆಗೆ ಒಂದು ಪೂರಕವಸ್ತುವೆಂದು ಪರಿಗಣಿಸಲು, ಮಕ್ಕಳ ಮನೋವೈಶಾಲ್ಯವನ್ನು ಬೆಳೆಸಲು ವಿಷಯಗಳಿಗೆ ಸಂಬಂಧಿಸಿದಂತೆ ಅನೇಕ ಚಟುವಟಿಕೆಗಳನ್ನು ಪಠ್ಯಪುಸ್ತಕದಲ್ಲಿ ಒದಗಿಸಲಾಗಿದೆ. ಮಿತ್ರರೊಂದಿಗೆ ಗುಂಪುಗಳಲ್ಲಿ ಚರ್ಚೆಯ ಮೂಲಕ ಅವರ ಅಭಿವ್ಯಕ್ತಿ ಹಾಗು ಸಂವಹನ ಕೌಶಲ್ಯಗಳ ಸಂವರ್ಧನೆಯೇ ಕಲಿಕೆಯ ಗುರಿಯೆಂದು ಅಂತಹ ಚಟುವಟಿಕೆಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಗಿದೆ. ಈ ರೀತಿಯ ಚಟುವಟಿಕೆಗಳು ಮಕ್ಕಳಲ್ಲಿ ಕಲಿಯುವ ಕಲೆ (learning to learn) ಹಾಗೂ ಕಲಿತುದುದನ್ನು ಜೀವನದಲ್ಲಿ ಅಳವಡಿಸುವ ಶಕ್ತಿ (learning to do) ಯನ್ನು ಮಕ್ಕಳಲ್ಲಿ ವೃದ್ಧಿಮಾಡುತ್ತದೆ. ಪ್ರತಿ ಘಟಕದಲ್ಲಿಯೂ ಕೆಲವು ಜೀವನ ಮೌಲ್ಯಗಳನ್ನು ಅಂತರ್ಗತವಾಗಿ ಜೋಡಿಸಲಾಗಿದೆ. ಅವುಗಳನ್ನು ಮಕ್ಕಳೇ ಕಂಡುಹಿಡಿದು, ಚರ್ಚಿಸಿ ಜೀವನದಲ್ಲಿ ಅವುಗಳ ಅರಿವನ್ನುಂಟುಮಾಡಿಕೊಳ್ಳುವಂತೆ ಮಾಡಬೇಕು.

ಕರ್ನಾಟಕ ಪಠ್ಯಪುಸ್ತಕ ಸಂಘವು ಈ ಪುಸ್ತಕದ ತಯಾರಿಯಲ್ಲಿ ಸಹಕರಿಸಿದ ಸಮಿತಿಯ ಅಧ್ಯಕ್ಷರಿಗೆ, ಸದಸ್ಯರಿಗೆ, ಕಲಾಕಾರರಿಗೆ, ಪರಿಶೀಲಕರಿಗೆ, ಸಂಯೋಜಕ ಅಧಿಕಾರಿಗಳಿಗೆ ಹಾಗೂ ಸಂಪಾದಕ ಮಂಡಳಿಯ ಸದಸ್ಯರಿಗೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ಕವಿಗಳ ಹಾಗೂ ಸಾಹಿತಿಗಳ ಕೃತಿಗಳನ್ನು ಈ ಪಠ್ಯಪುಸ್ತಕದಲ್ಲಿ ಅಳವಡಿಸಲಾಗಿದೆ. ಇದಕ್ಕೆ ಒಪ್ಪಿಗೆಯನ್ನು ನೀಡಿರುವ ಕವಿಗಳಿಗೆ ಹಾಗೂ ಸಾಹಿತಿಗಳಿಗೆ ಪಠ್ಯಪುಸ್ತಕ ಸಂಘ ಆಭಾರಿಯಗಿದೆ.

ಪ್ರೊ॥ ಜಿ. ಎಸ್. ಮುಡಂಬಡಿತ್ತಾಯ
ಮುಖ್ಯ ಸಂಯೋಜಕರು
ಪಠ್ಯಪುಸ್ತಕ ಪರಿಷ್ಕರಣೆ ಹಾಗೂ ಪಠ್ಯಪುಸ್ತಕ ರಚನೆ
ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

ನಾಗೇಂದ್ರ ಕುಮಾರ್
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ
ಬೆಂಗಳೂರು

ನಾಂದಿ

ಕರ್ನಾಟಕ ಸರಕಾರದ ಪಠ್ಯಪುಸ್ತಕ ರಚನಾ ಸಂಘವು ಐದನೆಯ ತರಗತಿಯ ಕನ್ನಡ ಪ್ರಥಮ ಭಾಷಾ ಪಠ್ಯ ಪುಸ್ತಕ ರಚನೆಗಾಗಿ ನಮ್ಮ ತಂಡವನ್ನು ಆಯ್ಕೆ ಮಾಡಿದಾಗ ಸವಾಲಿನಂತೆ ಆ ಕರ್ತವ್ಯವನ್ನು ವಹಿಸಿಕೊಂಡೆವು. ಎಂಟು ತಿಂಗಳ ಪರಿಶ್ರಮದಲ್ಲಿ ಸಿದ್ಧವಾದ ಪಠ್ಯಪುಸ್ತಕದಲ್ಲಿ ಇಡಿ ತಂಡದ ಸಾಮೂಹಿಕ ದುಡಿಮೆಯಿದೆ. ಸಾಮರ್ಥ್ಯಕ್ಕನುಗುಣವಾದ ಪಾಠಗಳನ್ನು ಆಯ್ಕೆ ಮಾಡುವ ಕಸರತ್ತಿನಲ್ಲಿ ದಿನಗಳುರುಳಿದ್ದು ಗೊತ್ತಾಗಲಿಲ್ಲ. ಆಯ್ಕೆಯಷ್ಟೇ ಅಲ್ಲ; ಹಲವು ಪಾಠಗಳನ್ನು ತಂಡದ ಸದಸ್ಯರೇ ಸಿದ್ಧಪಡಿಸಬೇಕಾಗಿ ಬಂತು. ಅವನ್ನು ಸಮಿತಿಯ ಸಭೆಯಲ್ಲಿರಿಸಿ ಒರೆಗೆ ಹಚ್ಚಿದೆವು. ಉಪ್ಪು, ಹುಳಿ, ಖಾರ ಹಚ್ಚಿ ತಿಕ್ಕಿದೆವು. ಕೊನೆಗೂ ಕಾಳಿಕೆ ಕಳೆದ ಅಪರಂಜಿಯಂತೆ ಹದಿನೇಳು ಪಾಠಗಳು ಮೈದಾಳಿ ನಿಂತವು.

ನಮ್ಮ ಪಠ್ಯದಲ್ಲಿ ಪ್ರಕೃತಿಯಿದೆ, ಪರಿಸರ ಸಂರಕ್ಷಣೆಯಿದೆ, ಶ್ರಮದಾನವಿದೆ, ಸಂಪರ್ಕ ಸಾಧ್ಯತೆಯಿದೆ, ತಿಳುವಳಿಕೆಯಿದೆ, ದೇಶಪ್ರೇಮವಿದೆ, ವಚನ ಪಾಲನೆಯಿದೆ, ತಾಳ್ಮೆಯ ಮಹತ್ವವಿದೆ, ಪುರಾಣದ ಅಭಿರುಚಿಯಿದೆ, ರೈತನ ದುಡಿಮೆಯಿದೆ, ಸತ್ಯದ ಮೌಲ್ಯವಿದೆ, ಕಲೆಯ ಸಿಂಚನವಿದೆ, ಸಾಹಸದ ಪ್ರದರ್ಶನವಿದೆ– ಹೀಗೆ ಹತ್ತಾರು ಬಗೆಯ ವಸ್ತುಗಳು ಪಠ್ಯ ಪುಸ್ತಕಕ್ಕೆ ಬಹುಮುಖೀ ಆಯಾಮವನ್ನು ಒದಗಿಸಿಕೊಟ್ಟಿವೆ.

ಐದನೆಯ ತರಗತಿಯೆಂದರೆ ಮಕ್ಕಳ ಮನಸ್ಸು ಭಾಷೆಗೆ ಸರಿಯಾಗಿ ತೆರೆದುಕೊಳ್ಳುವ ಕಾಲವೆಂಬುದು ನಮ್ಮ ನಂಬಿಕೆ. ಕನ್ನಡ ಪದಗಳು, ಕನ್ನಡ ವಾಕ್ಯಗಳು, ಒಟ್ಟಾರೆಯಾಗಿ ಕನ್ನಡಭಾಷೆ ಮಕ್ಕಳ ಮನಸ್ಸಿನಲ್ಲಿ ಅರಳುವ ಕಾಲ.

ಸೆಮಿಸ್ಟರ್ ಪದ್ಧತಿಗೆ ಅನುಗುಣವಾಗಿ, ಕ್ಷೇತ್ರ ಹಾಗೂ ಸಾಮರ್ಥ್ಯಕ್ಕೆ ಹೊಂದಿಕೊಳ್ಳುವಂತೆ ಮೊದಲ ಸೆಮಿಸ್ಟರ್‌ಗೆ ಎಂಟು ಪಾಠಗಳನ್ನೂ ಎರಡನೆಯ ಸೆಮಿಸ್ಟರ್‌ಗೆ ಒಂಬತ್ತು ಪಾಠಗಳನ್ನೂ ಆಯ್ದು ಹೊಂದಿಸಲಾಗಿದೆ. ಪ್ರತಿ ಸೆಮಿಸ್ಟರ್‌ಗೆ ತಲಾ ಮೂರರಂತೆ ಪದ್ಯ ಪಾಠಗಳನ್ನೂ ಐದು ಹಾಗೂ ಆರರಂತೆ ಗದ್ಯ ಪಾಠಗಳನ್ನೂ ಅಳವಡಿಸಿಕೊಳ್ಳಲಾಗಿದೆ.

ಅಂದ ಹಾಗೆ ಕ್ಷೇತ್ರ ಹಾಗೂ ಸಾಮರ್ಥ್ಯಗಳನ್ನು ಆಯಾಪಾಠದ ಪ್ರಾರಂಭದಲ್ಲಿ ನೀಡುವ ಕ್ರಮವಿತ್ತು. ಅದನ್ನು ಪಾಠದ ಬಳಿಕವೇ ನೀಡಬೇಕೆಂಬ ತೀರ್ಮಾನಕ್ಕೆ ಪಠ್ಯಪುಸ್ತಕ ಸಂಘ ಬಂದಿರುವುದರಿಂದ ಆ ತೀರ್ಮಾನವನ್ನು ಇಲ್ಲಿ ಗೌರವಿಸಲಾಗಿದೆ. ಸುದೀರ್ಘ ಚರ್ಚೆ ನಡೆದ ಬಳಿಕವೇ ಈ ತೀರ್ಮಾನವನ್ನು ಒಪ್ಪಿಕೊಳ್ಳಲಾಯಿತು.

ಮಕ್ಕಳ ಸಾಮರ್ಥ್ಯದ ಬೆಳವಣಿಗೆಯನ್ನು ಗಮನದಲ್ಲಿರಿಸಿಕೊಂಡು ಪಾಠಗಳು ಸರಳತೆಯಿಂದ ಕ್ಲಿಷ್ಟತೆಯ ಕಡೆಗೆ ಸಾಗುವಂತೆ ಎಚ್ಚರ ವಹಿಸಲಾಗಿದೆ.

ಆಯಾ ಪಾಠಕ್ಕೆ ಹೊಂದಿಕೊಳ್ಳುವಷ್ಟು ಹಾಗೂ ಮಕ್ಕಳ ಭಾಷಾ ಜ್ಞಾನದ ಮಟ್ಟ ವೃದ್ಧಿಸುವುದಕ್ಕೆ ಬೇಕಾಗುವಷ್ಟು ವ್ಯಾಕರಣವನ್ನೂ ಅಳವಡಿಸಲಾಗಿದೆ. ವ್ಯಾಕರಣ ಮಕ್ಕಳಿಗೆ ಹೊರೆಯಾಗದಂತೆ ಅತ್ಯಂತ ಸರಳ ಹಾಗೂ ಆಕರ್ಷಕ ರೂಪದಲ್ಲಿ ನೀಡಲಾಗಿದೆ. ಎರಡೂ ಸೆಮಿಸ್ಟರ್‌ಗಳಲ್ಲಿ ಮಕ್ಕಳು ಕಲಿಯಬೇಕಾದ ಹೊಸ ಪದಗಳು ಹಾಗೂ ಅವುಗಳ ಅರ್ಥಗಳು 'ಪದ ಖಜಾನೆ' ಎಂಬ ಶಿರೋನಾಮೆಯೊಂದಿಗೆ ಪಾಠಭಾಗದ ಅಂತ್ಯದಲ್ಲಿ ನೆಲೆಗೊಂಡಿವೆ. ಮೆಚ್ಚುಗೆಯಾಗಬಹುದೆಂಬ ಭರವಸೆ ನಮ್ಮದು. ಪ್ರತಿ ಪಾಠದ ಅಂತ್ಯದಲ್ಲಿ ಆಯಾ ಪಾಠದ ಸಾಮರ್ಥ್ಯಕ್ಕನುಗುಣವಾಗಿ ಪೂರಕ ಪಾಠಗಳನ್ನು ನೀಡಲಾಗಿದೆ. ಪೂರಕಪಾಠಗಳಿಗೆ ಸರಳ ಪ್ರಶ್ನೆಗಳನ್ನೂ ನೀಡಲಾಗಿದೆ. ಮಕ್ಕಳು ಪಾಠವನ್ನು ಓದಿ ಅಲ್ಲಿರುವ ಪ್ರಶ್ನೆಗಳಿಗೆ ತಮಗೆ ತಾವೇ ಉತ್ತರ ಕಂಡುಕೊಳ್ಳಬೇಕು. ಸರಳ ಕಥೆಗಳನ್ನೂ ಪದ್ಯಗಳನ್ನೂ ಓದುವ ಹವ್ಯಾಸಕ್ಕೆ ಮಕ್ಕಳನ್ನು ಹಚ್ಚುವ ಪ್ರಯತ್ನವಿದೆ. ಇದರ ಸರ್ವಾಂಗೀಣ ಸೊಬಗಿಗಾಗಿ ಪರಿಶ್ರಮಿಸಿದ ನಮ್ಮ ತಂಡದ ಎಲ್ಲ ಸದಸ್ಯರನ್ನು, ಪರಿಶೀಲಕರಾದ ಶ್ರೀ ಕಾ.ತ. ಚಿಕ್ಕಣ್ಣರವರನ್ನು ಹೃತ್ಪೂರ್ವಕ ಅಭಿವಂದಿಸುತ್ತೇನೆ.

ಈ ಕೈಂಕರ್ಯಕ್ಕೆ ನಮ್ಮನ್ನು ಹಚ್ಚಿದ ಕರ್ನಾಟಕ ಪಠ್ಯ ಪುಸ್ತಕ ಸಂಘದ ವ್ಯವಸ್ಥಾಪಕ ನಿರ್ದೇಶಕರಿಗೆ, ಉಪನಿರ್ದೇಶಕರಿಗೆ ಹಾಗೂ ಸಂಯೋಜಕರಾದ ಪ್ರೊ. ಜಿ.ಎಸ್. ಮುಡಂಬಡಿತ್ತಾಯರವರಿಗೆ, ಹಿರಿಯ ಸಹಾಯಕ ನಿರ್ದೇಶಕರಾದ ಶ್ರೀ ಪಾಂಡುರಂಗ ಇವರಿಗೆಲ್ಲ ನನ್ನ ಹಾಗೂ ನಮ್ಮ ತಂಡದ ಮನಃಪೂರ್ವಕ ವಂದನೆಗಳು.

ಡಾ. ನಾ. ದಾಮೋದರ ಶೆಟ್ಟಿ
ಅಧ್ಯಕ್ಷರು,
ಪಠ್ಯಪುಸ್ತಕ ರಚನಾ ಸಮಿತಿ,
ಐದನೆಯ ತರಗತಿ.

ಮೊದಲನೆಯ ಸೆಮಿಸ್ಟರ್ : ಪಾಠಾನುಕ್ರಮಣಿಕೆ

ಎರಡನೆಯ ಸೆಮಿಸ್ಟರ್ : ಪಾಠಾನುಕ್ರಮಣಿಕೆ



ಇನಾಮು ಪತ್ರ



ಬಯಲು ಸೀಮೆಯ ಒಂದು ಹಳ್ಳಿ ಮಾಣಿಕ್ಯವಳ್ಳಿ. ಬಯಲುಸೀಮೆ ಎಂಬ ಹೆಸರೇ ಸೂಚಿಸುವಂತೆ ಹೆಚ್ಚು ಬೆಟ್ಟ, ಗುಡ್ಡ, ಕಾಡುಗಳಿಲ್ಲದ ಬಯಲು ಬಯಲಾದ ಪ್ರದೇಶ. ವಾರ್ಷಿಕ ಮಳೆಯ ಪ್ರಮಾಣ ಕೂಡ ಕಡಿಮೆ. ಅಲ್ಲೊಂದು ಇಲ್ಲೊಂದು ಮರ ಬಿಟ್ಟರೆ ಸ್ವಾಭಾವಿಕವಾಗಿ ಸಸ್ಯವರ್ಗ ಬಹು ವಿರಳ. ಬೇಸಿಗೆಯಲ್ಲಿ ಕೆರೆ, ಹಳ್ಳಗಳು ಬತ್ತುವುದು ಸಾಮಾನ್ಯ. ಬಿಸಿಲಿನ ಝಳ ಬೇಸಿಗೆಯಲ್ಲಿ ಇಂತಹ ಕಡೆ ಜೋರಾಗಿರುತ್ತದೆ.

ಈ ಹಳ್ಳಿಯಲ್ಲಿ ನೂರಾರು ವರ್ಷಗಳ ಹಿಂದೆ ಈರಗೊಂಡ ಎಂಬ ಸಾಮಾನ್ಯ ರೈತನಿದ್ದ. ದುಡಿಮೆಯೇ ಜೀವನ ಎಂದು ತಿಳಿದು ಪ್ರತಿದಿನ ಹೊಲಕ್ಕೆ ಹೋಗುತ್ತಿದ್ದ. ಪ್ರತಿವರ್ಷ ಬೇಸಿಗೆಯಲ್ಲಿ ಅರವಟ್ಟಿಗೆ ಇಡುತ್ತಿದ್ದ. ಬಾಯಾರಿದವರಿಗೆ ಸ್ವಯಂ ಪ್ರೇರಿತರಾಗಿ ನೀರು, ಪಾನೀಯ ಕೊಡುವ ಸ್ಥಳವೇ ಅರವಟ್ಟಿಗೆ.

ಈರಗೊಂಡ ಪ್ರತಿದಿನ ಊರಿಂದ ನೀರನ್ನು ಹೊತ್ತುಕೊಂಡು ನಡೆದೇ ನಾಲ್ಕೈದು ಮೈಲು ದೂರದ



ಹೊಲಕ್ಕೆ ಬರುತ್ತಿದ್ದ. ಬಾವಿಯ ಆಳದಲ್ಲಿರುತ್ತಿದ್ದ ನೀರನ್ನು ಸೇದಿಯೇ ತರಬೇಕಾಗಿತ್ತು. ಈಗಿನ ಹಾಗೆ ನಳ, ಕೊಳವೆ ಬಾವಿ ಇರಲಿಲ್ಲ.

'ಸೇವೆಯೇ ಪುಣ್ಯದ ಕೆಲಸ' ಎಂದು ನಂಬಿದ್ದ ಈರಗೊಂಡ ಬಾಯಾರಿ ಬಂದವರಿಗೆ ನೀರು ಕೊಡುತ್ತಿದ್ದ. ಪ್ರತಿವರ್ಷ ಬೇಸಿಗೆಯಲ್ಲಿ ಇದನ್ನು ಶ್ರದ್ಧೆಯಿಂದ ಮಾಡುತ್ತಿದ್ದ ಹಾಗೂ ಕೃಷಿಯನ್ನು ನಂಬಿಕೊಂಡು ಜೀವನ ಸಾಗಿಸುತ್ತಿದ್ದ.

ಅದು ರಾಜರ ಆಡಳಿತದ ಕಾಲ. ಒಂದು ದಿನ ರಾಜನು ಕುದುರೆ ಏರಿ ಹೋಗುತ್ತಿದ್ದಾಗ ಬಿಸಿಲಿನ ತಾಪದಿಂದ ಅವನಿಗೆ ಬಾಯಾರಿಕೆ ಆಯಿತು. ಅವನ ಹತ್ತಿರ ಕುಡಿಯಲು ನೀರು ಇರಲಿಲ್ಲ. ಆಕಡೆ ಈಕಡೆ ಎಲ್ಲಿಯಾದರು ನೀರು ಸಿಕ್ಕೀತೇ? ಎಂದು ನೋಡುತ್ತಲೇ ಪ್ರಯಾಣ ಮುಂದುವರೆಸಿದ. ಎಲ್ಲೂ ನೀರು ಸಿಗಲಿಲ್ಲ. ರಣಗುಡುವ ಮಧ್ಯಾಹ್ನದ ಆ ಬಿಸಿಲಿಗೆ ಪೈರುಗಳಿಲ್ಲದ ಹೊಲಗಳಲ್ಲಿ ಯಾರು ತಾನೆ ಕಣ್ಣಿಗೆ ಬಿದ್ದಾರು? ಮುಂದೆ ಹೋದಂತೆ ದಾಹ ಮತ್ತಷ್ಟು ಹೆಚ್ಚಾಯಿತು. ಅತ್ತ ಇತ್ತ ನೋಡುತ್ತ ಕಷ್ಟಪಟ್ಟು ಮುಂದುವರಿದ.

ಅನತಿ ದೂರದಲ್ಲಿ ದೊಡ್ಡ ಬೇವಿನ ಮರವೊಂದು ಕಾಣಿಸಿತು. ಅದರ ಕೆಳಗೆ ವ್ಯಕ್ತಿಯೊಬ್ಬ ಕಂಡ. ರಾಜನಿಗೆ ನೀರು ಸಿಗಬಹುದೆಂಬ ಆಸೆ ಇಮ್ಮಡಿಸಿತು. ಆತನ ಬಳಿಗೆ ಹೋಗಿ, 'ಏನಪ್ಪಾ, ಕುಡಿಯಲು ನೀರು ಸಿಗಬಹುದಾ?' ಎಂದು ಕೇಳಿದ. ರಾಜನನ್ನು ನೋಡಿ ಈರಗೊಂಡ, 'ಬನ್ನಿ, ಮಹಾಪ್ರಭುಗಳೆ, ತಣ್ಣನೆಯ ನೀರು ಇದೆ, ದಣಿದ ಹಾಗೆ ಕಾಣುತ್ತೀರಿ. ಬನ್ನಿ ಕುಳಿತುಕೊಳ್ಳಿ' ಎನ್ನುತ್ತ ಗೋಣಿಚೀಲ ಹಾಸಿದ. ಬೇಸಿಗೆ ದಿವಸದಲ್ಲಿ ಬೇವಿನ ಮರದ ತಂಪು ನೆರಳು ರಾಜನಿಗೆ ಕೊಂಚ ಹಿತ ನೀಡಿತು. ಈರಗೊಂಡನು ಮಣ್ಣಿನ ಹರವಿಯಿಂದ ತಣ್ಣನೆಯ ನೀರು ತೆಗೆದು ಕೊಟ್ಟ. ರಾಜನು ಗಟಗಟನೆ ನೀರು ಕುಡಿದ. ದೇಹದಲ್ಲಿ ತಣ್ಣನೆ ಮಿಂಚು ಸಂಚರಿಸಿದಂತಾಗಿ ಹೊಟ್ಟೆ, ತಲೆ ಎಲ್ಲಾ ತಂಪಾದವು. ರಾಜನ ಮನಸ್ಸು ಮುದಗೊಂಡಿತು. ಪ್ರೀತಿಯಿಂದ, ಆದರಾತಿಥ್ಯದಿಂದ ಉಪಚರಿಸಿದ ಈರಗೊಂಡನ ಹೆಸರು, ಊರು ಎಲ್ಲವನ್ನು ರಾಜ ಕೇಳಿ ತಿಳಿದ. ನೀರಿನ ಹರವಿ ನೋಡುತ್ತ, 'ಇಷ್ಟೊಂದು ನೀರು ಹೇಗೆ ತಂದಿ? ಒಬ್ಬನೆ ಇದ್ದಿ' ಎಂದ.

ಈರಗೊಂಡ ತನ್ನ ಕೆಲಸದ ಎಲ್ಲ ವಿವರ ಕೊಟ್ಟ: 'ಸ್ವಾಮಿ, ನೀರು ಕೊಡೋದು ಪುಣ್ಯದ ಕೆಲಸ. ರಟ್ಟೆಯಲ್ಲಿ ಬಲ ಇರೋತನಕ ಇದನ್ನು ಮುಂದುವರಿಸಬೇಕು ಎಂದುಕೊಂಡಿದ್ದೇನೆ. ಜನಸೇವೆಯೇ ಜನಾರ್ದನ ಸೇವೆ ಅಂತ ನಂಬಿಕೊಂಡು ಅರವಟ್ಟಿಗೆ ಇಟ್ಟಿದ್ದೇನೆ' ಎಂದ. ರಾಜನ ಕಣ್ಣು, ಹೃದಯ ತುಂಬಿ ಬಂದವು. 'ಓಹ್, ಎಂತಹ ಅದ್ಭುತ ಸೇವೆ!' ತನ್ನಷ್ಟಕ್ಕೆ ತಾನೆ ಉದ್ಗಾರ ತೆಗೆದ.

'ಏನಪ್ಪಾ, ನಿನ್ನ ರೆಟ್ಟೆಯಲ್ಲಿ, ಕಾಲಲ್ಲಿ ಇನ್ನೂ ಸಾಕಷ್ಟು ಶಕ್ತಿ ಇದೆ, ಅಲ್ಲವೆ?' ಎಂದ ರಾಜ. ಮುಗ್ಧಭಾವದಿಂದ ಈರಗೊಂಡ, 'ಹಾಗೇನಿಲ್ಲ ಪ್ರಭು, ಸ್ವಲ್ಪ ಶಕ್ತಿಯನ್ನು ಆ ದೇವ್ರು ಇನ್ನೂ ಕೊಟ್ಟಿದ್ದಾನೆ' ಎಂದ.

'ಹಾಗಾದರೆ ನನ್ನ ಕುದುರೆ ಜೊತೆಜೊತೆ ದಣಿವಾಗುವ ತನಕ ಓಡು' ಎಂದ ರಾಜ. ಏನೂ ಗೊತ್ತಾಗದೆ ಈರಗೊಂಡ ಮೂಕವಿಸ್ಮಿತನಾದ.

'ಶಕ್ತಿ ಇದೆ ಅಂದೆಯಲ್ಲ; ಓಡು ಮತ್ತೆ. ನಿನ್ನ ಕಾಲು ಸೋತಾಗ ನಿಲ್ಲು. ನನ್ನದೇನೂ ತಕರಾರು ಇಲ್ಲ' ಎಂದ ರಾಜ.

ಏನೋ, ರಾಜ ತನ್ನನ್ನು ಪರೀಕ್ಷೆ ಮಾಡುವ ಹಾಗೆ ಕಾಣುತ್ತದೆ. ಅವರಿಗೆ ಬೇಸರ ಮಾಡಬಾರದು ಅಂತ ಈರಗೊಂಡ ಕುದುರೆ ಜೊತೆಜೊತೆ ಸುಮಾರು ಮೂರು ಮೈಲಿನಷ್ಟು ಓಡಿದ. ಆಯಾಸಗೊಂಡು, 'ಸಾಕು ಮಹಾರಾಜರೆ' ಎಂದು ನಿಂತ.





ರಾಜನು ಕುದುರೆ ನಿಲ್ಲಿಸಿ ಕೆಳಗಿಳಿದ.

ರಾಜನು ಈರಗೊಂಡನ ಬೆನ್ನು ಸವರಿ, 'ಶಹಬ್ಬಾಸ್' ಎಂದ.

'ನೀನು ನನ್ನ ಬಾಯಾರಿಕೆ ನೀಗಿಸಿದ್ದೀಯ. ಮನಸ್ಸಿಗೆ ಮುದ ನೀಡಿದ್ದೀಯ. ನಿನ್ನ ಅಳಿಲುಸೇವೆ ಕಂಡು ಸಂತೋಷವಾಗಿದೆ. ಅದಕ್ಕಾಗಿ ನೀನು ಈಗ ಓಡಿದಷ್ಟು ದೂರದ ಜಮೀನು ನಿನ್ನ ಹೆಸರಿಗೆ ಇನಾಮು ಮಾಡಿಸುವ ಮನಸ್ಸಾಗಿದೆ' ಎಂದ. ಈರಗೊಂಡನಿಗೆ ಏನೂ ಹೇಳಲು ತೋಚಲಿಲ್ಲ. ಒಂದು ಕ್ಷಣ ಮೌನವಾದ.

'ಆಯ್ತು ಸಂತೋಷವಾಗಿರು' ಎಂದು ಹೇಳಿ ರಾಜ ಹೊರಟುಹೋದ. ಮರುದಿನವೇ ಈರಗೊಂಡನ ಕೈಸೇರಿತು ಇನಾಮು ಪತ್ರ!

ಕ್ಷೇತ್ರ	:	ಮಾತನಾಡುವುದು.
ಸಾಮರ್ಥ್ಯ	:	ಪರಿಚಿತ ವಿಷಯಗಳ ಬಗ್ಗೆ ನಿರರ್ಗಳ ಮತ್ತು ಸಹಜವಾಗಿ ಮಾತನಾಡುವುದು.

ಆಶಯ

ನಿಸ್ವಾರ್ಥ ಸೇವೆ ನೀಡುವ ಸಂತೋಷವನ್ನು ಅಳತೆ ಮಾಡಲು ಸಾಧ್ಯವೆ? ಸೇವೆ ಬದುಕಿನ ಪ್ರಮುಖ ಮೌಲ್ಯವಾಗಿದೆ. ಇದು ಭಾರತೀಯ ಸಂಸ್ಕೃತಿಯಲ್ಲಿ ಹಾಸು ಹೊಕ್ಕಾಗಿದೆ. ಗಾಂಧೀಜಿಯವರು ಸೇವೆಗೆ ಬಹುದೊಡ್ಡ ಮೌಲ್ಯ ತಂದು ಕೊಟ್ಟಿದ್ದಾರೆ. ಸೇವೆ ನಮ್ಮ ಗೌರವವನ್ನು ಹೆಚ್ಚಿಸುತ್ತದೆ. ಸೇವಾ ಮನೋಭಾವ ಬೆಳೆದಷ್ಟು ದೇಶ ನೈತಿಕವಾಗಿ ಸದೃಢವಾಗುತ್ತದೆ.

ಲೇಖಕರ ಪರಿಚಯ



ಪ್ರೊ| ಸಂಗಮೇಶ ಮಲ್ಲಪ್ಪ ಗುಜಗೊಂಡರವರು ೦೨.೦೮.೬೪ ರಂದು ವಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲೂಕಿನ ಮನಗೂಳಿ ಗ್ರಾಮದಲ್ಲಿ ಜನಿಸಿದರು. ಚಿನ್ನದ ಪದಕದೊಂದಿಗೆ ಸ್ನಾತಕೋತ್ತರ ಪದವಿ ಪಡೆದಿರುವ ಇವರು ಬೆಳಗಾವಿ ಜಿಲ್ಲೆಯ ಮೂಡಲಗಿ ಶಿಕ್ಷಣ ಸಂಸ್ಥೆಯ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಭೂಗೋಳಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಮಕ್ಕಳ ಸಾಹಿತ್ಯ ಚಟುವಟಿಕೆಗಳಲ್ಲಿ ನಿರಂತರ ತೊಡಗಿಕೊಂಡವರು. ಕನ್ನಡ ಪುಸ್ತಕ ಪ್ರಾಧಿಕಾರವು ಇವರ 'ಅಮ್ಮಾ ಕೇಳೆ' ಸಂಕಲನಕ್ಕೆ ಪ್ರಶಸ್ತಿಯಿತ್ತು ಗೌರವಿಸಿದೆ. ಪ್ರಸ್ತುತ ಕತೆಯನ್ನು ಪ್ರೊ| ಗುಜಗೊಂಡ ಅವರ 'ನೂರು ನಾಣ್ಯ ಮೂರು ಮಾತು' ಎಂಬ ಸಂಕಲನದಿಂದ ಆಯ್ಕೆ ಮಾಡಲಾಗಿದೆ.



ಅ. ಅರ್ಥ ತಿಳಿಯಿರಿ.

ಝಳ–ಬಿಸಿಲಿನ ತಾಪ, ಬೇಗೆ. ಜೋರು–ಅಧಿಕ, ಹೆಚ್ಚು, ಸ್ವಯಂಪ್ರೇರಿತ–ಸ್ವ ಇಚ್ಛೆಯಿಂದ, ತನಗೆ ತಾನೇ ಪ್ರೇರಣೆಗೊಂಡು. ಸೇದು–ಜಗ್ಗು, ಮೇಲೆತ್ತು. ಶ್ರದ್ಧೆ–ನಿಷ್ಠೆ, ತನ್ಮಯತೆ, ಮನಃತೃಪ್ತಿ–ಮನಸ್ಸಿಗೆ ಸಂತೋಷ, ಮನಸ್ಸಿಗೆ ಹಿತ. ರಣಗುಡುವ–ಬಿಸಿಯೇರಿರುವ, ಬೇಗೆಯಿಂದ ಕೂಡಿರುವ. ಪೈರು–ಬೆಳೆ, ಫಸಲು. ದಾಹ–ನೀರಡಿಕೆ, ಬಾಯಾರಿಕೆ. ತಕರಾರು–ತಗಾದೆ, ಅಡೆತಡೆ, ಬತ್ತು–ಇಂಗಿಹೋಗು, ಒಣಗು. ಅನತಿ–ಸ್ವಲ್ಪ, ತುಸು. ಇಮ್ಮಡಿಸು–ಎರಡರಷ್ಟಾಗು, ಹೆಚ್ಚಾಗು. ಸಂಚರಿಸು–ಹರಿದಾಡು, ಚಲಿಸು. ಮುದ– ಹಿತ, ಆನಂದ. ಅದ್ಭುತ–ಆಶ್ಚರ್ಯ, ಸೋಜಿಗ. ತೋಚು–ಕಾಣು, ಹೊಳೆಯು. ಇನಾಮು–ಬಹುಮಾನ, ಉಡುಗೊರೆ.

ಆ. ವಿವರ ತಿಳಿಯಿರಿ.

ಬಯಲು ಸೀಮೆ	:	ಬೆಟ್ಟಗುಡ್ಡಗಳಿಲ್ಲದ ಭೂಪ್ರದೇಶ
ಮುಗ್ಧಭಾವ	:	ಕಲ್ಮಷವಿಲ್ಲದ ಭಾವನೆ, ಶುದ್ಧ ಮನಸ್ಸು.
ಅರವಟ್ಟಿಗೆ	:	ನೀರು, ಪಾನಕ, ನೀರುಮಜ್ಜಿಗೆ ಮುಂತಾದ ಪಾನೀಯಗಳನ್ನು ದಾರಿಹೋಕರಿಗೆ ಉಚಿತವಾಗಿ ಕೊಡುವ ತಾತ್ಕಾಲಿಕ ಸ್ಥಳ.
ಅಳಿಲುಸೇವೆ	:	ಸಣ್ಣ ಮಟ್ಟದಲ್ಲಾದರೂ ಸೇವೆ ಸಲ್ಲಿಸುವುದು.
ಹರವಿ	:	ನೀರು ತುಂಬಿಸಿಡುವ ಗೋಲಾಕಾರದ ಮಣ್ಣಿನ ಪಾತ್ರೆ. ಇದರಲ್ಲಿ ತುಂಬಿಸಿಟ್ಟ ನೀರು ತಣ್ಣಗಿರುತ್ತದೆ.
ಮೂಕವಿಸ್ಮಿತ	:	ಅತ್ಯಾಶ್ಚರ್ಯದಿಂದ ಮಾತುಬಾರದಂತಾಗುವುದು.
ಮೈಲು	:	೧.೬ ಕಿಲೋಮೀಟರ್ ದೂರ

ಇ. ಕೆಳಗಿನ ಪ್ರಶ್ನೆಗಳಿಗೆ ಉತ್ತರ ಹೇಳಿರಿ.

೧. ಈರಗೊಂಡನ ಊರಿನ ಹೆಸರೇನು?

೨. ಈರಗೊಂಡನು ಪ್ರತಿವರ್ಷ ಬೇಸಿಗೆಯಲ್ಲಿ ಏನು ಮಾಡುತ್ತಿದ್ದನು?

೩. ರಾಜನಿಗೆ ಬಿಸಿಲಿನ ತಾಪದಿಂದ ಏನಾಗಿತ್ತು?

೪. ಈರಗೊಂಡ ಕುದುರೆ ಜೊತೆಗೆ ಎಷ್ಟು ಮೈಲಿ ಓಡಿದನು?

೫. ಈರಗೊಂಡನ ಸೇವೆಯನ್ನು ಕಂಡು ಅರಸನು ಏನನ್ನು ಕೊಟ್ಟನು?



ವ್ಯಾಕರಣ ಮಾಹಿತಿ

ಅ. ವರ್ಣಮಾಲೆ

ಕನ್ನಡದಲ್ಲಿ ಒಟ್ಟು ೪೯ ಅಕ್ಷರಗಳಿವೆ. ಇವುಗಳನ್ನು ವರ್ಣಗಳೆಂದು ಕರೆಯುತ್ತಾರೆ. ಈ ಅಕ್ಷರಗಳ ಕ್ರಮಬದ್ಧ ಜೋಡಣೆಗೆ 'ವರ್ಣಮಾಲೆ' ಅಥವಾ 'ಅಕ್ಷರಮಾಲೆ' ಎಂದು ಹೆಸರು.

ವರ್ಣಮಾಲೆಯಲ್ಲಿ ಮೂರು ವಿಧಗಳು

ಅ) ಸ್ವರಾಕ್ಷರಗಳು

ಆ) ವ್ಯಂಜನಾಕ್ಷರಗಳು

ಇ) ಯೋಗವಾಹಗಳು

ಆ. ಸ್ವರಾಕ್ಷರಗಳು

ಸ್ವತಂತ್ರವಾಗಿ ಉಚ್ಚರಿಸಲಾಗುವ ಅಕ್ಷರಗಳು ಸ್ವರಾಕ್ಷರಗಳು.

ಒಟ್ಟು ಸ್ವರಾಕ್ಷರಗಳು ೧೩

ಸ್ವರಾಕ್ಷರಗಳಲ್ಲಿ ಎರಡು ವಿಧ   ೧) ಹ್ರಸ್ವಸ್ವರಗಳು   ೨) ದೀರ್ಘಸ್ವರಗಳು

೧). ಹ್ರಸ್ವಸ್ವರ – ಒಂದು ಮಾತ್ರಾ ಕಾಲದಲ್ಲಿ ಉಚ್ಚರಿಸಲಾಗುವ (ಅ,ಇ,ಉ,ಋ,ಎ,ಒ) ಅಕ್ಷರಗಳು ಹ್ರಸ್ವಸ್ವರಗಳು.

೨). ದೀರ್ಘಸ್ವರ– ಎರಡು ಮಾತ್ರಾ ಕಾಲದಲ್ಲಿ ಉಚ್ಚರಿಸಲಾಗುವ (ಆ,ಈ,ಊ,ಏ,ಐ,ಓ,ಔ) ಅಕ್ಷರಗಳು ದೀರ್ಘಸ್ವರಗಳು.

ಇ. ವ್ಯಂಜನಾಕ್ಷರಗಳು

ಸ್ವರಾಕ್ಷರಗಳ ಸಹಾಯದಿಂದ ಉಚ್ಚರಿಸಲಾಗುವ ಅಕ್ಷರಗಳು ವ್ಯಂಜನಾಕ್ಷರಗಳು.

(ಉದಾ : ಕ್+ಅ=ಕ ; ಚ್+ಅ=ಚ) ಒಟ್ಟು ವ್ಯಂಜನಾಕ್ಷರಗಳು–೩೪.

ವ್ಯಂಜನಾಕ್ಷರಗಳಲ್ಲಿ ಎರಡು ವಿಧ : ವರ್ಗೀಯ ವ್ಯಂಜನ ಮತ್ತು ಅವರ್ಗೀಯ ವ್ಯಂಜನ



೧. ವರ್ಗೀಯ ವ್ಯಂಜನ ಕೋಷ್ಟಕಗಳು

'ಕ್'ವರ್ಗ	ಕ್	ಖ್	ಗ್	ಘ್	ಙ್	೫
'ಚ್'ವರ್ಗ	ಚ್	ಛ್	ಜ್	ಝ್	ಞ್	೫
'ಟ್'ವರ್ಗ	ಟ್	ಠ್	ಡ್	ಢ್	ಣ್	೫
'ತ್'ವರ್ಗ	ತ್	ಥ್	ದ್	ಧ್	ನ್	೫
'ಪ್'ವರ್ಗ	ಪ್	ಫ್	ಬ್	ಭ್	ಮ್	೫
				ಒಟ್ಟು		೨೫

ಅಲ್ಪಪ್ರಾಣ : ಕಡಿಮೆ ಉಸಿರು ಕೊಟ್ಟು ಉಚ್ಚರಿಸಲಾಗುವ ವ್ಯಂಜನಗಳು ಅಲ್ಪಪ್ರಾಣಾಕ್ಷರಗಳು.

ಉದಾ: ಕ್, ಚ್, ಟ್, ತ್, ಪ್.   ಗ್, ಜ್, ಡ್, ದ್, ಬ್.

ಮಹಾಪ್ರಾಣ : ಹೆಚ್ಚು ಉಸಿರುಕೊಟ್ಟು ಉಚ್ಚರಿಸಲಾಗುವ ವ್ಯಂಜನಗಳು ಮಹಾಪ್ರಾಣಾಕ್ಷರಗಳು. ಉದಾ: ಖ್, ಛ್, ಠ್, ಥ್, ಫ್.   ಘ್, ಝ್, ಢ್, ಧ್, ಭ್.

ಅನುನಾಸಿಕಾಕ್ಷರಗಳು : ಪ್ರತಿ ವರ್ಗದ ಕೊನೆಯ ಅಕ್ಷರಗಳು. ಮೂಗಿನ ಸಹಾಯದಿಂದ ಉಚ್ಚರಿಸಲ್ಪಡುತ್ತವೆ. ಇವುಗಳನ್ನು ಅನುನಾಸಿಕಾಕ್ಷರಗಳು.

ಉದಾ : ಙ್, ಞ್, ಣ್, ನ್, ಮ್.

೨. ಅವರ್ಗೀಯ ವ್ಯಂಜನಗಳು

'ಯ್'ಕಾರ ದಿಂದ 'ಳ್' ಕಾರದವರೆಗಿನ ೯ ಅಕ್ಷರಗಳು ಅವರ್ಗೀಯ ವ್ಯಂಜನಗಳು.

ಯ್, ರ್, ಲ್, ವ್, ಶ್, ಷ್, ಸ್, ಹ್, ಳ್

ಇವು ಪ್ರತಿಯೊಂದೂ ಬೇರೆ ಬೇರೆ ಜಾತಿಯ ಅಕ್ಷರಗಳಾಗಿರುವುದರಿಂದ ಇವುಗಳನ್ನು ನಿರ್ದಿಷ್ಟವಾದ ವರ್ಗಗಳಲ್ಲಿ ಸೇರಿಸಿ ಹೇಳಲು ಬರುವುದಿಲ್ಲ.



ಈ. ಯೋಗವಾಹಗಳು :

'ಯೋಗವಾಹ' ಎಂದರೆ 'ಜೊತೆಗೂಡಿ ಹೋಗು' ಎಂದು ಅರ್ಥ. ಇವು ಯಾವುದಾದರೂ ಒಂದು ಅಕ್ಷರದ ಜೊತೆಗೆ ಕೂಡಿಕೊಂಡರೆ ಮಾತ್ರ ಉಚ್ಚರಿಸಲು ಸಾಧ್ಯವಾಗುವಂಥವುಗಳು.

ಯೋಗವಾಹಗಳು

- ಅನುಸ್ವಾರ– ೦
- ವಿಸರ್ಗ– ಃ

ಉದಾ : ಸಿಂಹ ದುಃಖ

ಉ. ಓದಿಗೆ ಮನ್ನಣೆ

೧) ಗ್ರಂಥಾಲಯದಲ್ಲಿ ದೊರಕುವ ಪರಿಚಿತ ವಿಷಯಗಳ ಕುರಿತ ಕಥೆಗಳನ್ನು ಓದಿರಿ.

೨) ಕರ್ನಾಟಕ ಸರಕಾರ ಕೊಡುವ ವಿವಿಧ ಪ್ರಶಸ್ತಿಗಳನ್ನು ಕುರಿತ ವಿವರಗಳನ್ನು ಸಂಗ್ರಹಿಸಿ ಓದಿರಿ.

ಉದಾ:– ರಾಜ್ಯೋತ್ಸವ ಪ್ರಶಸ್ತಿ, ಪಂಪ ಪ್ರಶಸ್ತಿ ಇತ್ಯಾದಿ.

ಊ. ಶುಭ ನುಡಿ

೧. ಸದ್ಗುಣಗಳಿರುವಲ್ಲಿ ಸದ್ಗತಿಯಿದೆ.

೨. ನಿಸ್ವಾರ್ಥ ಸೇವೆಗೆ ಅಗ್ರಪೂಜೆ.

೩. ಪರೋಪಕಾರವೇ ಪರಮಶ್ರೇಷ್ಠ ಗುಣ.

ಪೂರಕ ಪಾಠ : ಕಾಮನ ಬಿಲ್ಲು

ರವಿಯುದೊ ಹೊರಟನು ಪಡುವಣಕೆ
ತಾಯಿಯ ಮನೆಯನು ಸೇರಲಿಕೆ
ಸಂಜೆಯ ಹೊತ್ತಿನ ಹೂಬಿಸಿಲು
ಕಣ್ಣಿಗೆ ಹಿಗ್ಗಿನ ಅಂದದ ಹೊನಲು
ಬಿಳಿತೆರೆ ಮೋಡದ ಅಂಚಿನಲಿ
ಹನಿಮಳೆ ಬೀಳುವ ಹೊತ್ತಿನಲಿ
ತುಂತುರು ಹನಿಗಳು ಬೀಳುತಿವೆ
ಕಾಮನ ಬಿಲ್ಲನು ಮೂಡಿಸಿವೆ
ಕಾಮನ ಬಿಲ್ಲನು ನೋಡಲ್ಲಿ
ಮಣಿದಿಹ ಬಿಲ್ಲದು ಮುಗಿಲಲ್ಲಿ
ಕಿತ್ತಳೆ ಕೇಸರಿ ಹಳದಿ ಕೆಂಪು
ನೀಲಿ ಕಂದು ನೇರಿಳೆ ತಂಪು
ನೆಲಕೂ ಮುಗಿಲಿಗೂ ಮುಟ್ಟಿಹುದು
ಕಣ್ಣಿಗೆ ಹಬ್ಬವ ತಂದಿಹುದು
ಸೂರ್ಯನು ಮುಳುಗಿದ ಕತ್ತಲು ಬಂದಿತು
ಮೋಡವು ಚದುರಿತು ಮಳೆಯೂ ನಿಂತಿತು
ಮರೆಯಲಿ ಓಡಿತು ಕಾಮನ ಬಿಲ್ಲು
ಕಾಣದಾಯಿತು ಮಾಯದ ಬಿಲ್ಲು



– ನಿಂಗಣ್ಣ ಕುಂಟಿ

ಪ್ರಶ್ನೆಗಳು:

೧) ರವಿಯು ಯಾವ ದಿಕ್ಕಿಗೆ ಹೊರಟನು?

೨) ಕಾಮನಬಿಲ್ಲು ಎಲ್ಲಿಂದ ಎಲ್ಲಿಯವರೆಗೆ ಆವರಿಸಿದೆ?


೩) ಕಾಮನ ಬಿಲ್ಲಿನಲ್ಲಿರುವ ಬಣ್ಣಗಳನ್ನು ಹೆಸರಿಸಿರಿ.

೪) ಕಾಮನಬಿಲ್ಲು ಯಾವಾಗ ಮರೆಯಾಯಿತು?

೫) ಕಾಮನಬಿಲ್ಲು ಯಾವಾಗ ಮೂಡುತ್ತದೆ?

೨

ನದಿಯ ಅಳಲು



[ಶಾಲಾ ಮಕ್ಕಳು ಗುಂಪುಗುಂಪಾಗಿ ಸೇರಿದ್ದಾರೆ. ಎಲ್ಲರ ಮುಖದಲ್ಲೂ ಆತಂಕ. ಆಸ್ಪತ್ರೆಯಲ್ಲಿ ದಾಖಲಾಗಿರುವ ಸಹಪಾಠಿಗಳ ಆರೋಗ್ಯವನ್ನು ತಿಳಿಯುವ ತವಕ. ಮಕ್ಕಳು ತಮ್ಮ ತಮ್ಮಲ್ಲಿಯೇ ಸಂಭಾಷಿಸುತ್ತಿದ್ದಾರೆ.]

ಕಲಾವತಿ : ಎಂಥ ಅನಾಹುತ ನಡೆದುಹೋಯಿತು! ಭರತ್ ಮತ್ತು ಶಂಕರನಿಗೆ ಹೀಗೆ ಆಗಬಾರದಿತ್ತು.

ಸ್ನೇಹ : ಅವರಿಗೆ ಏನಾಯಿತು?

ಮನು : ಅಯ್ಯೋ! ನಿನಗೆ ತಿಳಿದಿಲ್ಲವೆ? ಭರತ್ ಮತ್ತು ಶಂಕರ ಇಬ್ಬರೂ ಆಸ್ಪತ್ರೆಗೆ ದಾಖಲಾಗಿದ್ದಾರೆ.

ಶಾಂತಲೆ : ಆಸ್ಪತ್ರೆಗೆ ದಾಖಲಾಗಲು ಅವರಿಗೆ ಏನಾಗಿತ್ತು?



ಸಲೀಮುಲ್ಲಾ : ನಿನ್ನೆ ಭಾನುವಾರ ಶಾಲೆಗೆ ರಜೆ ಇತ್ತಲ್ಲವೆ? ಇವರಿಬ್ಬರೂ ಬೆಳಗ್ಗೆ ಆಟವಾಡಲು ಹೋಗಿದ್ದರು. ಮಧ್ಯಾಹ್ನದವರೆಗೂ ಆಟವಾಡಿ ಅನಂತರ ಸೆಕೆಯನ್ನು ತಾಳಲಾರದೆ ಊರಿನ ಪಕ್ಕದ ನದಿಯಲ್ಲಿ ಸ್ನಾನ ಮಾಡಿದ್ದರು. ಪರಿಣಾಮವಾಗಿ ಅವರ ಮೈಮೇಲೆಲ್ಲಾ ದಪ್ಪ ದಪ್ಪ ಗುಳ್ಳೆಗಳು ಎದ್ದು ವಿಪರೀತ ತುರಿಕೆ ಪ್ರಾರಂಭವಾಯಿತು. ನೋವು ತಾಳಲಾರದೆ ದಂಡೆಯಲ್ಲಿ ಬಿದ್ದು ಹೊರಳಾಡಿದರು. ಯಾರೋ ದಾರಿಹೋಕರು ನರಳಾಟ ಕಂಡು ಇಬ್ಬರನ್ನೂ ಎತ್ತಿಕೊಂಡು ಹೋಗಿ ಆಸ್ಪತ್ರೆಗೆ ಸೇರಿಸಿದರು. ಅವರ ಆರೋಗ್ಯ ತೀರ ಹದಗೆಟ್ಟಿತ್ತು.

(ಮಕ್ಕಳು ಆಸ್ಪತ್ರೆಗೆ ಬರುತ್ತಾರೆ. ವೈದ್ಯರು ಪರೀಕ್ಷಾ ಕೊಠಡಿಯಿಂದ ಹೊರಬರುತ್ತಾರೆ.)

ದಿಲೀಪ್ : ನಮ್ಮ ಗೆಳೆಯರ ಸ್ಥಿತಿ ಹೇಗಿದೆ ಡಾಕ್ಟರ್?

ವೈದ್ಯರು : ಇನ್ನೂ ಏನನ್ನು ಹೇಳುವಂತಿಲ್ಲ ಮಕ್ಕಳೆ! ಆದರೆ ಚಿಂತೆಗೆ ಕಾರಣವಿಲ್ಲ ಅಂತ ತೋರುತ್ತದೆ.

ರಮ್ಯ : ಇಬ್ಬರಿಗೂ ಏನಾಗಿತ್ತು ಡಾಕ್ಟರ್?

ವೈದ್ಯರು : ಅವರಿಗೆ ನದಿಯ ನೀರಿನ ಮಾಲಿನ್ಯದ ಸೋಂಕು ತಗುಲಿದೆ. ಪರಿಣಾಮವಾಗಿ ಇಡೀ ದೇಹದಲ್ಲಿ ಗುಳ್ಳೆಗಳೆದ್ದಿವೆ. ತುರಿಕೆ ತಡೆಯದೆ ಮೂರ್ಛೆ ಹೋಗಿದ್ದಾರೆ.

ದೀಪಕ್ : ಅವರ ಜೀವಕ್ಕೆ ಏನೂ ಅಪಾಯವಿಲ್ಲ ತಾನೆ ?

ವೈದ್ಯರು : ಚಿಂತಿಸಬೇಡಿ ಮಕ್ಕಳೆ, ಸಕಾಲದಲ್ಲಿ ಆಸ್ಪತ್ರೆಗೆ ಬಂದಕಾರಣ ಸೂಕ್ತ ಚಿಕಿತ್ಸೆ ನೀಡಿದ್ದೇನೆ.

ರೀಟಾ : ನಾವು ಅವರನ್ನು ನೋಡಬಹುದೇ?

ವೈದ್ಯರು : ಈಗ ಬೇಡ ಮಕ್ಕಳೆ, ಸಂಜೆ ಬನ್ನಿ.

(ವೈದ್ಯರು ಹೇಳಿದ ಮಾತುಗಳನ್ನು ಕೇಳಿದ ಮಕ್ಕಳು ನದಿಯ ದಂಡೆಗೆ ಬರುತ್ತಾರೆ.)

ಭವಾನಿ : ಈ ನದಿಯ ನೀರು ಎಷ್ಟೊಂದು ಕೊಳಕಾಗಿದೆ?

ಮಮತ : ಅಬ್ಬಾ! ಈ ಕೆಟ್ಟ ನೀರಿಗೆ ಇವರೇಕೆ ಇಳಿದರು?

ಸುಜಾತ : ಸೆಕೆ ತಡೆಯಲು ಆಗಲಿಲ್ಲವೋ ಏನೊ!

ಅಮಿತ್ : ಇದು ಮಲಿನಗೊಂಡ ನದಿ. ಇಂತಹ ನದಿಗಳು ಜೀವ ಸಂಕುಲಕ್ಕೆ ಅಪಾಯಕಾರಿ.





(ಮಕ್ಕಳೆಲ್ಲರು ನದಿಯ ಬಗ್ಗೆ ತಾತ್ಸಾರವಾಗಿ ಮಾತನಾಡುತ್ತ ಹೀಯಾಳಿಸತೊಡಗುತ್ತಾರೆ.) [ಇದ್ದಕ್ಕಿದ್ದಂತೆ ಕೊಳೆ, ಕೆಸರಿನಿಂದ ಕೂಡಿದ ನದಿದೇವತೆ ನೀರಿನ ಮಧ್ಯದಿಂದ ಧುತ್ತನೆ ಪ್ರತ್ಯಕ್ಷಳಾಗುತ್ತಾಳೆ. ಮಕ್ಕಳೆಲ್ಲ ಭಯಪಡುತ್ತಾರೆ.]

ಮಕ್ಕಳು : ಯಾರಿವಳು? ಎಷ್ಟು ಅಸಹ್ಯವಾಗಿದ್ದಾಳೆ?

ನದಿದೇವತೆ : ನಾನು ನದಿದೇವತೆ ಮಕ್ಕಳೆ.

ಮಕ್ಕಳು : ಛೀ! ಛೀ! ನದಿದೇವತೆ ಹೀಗಿರುತ್ತಾಳೆಯೆ? ನಿನ್ನನ್ನು ನೋಡಿದರೆ ನಮಗೆ ಅಸಹ್ಯವಾಗುತ್ತದೆ.

ನದಿದೇವತೆ : ಏಕೆ? ನಾನು ನಿಮಗೇನು ಮಾಡಿರುವೆ? ನೀವೇಕೆ ಅಸಹ್ಯ ಪಟ್ಟುಕೊಳ್ಳುತ್ತಿದ್ದೀರಿ? ನನ್ನಿಂದ ನೀವು ಹಲವು ಪ್ರಯೋಜನ ಪಡೆದಿಲ್ಲವೆ?



ರೆಹಮಾನ್ : ಎಲ್ಲಾ ಸರಿ. ಆದರೆ ಈಗ ನೀನು ಕಲುಷಿತಗೊಂಡಿರುವೆ. ನಿನ್ನ ನೀರನ್ನು ಕುಡಿಯಬಾರದಂತೆ, ನಿನ್ನಲ್ಲಿ ಸ್ನಾನ ಮಾಡಬಾರದಂತೆ. ವೈದ್ಯರೇ ನಮಗೆ ಈ ವಿಚಾರ ತಿಳಿಸಿದ್ದಾರೆ. ಅಲ್ಲದೆ ನಮ್ಮ ಗೆಳೆಯರಿಬ್ಬರು ನಿನ್ನಲ್ಲಿ ಸ್ನಾನ ಮಾಡಿ ಅಸ್ವಸ್ಥರಾಗಿ ಆಸ್ಪತ್ರೆ ಸೇರಿದ್ದಾರೆ.

ನದಿದೇವತೆ : ಮಕ್ಕಳೇ, ಇದಕ್ಕೆಲ್ಲ ಕಾರಣ ನಾನಲ್ಲ; ನೀವೆ !

ರಘು : ನಾವೆ ?

ನದಿದೇವತೆ : ನೀವು ಅಂದ್ರೆ–ನಿಮ್ಮವರು.

ಮನೋಹರ : ನಮ್ಮವರೇನು ಶುದ್ಧಳಾಗಿ ಹರಿಯಬಾರದೆಂದು ತಾಕೀತು ಮಾಡಿದ್ದಾರೆಯೇ? ನಿನ್ನ ನೀರಿನಿಂದ ನಮಗೀಗ ಉಳಿಗಾಲವಿಲ್ಲ.

ನದಿದೇವತೆ : ಇಲ್ಲ ಮಕ್ಕಳೇ, ನೀವು ನನ್ನ ಬಗ್ಗೆ ತಪ್ಪು ತಿಳಿದಿದ್ದೀರಿ. ನನ್ನ ಮಾತುಗಳನ್ನು ಕೇಳಿ. ಪರಿಶುದ್ಧಳಾಗಿ ಹರಿಯುವ ನನ್ನನ್ನು ಕಲುಷಿತಗೊಳಿಸಿದವರು ಮನುಷ್ಯರೇ. ಬಹಳ ಹಿಂದಿನಿಂದ ಇತ್ತೀಚಿನವರೆಗೂ ಮಾಲಿನ್ಯರಹಿತಳಾಗಿ ಹರಿಯುತ್ತಿದ್ದೆ. ಆಗ ಈ ಮನುಷ್ಯರು ನನ್ನ ನೀರನ್ನು ಕುಡಿಯುತ್ತಿದ್ದರು. ಆಹಾರ ತಯಾರಿಕೆಗೆ ಬಳಸುತ್ತಿದ್ದರು, ಬೇಸಾಯಕ್ಕೆ ಉಪಯೋಗಿಸುತ್ತಿದ್ದರು. ನನ್ನಲ್ಲಿ ಲೆಕ್ಕವಿಲ್ಲದಷ್ಟು ಜಲಚರ ಜೀವಿಗಳಿದ್ದು ಎಲ್ಲವೂ ಸಂತೋಷದಿಂದ ಇದ್ದವು. ಆದರೆ ಈಗ ನಾನು ಪರಿಶುದ್ಧಳಾಗಿಲ್ಲ. ನನ್ನನ್ನು ಮನುಷ್ಯರು ಮನಬಂದಂತೆ ಬಳಸುತ್ತಿದ್ದಾರೆ. ಅನೇಕ ಕಾರ್ಖಾನೆಗಳನ್ನು ನನ್ನ ದಂಡೆಯಲ್ಲಿ ಸ್ಥಾಪಿಸಿ ಅದರಿಂದ ಹೊರಬರುವ ರಾಸಾಯನಿಕ ಪದಾರ್ಥಗಳನ್ನು, ಕೊಳೆತ ಮಾಂಸಮಜ್ಜೆಗಳನ್ನು ಮತ್ತು ಕಸದ ರಾಶಿಗಳನ್ನು ನನ್ನೊಳಕ್ಕೆ ಎಸೆಯುತ್ತಿದ್ದಾರೆ. ಊರಿನ ಸಮಗ್ರ ಕೊಳಚೆ ನೀರನ್ನು ನನ್ನೊಳಕ್ಕೆ ಹರಿಯಬಿಟ್ಟಿದ್ದಾರೆ. ಇಷ್ಟೆಲ್ಲಾ ಶೋಷಣೆಗೆ ಬಲಿಯಾದ ನಾನು ಹೇಗೆ ಪರಿಶುದ್ಧಳಾಗಿ ಹರಿಯಲು ಸಾಧ್ಯ? ನೀವೇ ಯೋಚಿಸಿ ಮಕ್ಕಳೇ.

ಮಕ್ಕಳು : ನೀನು ಹೇಳುತ್ತಿರುವುದಾದರೂ ಏನು?



ನದಿದೇವತೆ : ನಾನು ಹೇಳುವುದಿಷ್ಟೇ: ಮನುಷ್ಯರು ಹೀಗೆಯೇ ಮಾಲಿನ್ಯ ಮಾಡುವುದನ್ನು ಮುಂದುವರಿಸಿದ್ದಾದರೆ ನಾನು 'ವಿಷಕನ್ಯೆ' ಎಂಬ ಪಟ್ಟ ಧರಿಸುವ ಕಾಲ ದೂರವಿಲ್ಲ. ನಾನು ಯಾರ ಬಳಿ ನನ್ನ ನೋವು ಹೇಳಿಕೊಳ್ಳಲಿ?

ಮಕ್ಕಳು : (ಚಿಂತಾಕ್ರಾಂತರಾಗಿ) ದೇವತೆಯೇ, ನೀನು ಮತ್ತೆ ಮೊದಲಿನಂತಾಗಲು ಸಾಧ್ಯವಿಲ್ಲವೇ?

ನದಿದೇವತೆ : ಇದೆ ಮಕ್ಕಳೆ, ನನ್ನ ಮೇಲಾಗುತ್ತಿರುವ ದೌರ್ಜನ್ಯ ಸಂಪೂರ್ಣವಾಗಿ ನಿಲ್ಲಬೇಕು. ಎಲ್ಲರೂ ನನ್ನನ್ನು ಶುದ್ಧಗೊಳಿಸಲು ಶ್ರಮಿಸಬೇಕು. ನನ್ನಲ್ಲಿ ಯಾವುದೇ ಬಗೆಯ ಮಲಿನ ವಸ್ತು ಸೇರದಂತೆ ನೋಡಿಕೊಂಡರೆ ಮೊದಲಿನಂತೆಯೇ ಪರಿಶುದ್ಧಳಾಗಿ ಹರಿಯಬಲ್ಲೆ. ಹಾಗಾದರೆ ಈಗ ಹೇಳಿ ಮಕ್ಕಳೇ, ನನಗಾಗಿ ನೀವೇನು ಮಾಡಬಲ್ಲಿರಿ?

ಮಕ್ಕಳೆಲ್ಲ : ತಾಯಿ ನಾವೆಲ್ಲರೂ ನಿನ್ನ ಮಾಲಿನ್ಯ ತಡೆಯಲು ಶ್ರಮಿಸುತ್ತೇವೆ. ಇಂದಿನಿಂದಲೇ ಪಣತೊಟ್ಟು ನಿನ್ನನ್ನು ಪರಿಶುದ್ಧವಾಗಿಡಲು ಪ್ರಯತ್ನಿಸುತ್ತೇವೆ.

ನದಿದೇವತೆ : ಧನ್ಯ ಮಕ್ಕಳೆ, ಧನ್ಯ. (ಅಂತರ್ಧಾನಳಾಗುವಳು.)

(ಮಕ್ಕಳು ತಮ್ಮ ಹೆತ್ತವರ ಹಾಗೂ ಊರವರ ಸಹಕಾರದೊಂದಿಗೆ ನದಿಯನ್ನು ಶುಚಿಯಾಗಿಡುವ ಜವಾಬ್ದಾರಿಯನ್ನು ವಹಿಸಿಕೊಂಡರು.)

ಕ್ಷೇತ್ರ : ಆಲಿಸುವುದು.
ಸಾಮರ್ಥ್ಯ : ಸಂವಾದ, ಚರ್ಚೆ ಹಾಗೂ ನಾಟಕಗಳನ್ನು ಆಲಿಸುವುದರ ಜೊತೆಗೆ ಅರ್ಥಮಾಡಿಕೊಳ್ಳುವುದು.

ಆಶಯ

ನಾವು ಇಂದು ನೀರಿನ ಮೂಲಗಳಾದ ಕೆರೆ, ಬಾವಿ, ನದಿ ಮೊದಲಾದವುಗಳನ್ನು ಸರಿಯಾದ ರೀತಿಯಲ್ಲಿ ರಕ್ಷಿಸದೆ ಅವುಗಳನ್ನು ಕಲುಷಿತಗೊಳಿಸುತ್ತಿದ್ದೇವೆ. ಇದರಿಂದಾಗಿ ನಮ್ಮ ಬದುಕಿಗೆ ಸಂಚಕಾರ ಎದುರಾಗುತ್ತಿದೆ. ನಮ್ಮ ಸುತ್ತಲಿನ ನೀರಿನ ಮೂಲಗಳನ್ನು ಶುದ್ಧವಾಗಿಡುವುದು ಅತ್ಯಗತ್ಯ.



ಅ. ಅರ್ಥ ತಿಳಿಯಿರಿ.

ಆತಂಕ–ಭಯ,ತಳಮಳ. ತವಕ–ಆತುರ,ತರಾತುರಿ. ಅನಾಹುತ–ತೊಂದರೆ, ಅಪಾಯ. ಗುಳ್ಳೆ–ಬೊಬ್ಬೆ, ಬೊಕ್ಕೆ. ತುರಿಕೆ–ನವೆ, ಕೆರೆತ. ಚಿಂತೆ–ಯೋಚನೆ, ದುಃಖ. ಮೂರ್ಛೆ–ಪ್ರಜ್ಞೆತಪ್ಪು, ಎಚ್ಚರ ತಪ್ಪು. ಚಿಕಿತ್ಸೆ–ಆರೈಕೆ, ಶುಶ್ರೂಷೆ. ಕೊಳಕು–ಮಲಿನ, ಗಲೀಜು. ಸಂಕುಲ–ಸಮೂಹ, ಗುಂಪು. ಧುತ್ತನೆ–ಏಕಾಏಕಿ, ಇದ್ದಕ್ಕಿದ್ದಂತೆ. ತಾಕೀತು–ಕಟ್ಟಪ್ಪಣೆ, ಎಚ್ಚರಿಕೆ. ಜಲಚರ–ನೀರಿನಲ್ಲಿ ವಾಸಿಸುವ ಜೀವಿಗಳು. ಶೋಷಣೆ– ತುಳಿತ, ಹಿಂಸೆ. ದೌರ್ಜನ್ಯ–ದಬ್ಬಾಳಿಕೆ, ಹಿಂಸೆ. ಪಣತೊಡು–ದೃಢನಿರ್ಧಾರ ಕೈಗೊಳ್ಳು, ಪ್ರತಿಜ್ಞೆಮಾಡು. ಅಂತರ್ಧಾನ–ಕಾಣೆಯಾಗು, ಮಾಯವಾಗು.

ಆ. ವಿವರ ತಿಳಿಯಿರಿ.

ಸೋಂಕು : ಒಬ್ಬರಿಂದ ಮತ್ತೊಬ್ಬರಿಗೆ ಹರಡುವ ರೋಗ.

ವಿಷಕನ್ಯೆ : ಇಡೀ ದೇಹ ವಿಷದಿಂದ ಕೂಡಿದವಳು.

ಮಾಲಿನ್ಯ ರಹಿತ : ಮಲಿನತೆಯಿಲ್ಲದ, ಕೊಳೆಯಿಲ್ಲದ

ಇ. ಕೆಳಗಿನ ಪ್ರಶ್ನೆಗಳಿಗೆ ಉತ್ತರ ಹೇಳಿರಿ.

೧. ಯಾರಿಗೆ ಮಾಲಿನ್ಯದ ಸೋಂಕು ತಗುಲಿತು?

೨. ಭರತ್ ಮತ್ತು ಶಂಕರ ಎಲ್ಲಿ ಸ್ನಾನ ಮಾಡಿದರು?

೩. ಭರತ್ ಮತ್ತು ಶಂಕರರನ್ನು ಆಸ್ಪತ್ರೆಗೆ ಸೇರಿಸಿದವರು ಯಾರು?

೪. ನದಿ ಮಧ್ಯದಿಂದ ಯಾರು ಧುತ್ತನೆ ಪ್ರತ್ಯಕ್ಷಳಾದಳು?

೫. ಮಕ್ಕಳು ಯಾರ ಸಹಕಾರದೊಂದಿಗೆ ನದಿಸ್ವಚ್ಛತೆಯ ಜವಾಬ್ದಾರಿಯನ್ನು ವಹಿಸಿಕೊಂಡರು?



ವ್ಯಾಕರಣ ಮಾಹಿತಿ

ಅ. ಗುಣಿತಾಕ್ಷರಗಳು

ವ್ಯಂಜನಗಳಿಗೆ ಸ್ವರಗಳು ಸೇರಿ ಆಗುವ ಅಕ್ಷರಗಳು ಗುಣಿತಾಕ್ಷರಗಳು.

೧) ಇಲ್ಲಿನ ಅಕ್ಷರ ಸಂರಚನೆಗಳನ್ನು ಗಮನಿಸಿ.

ಕ್+ಅ=ಕ	ಕ್+ಆ=ಕಾ	ಕ್+ಇ=ಕಿ	ಕ್+ಈ=ಕೀ
ಕ್+ಉ=ಕು	ಕ್+ಊ=ಕೂ	ಕ್+ಋ=ಕೃ	ಕ್+ಎ=ಕೆ
ಕ್+ಏ=ಕೇ	ಕ್+ಐ=ಕೈ	ಕ್+ಒ=ಕೊ	ಕ್+ಓ=ಕೋ
ಕ್+ಔ=ಕೌ	ಕ್+ಅಂ=ಕಂ	ಕ್+ಅಃ=ಕಃ	

೨) ಕೆಳಗಿನ ಅಕ್ಷರಗಳನ್ನು ಬಿಡಿಸಿ ಬರೆಯುವ ಕ್ರಮ ತಿಳಿಯಿರಿ.

ರಾಜಧಾನಿ = ರ್+ಆ=ರಾ, ಜ್+ಅ=ಜ, ಧ್+ಆ=ಧಾ, ನ್+ಇ=ನಿ.
ಸಿಂಹಾಸನ = ಸ್+ಇಂ=ಸಿಂ, ಹ್+ಆ=ಹಾ, ಸ್+ಅ=ಸ, ನ್+ಅ=ನ.
ಪರಿಚಿತ = ಪ್+ಅ=ಪ, ರ್+ಇ=ರಿ, ಚ್+ಇ=ಚಿ, ತ್+ಅ=ತ.
ಬಾಯಾರಿಕೆ = ಬ್+ಆ=ಬಾ, ಯ್+ಆ=ಯಾ, ರ್+ಇ=ರಿ, ಕ್+ಎ=ಕೆ.

೩) ಗುಣಿತಾಕ್ಷಾರಗಳನ್ನು ಕೂಡಿಸಿ ಬರೆಯುವ ಕ್ರಮ ತಿಳಿಯಿರಿ.

ಕ್+ಋ ತ್+ಅ ಕ್+ಅ = ಕೃತಕ
ಚ್+ಏ ತ್+ಅ ನ್+ಅ = ಚೇತನ
ಮ್+ಐ ಸ್+ಊ ರ್+ಉ = ಮೈಸೂರು
ಒ ಲ್+ಉ ಮ್+ಎ = ಒಲುಮೆ

ಆ. ಓದಿಗೆ ಮನ್ನಣೆ

೧. ನದಿಗಳ ಮಾಲಿನ್ಯ ಯಾವ ಕಾರಣಗಳಿಂದಾಗುತ್ತದೆ ಎಂಬುದನ್ನು ಓದಿ ತಿಳಿಯಿರಿ ಹಾಗೂ ಹಿರಿಯರಿಂದ ಕೇಳಿ ತಿಳಿಯಿರಿ.

೨. ದಿನಪತ್ರಿಕೆಯಲ್ಲಿ ಬರುವ ನದಿಗಳ ಮಾಲಿನ್ಯ ಕುರಿತಾದ ಲೇಖನಗಳನ್ನು ಓದಿ ತಿಳಿಯಿರಿ ಹಾಗೂ ನಿಮ್ಮ ಸಹಪಾಠಿಗಳೊಂದಿಗೆ ಚರ್ಚಿಸಿರಿ.

ಇ. ಶುಭನುಡಿ

೧. ಮಾಲಿನ್ಯರಹಿತ ನದಿ ಮನುಕುಲದ ಭದ್ರತೆಗೆ ಬುನಾದಿ

೨. ಅಶುದ್ಧ ನೀರು ಅನಾರೋಗ್ಯಕ್ಕೆ ಆಹ್ವಾನ.

೩. ನೀರಿನಿಂದ ಉಸಿರು ನೀರಿನಿಂದ ಹಸಿರು.

ಪೂರಕ ಪಾಠ : ಯಕ್ಷಪ್ರಶ್ನೆ

ವನವಾಸದ ಸಂದರ್ಭದಲ್ಲಿ ಪಾಂಡವರು ದ್ವೈತವನದಲ್ಲಿ ವಾಸವಾಗಿದ್ದರು. ಅವರ ಸಮೀಪದಲ್ಲಿ ಒಬ್ಬ ಬ್ರಾಹ್ಮಣನೂ ವಾಸವಿದ್ದನು. ಒಂದು ದಿನ ಮಾಯಾಜಿಂಕೆಯೊಂದು ಬ್ರಾಹ್ಮಣನ ಅಗ್ನಿ ಉತ್ಪಾದಕ ಸಾಮಗ್ರಿಗಳನ್ನು ಎತ್ತಿಕೊಂಡು ಮಾಯವಾಯಿತು. ತನ್ನ ಅಗ್ನಿ ಉತ್ಪಾದಕ ಸಾಮಗ್ರಿಗಳನ್ನು ಮರಳಿ ತಂದುಕೊಡುವಂತೆ ಬ್ರಾಹ್ಮಣನು ಧರ್ಮರಾಜ ಮತ್ತು ಅವನ ತಮ್ಮಂದಿರನ್ನು ಕೇಳಿಕೊಂಡನು ಪಾಂಡವರು ಜಿಂಕೆಯನ್ನು ಬೆನ್ನಟ್ಟಿ ಬಹುದೂರ ಹೋಗುತ್ತಾರೆ. ಹಸಿವೆ, ನೀರಡಿಕೆಗಳಿಂದ ಅವರು ಕಂಗೆಡುತ್ತಾರೆ. ಸಮೀಪದಲ್ಲಿ ಎಲ್ಲಾದರೂ ನೀರು ಇದೆಯೇ ಎಂದು ನೋಡಿಬರಲು ನಕುಲನನಿಗೆ ಧರ್ಮಜನು ಹೇಳುತ್ತಾನೆ. ಸಮೀಪದಲ್ಲಿ ಒಂದು ಸರೋವರ ಕಂಡ ನಕುಲನು ಬಾಯಾರಿ ನೀರುಕುಡಿಯಲು ಮುಂದಾಗುತ್ತಾನೆ. ಅಂತೆಯೇ ಇತರರೂ ಮುಂದಾಗುತ್ತಾರೆ. ನಾಲ್ವರು ಸಹೋದರರಲ್ಲಿ ಒಬ್ಬನೂ ಹಿಂದಿರುಗಿ ಬರುವುದಿಲ್ಲ.

ಯಾವೊಬ್ಬ ಸಹೋದರರೂ ಮರಳಿ ಬಾರದ್ದನ್ನು ಗಮನಿಸಿದ ಧರ್ಮರಾಜ ತಾನೇ ಸರೋವರದತ್ತ ಬರುತ್ತಾನೆ. ಸಹೋದರರೆಲ್ಲರೂ ಮಲಗಿದಂತೆ ಕಾಣುತ್ತಾರೆ. ಮೊದಲು ನೀರು ಕುಡಿದು ಅನಂತರ ವಿಚಾರಿಸುವ ಎಂದು ಭಾವಿಸಿ ಸರೋವರಕ್ಕೆ ಇಳಿಯುತ್ತಾನೆ. ಆಗ ಯಕ್ಷನು ಅಶರೀರವಾಣಿಯಲ್ಲಿ ಪ್ರಶ್ನಿಸುತ್ತಾನೆ:



ಯಕ್ಷ : ಧರ್ಮಜ ನನ್ನ ಸರೋವರದ ನೀರನ್ನು ಕುಡಿಯಬೇಡ. ನನ್ನ ಪ್ರಶ್ನೆಗಳಿಗೆ ಉತ್ತರಿಸದೇ ನೀನು ನೀರು ಕುಡಿದೆಯಾದರೆ ನಿನ್ನ ಸಹೋದರರಿಗಾದ ಗತಿ ನಿನಗೂ ಆದೀತು. ಎಚ್ಚರ!

ಧರ್ಮರಾಜ : ನಿನ್ನ ಮಾತನ್ನು ಗಮನಿಸಿದರೆ ನೀನು ಸಾಮಾನ್ಯ ಮನುಷ್ಯನಂತಿಲ್ಲ. ನೀನೊಬ್ಬ ದೇವಮಾನವನಿರಬೇಕು. ಇರಲಿ. ನಿನ್ನ ಪ್ರಶ್ನೆಗಳಿಗೆ ಮೊದಲು ಉತ್ತರಿಸಿದ ಅನಂತರವೆ ನಾನು ನೀರು ಕುಡಿಯುವೆ. ಕೇಳು ನಿನ್ನ ಪ್ರಶ್ನೆಗಳನ್ನು.

ಯಕ್ಷ : ಸಮುದ್ರಕ್ಕೆ ಸಮಾನವಾದ ಸರೋವರ ಯಾವುದು?

ಧರ್ಮರಾಜ : ಆಕಾಶ

ಯಕ್ಷ : ಮಾನವನಿಗೆ ತಾಯಿರೂಪಿ ಯಾರು?

ಧರ್ಮರಾಜ : ಗೋವು

ಯಕ್ಷ : ಸೂರ್ಯಪ್ರಭೆಗೆ ಸಮಾನವಾದುದು ಯಾವುದು?

ಧರ್ಮರಾಜ : ಸತ್ಯ

ಯಕ್ಷ : ಮಹಾಪುರುಷನೆಂದರೆ ಯಾರು?

ಧರ್ಮರಾಜ : ಅಹಿಂಸಾವ್ರತನೇ ಮಹಾಪುರುಷ

ಯಕ್ಷ : ಸುಜನರೆಂದರೆ ಯಾರು?

ಧರ್ಮರಾಜ : ಸಾಧು ಸೇವಕನೇ ಸುಜನ

ಯಕ್ಷ : ದೇವಪ್ರಿಯನು ಯಾರು?

ಧರ್ಮರಾಜ : ಸತತ ಪರರಿಗೆ ಉಪಕಾರಿಯಾದವನೇ ದೇವಪ್ರಿಯನು.

ಯಕ್ಷ : ನೀಚನೆಂದರೆ ಯಾರು?

ಧರ್ಮರಾಜ : ಪರರ ಗುಣದ ಉನ್ನತಿಯನ್ನು ಸೈರಿಸದವನು ನೀಚನು.

ಯಕ್ಷ : ಲೋಕದಲ್ಲಿ ನಿಂದ್ಯನು ಯಾರು, ಅಭಿವಂದ್ಯನು ಯಾರು?

ಧರ್ಮರಾಜ : ಪರನಿಂದಕನೇ ನಿಂದ್ಯನು, ಪರರಿಗೆ ಹಿತ ನೀಡುವವನೇ ವಂದ್ಯನು.

ಯಕ್ಷ : ನರಕಿ ಯಾರು?

ಧರ್ಮರಾಜ : ಕೃತಘ್ನನೇ ನರಕಿ.

ಯಕ್ಷ : ಪ್ರಾಣವಿದ್ದೂ ಮೃತನಾರು?

ಧರ್ಮರಾಜ : ಯುದ್ಧಕ್ಕೆ ಹೋಗಿ ಪ್ರಾಣಭಯದಿಂದ ಹೆದರಿ ಹಿಂದಿರುಗುವ ರಾಜನೇ ಮೃತನು.

ಯಕ್ಷ : ಧರ್ಮಜ, ನಿನ್ನ ಉತ್ತರಗಳಿಂದ ತೃಪ್ತನಾಗಿರುವೆ. ನಿನ್ನ ತಮ್ಮಂದಿರಲ್ಲಿ ಯಾರೊಬ್ಬನನ್ನು ಬದುಕಿಸಲಿ? ಮತ್ತು ಏಕೆ ಬದುಕಿಸಲಿ?

ಧರ್ಮರಾಜ : ನಕುಲನನ್ನು ಬದುಕಿಸಿರಿ, ಏಕೆಂದರೆ ಕುಂತಿ ಪುತ್ರರಲ್ಲಿ ನಾನು ಬದುಕಿರುವೆ. –ಮಾದ್ರಿ ಪುತ್ರರಲ್ಲಿ ನಕುಲ ಬದುಕಲಿ. (ಇಬ್ಬರು ತಾಯಂದಿರಿಗೆ ಸಂತಸವಾಗಲಿ)

ಯಕ್ಷ : [ಇದರಿಂದ ಸಂತಸಗೊಂಡ ಯಕ್ಷ ತನ್ನ ವೇಷವನ್ನು ಬದಲಿಸಿ ಯಮಧರ್ಮನ ರೂಪ ಧರಿಸುತ್ತಾನೆ]. ನಿನ್ನ ಉತ್ತರದಿಂದ ನನಗೆ ಸಂತಸವಾಗಿದೆ. ಎಲ್ಲಾ ಸಹೋದರರನ್ನು ಬದುಕಿಸುವೆ. ನೀನಿನ್ನು ನೀರನ್ನು ಕುಡಿಯಬಹುದು ಎನ್ನುತ್ತಾನೆ.

ಕೆಳಗಿನ ಪ್ರಶ್ನೆಗಳಿಗೆ ಉತ್ತರ ಹೇಳಿರಿ.

೧) ಯಕ್ಷನ ವೇಷದಲ್ಲಿದ್ದವ ಯಾರು?

೨) ಸೂರ್ಯ ಪ್ರಭೆಗೆ ಸಮಾನವಾದುದು ಯಾವುದು?

೩) ಧರ್ಮಜನು ಯಾರನ್ನು ಬದುಕಿಸಲು ಯಕ್ಷನಲ್ಲಿ ಕೇಳುತ್ತಾನೆ.

೪) ನಿಂದ್ಯನು ಯಾರು? ವಂದ್ಯನು ಯಾರು?

೫) ಜೀವವಿದ್ದೂ ಮೃತನಾರು?



ಶಕ್ತಿಕೊಡಿ



ಭಾರತ ಮಾತೆಯ ಬಸಿರಲಿ ಬಂದನು
ಹಿರಿಮೆಯ ಹಿರಿಮಗ ನೇತಾಜಿ
ದೇಶದ ಬಂಧನ ಕಳಚಲು ಹೆಣಗಿದ
ಸ್ವಾತಂತ್ರ್ಯಪ್ರಿಯನು ನೇತಾಜಿ ॥

ಬಿಳಿಯರ ಗುಂಡಿಗೆ ಬೆದರದ ಗಂಡೆದೆ
ತೋರಿದ ಗಟ್ಟಿಗ ನೇತಾಜಿ
ಪ್ರತಿಸರಕಾರವ ರಚಿಸುವ ಪೌರುಷ
ಮೆರೆದ ಪುರೂರವ ನೇತಾಜಿ ॥

ಭಾರತ ರಾಷ್ಟ್ರದ ಸೇನೆಯ ಕಟ್ಟಿದ
ಶಿಸ್ತಿನ ಸೈನಿಕ ನೇತಾಜಿ
ಜೈಹಿಂದ್ ಗೀತವ ಮೊದಲಿಗೆ ಹಾಡಿದ
ಗಾಯಕ ಮುಖ್ಯನು ನೇತಾಜಿ ॥

೩



ಶಕ್ತಿಕೊಡಿ ಸ್ವಾತಂತ್ರ್ಯವ ಕೊಡುವೆನು
ಎಂದರು ನಮ್ಮಯ ನೇತಾಜಿ
ಕ್ಷತ್ರಿಯ ಧೈರ್ಯದ ಸಿಂಹದ ಶೌರ್ಯದ
ಸಾಹಸಿ ನಾಯಕ ನೇತಾಜಿ ॥

ಬರ್ಮಾ ಭಾಗದಿ ಯುದ್ಧ ನಡೆಸಲು
ಸೇನೆ ನಡೆಸಿದರು ನೇತಾಜಿ
ಬಿಳಿಯರ ಸೈನ್ಯಕೆ ಸಡ್ಡು ಹೊಡೆಯುತ
ಸಮರ ಸಾರಿದರು ನೇತಾಜಿ ॥

ತಿನ್ನುವ ಅನ್ನಕೆ ಯುದ್ಧದ ಶಸ್ತ್ರಕೆ
ಬ್ರಿಟಿಷರು ಮೋಸವ ಮಾಡಿರಲು
ಬಳಲಿದ ಸೈನ್ಯಕೆ ಶಕ್ತಿ ತುಂಬಲು
ವಿಮಾನವೇರಿದರು ನೇತಾಜಿ ॥

ಮಾರ್ಗಮಧ್ಯದಲಿ ವಿಮಾನ ಮುರಿಯಿತು
ವಿಧಿವಶರಾದರು ನೇತಾಜಿ
ನಾಡಿನ ಒಳಿತಿಗೆ ದೇಹವ ಸವೆಸಿದ
ಜನತೆಯ ಸೇವಕ ನೇತಾಜಿ ॥

–ಪಳಕಳ ಸೀತಾರಾಮ ಭಟ್ಟ



ಕ್ಷೇತ್ರ : ಮಾತನಾಡುವುದು.
ಸಾಮರ್ಥ್ಯ : ಸನ್ನಿವೇಶ ಮತ್ತು ಘಟನೆಗಳನ್ನು ವಿವರಿಸುವುದು.

ಆಶಯ

ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿದ ಅದೆಷ್ಟೋ ಮಹನೀಯರ ಚಿತ್ರ ಇಂದಿಗೂ ನಮ್ಮ ಕಣ್ಣಮುಂದೆ ಇದೆ. ದೇಶಕ್ಕಾಗಿ ಹೋರಾಡಿದ ಒಬ್ಬೊಬ್ಬರೂ ಅದಕ್ಕಾಗಿ ಒಂದೊಂದು ಬಗೆಯ ತಂತ್ರವನ್ನು ರೂಪಿಸಿಕೊಂಡಿದ್ದರು. ಕ್ರಾಂತಿಯ ಮಾರ್ಗವೇ ಒಂದು ಬಗೆಯದಾದರೆ ಶಾಂತಿಯದ್ದು ಇನ್ನೊಂದು ಬಗೆ. ಎಲ್ಲರೂ ದೇಶಕ್ಕಾಗಿಯೇ ಹೋರಾಟ ನಡೆಸಿದವರು. ಯಾವುದೇ ಬಗೆಯ ತ್ಯಾಗಕ್ಕೂ ಹಿಂಜರಿಯದ ಅಪರೂಪದ ಹೋರಾಟಗಾರರೊಬ್ಬರ ಸಾಹಸಮಯ ಬದುಕನ್ನು ನಿರೂಪಿಸುವುದೇ ಇಲ್ಲಿನ ಆಶಯ.

ಕವಿ ಪರಿಚಯ



ಶ್ರೀ ಪಳಕಳ ಸೀತಾರಾಮಭಟ್ಟರು ೧೪-೦೮-೧೯೩೧ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದಿರೆ ಪುತ್ತಿಗೆಯ ಪಳಕಳ ಗ್ರಾಮದಲ್ಲಿ ಜನಿಸಿದರು. ತಂದೆ–ಈಶ್ವರ ಭಟ್ಟ. ತಾಯಿ–ಲಕ್ಷ್ಮಿಅಮ್ಮ. ಎಂ.ಎ., ಬಿ.ಇಡಿ. ಪದವೀಧರರಾದ ಇವರು ಪ್ರಾಥಮಿಕ ಹಾಗು ಪ್ರೌಢಶಾಲೆಗಳಲ್ಲಿ ಸೇವೆ ಸಲ್ಲಿಸಿ ೧೯೮೮ರಲ್ಲಿ ನಿವೃತ್ತರಾದರು. ಇವರು ಪ್ರಕಟಿಸಿದ ಮಕ್ಕಳ ಸಾಹಿತ್ಯ ಕೃತಿಗಳ ಸಂಖ್ಯೆ ೧೧೪. ಇವಲ್ಲದೆ ಕಥೆ, ಕವನ, ನಾಟಕ, ರೂಪಕ, ಪ್ರಹಸನ, ಪ್ರಬಂಧ, ಜೀವನ ಚರಿತ್ರೆ ಮುಂತಾದ ಸಾಹಿತ್ಯ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಕ.ಸಾ.ಪರಿಷತ್ತಿನ ಜಿ.ಪಿ.ರಾಜರತ್ನಂ ದತ್ತಿ ಬಹುಮಾನ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಹಾಗೂ ಕೇಂದ್ರ ಅಕಾಡೆಮಿಯ ಮಕ್ಕಳ ಸಾಹಿತ್ಯ ಬಹುಮಾನ ಮುಂತಾದ ಪ್ರಶಸ್ತಿಗಳು ಸಂದಿವೆ. ಪ್ರಸ್ತುತ 'ಶಕ್ತಿಕೊಡಿ' ಕವನವನ್ನು ಪಳಕಳ ಸೀತಾರಾಮಭಟ್ಟರ 'ಚಿಣ್ಣರ ಚೀಲ' ಎಂಬ ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.

ಅ. ಅರ್ಥ ತಿಳಿಯಿರಿ:

ಹಿರಿಮೆ–ದೊಡ್ಡತನ, ಶ್ರೇಷ್ಠತೆ. ಕಳಚು–ಬಿಡಿಸು, ದೂರಮಾಡು. ಬಿಳಿಯರು–ಬ್ರಿಟಿಷರು. ಬೆದರದೆ–ಹೆದರದೆ, ಭಯಪಡದೆ. ಗಟ್ಟಿಗ–ಧೈರ್ಯವಂತ, ಶಕ್ತಿಶಾಲಿ. ಶೌರ್ಯ–ಪರಾಕ್ರಮ, ಎದೆಗಾರಿಕೆ. ಸಾಹಸಿ–ಪರಾಕ್ರಮ ಪ್ರದರ್ಶಿಸುವಾತ. ಸಮರ–ಕಾಳಗ, ಯುದ್ಧ. ಶಸ್ತ್ರ–ಯುದ್ಧಸಲಕರಣೆ. ಮೋಸ– ಕಪಟ, ವಂಚನೆ. ವಿಧಿವಶ–ಮರಣ. ಒಳಿತು–ಒಳ್ಳೆಯ, ಕ್ಷೇಮ.



ಆ. ವಿವರ ತಿಳಿಯಿರಿ:

ಸಡ್ಡುಹೊಡೆ : ಆಕ್ರಮಣವನ್ನು ಎದುರಿಸಿ ನಿಲ್ಲು.
ಪುರೂರವ : ಅಲೆಗ್ಸಾಂಡರನನ್ನು ಎದುರಿಸಿದ ಭಾರತದ ಓರ್ವ ಪರಾಕ್ರಮಶಾಲಿ ದೊರೆ.
ಮುರಿಯು : ಅಪಘಾತಕ್ಕೆ ಒಳಗಾಗು, ತುಂಡಾಗು.

ಇ. ಕೆಳಗಿನ ಪ್ರಶ್ನೆಗಳಿಗೆ ಉತ್ತರ ಹೇಳಿರಿ :

೧. ದೇಶದ ಬಂಧನ ಕಳಚಲು ಹೋರಾಡಿದವರು ಯಾರು?
೨. ನೇತಾಜಿ ಎಂತಹ ಸರಕಾರ ರಚಿಸುವ ಪೌರುಷ ಹೊಂದಿದ್ದರು?
೩. ನೇತಾಜಿ ಯಾವ ರಾಷ್ಟ್ರದ ಸೇನೆ ಕಟ್ಟಿದರು?
೪. ನೇತಾಜಿಯವರು ಯಾವ ಯುದ್ಧದಲ್ಲಿ ಸೇನೆ ನಡೆಸಿದರು?
೫. ಶಕ್ತಿಕೊಡಿ–ಈ ಪದ್ಯ ಬರೆದ ಕವಿ ಯಾರು?

ವ್ಯಾಕರಣ ಮಾಹಿತಿ

ಅ. ಸಂಯುಕ್ತಾಕ್ಷರಗಳು

ವ್ಯಂಜನಕ್ಕೆ ವ್ಯಂಜನ ಸೇರಿಕೊಂಡು (ಸ್ವರದ ಸಹಾಯದಿಂದ) ಉಂಟಾಗುವ ಅಕ್ಷರಕ್ಕೆ ಸಂಯುಕ್ತಾಕ್ಷರ ಅಥವಾ ಒತ್ತಕ್ಷರ ಎಂದು ಕರೆಯುವರು.

ಸಂಯುಕ್ತಾಕ್ಷರಗಳಲ್ಲಿ ಎರಡು ವಿಭಾಗಗಳಿವೆ.

೧) ಸಜಾತೀಯ ಸಂಯುಕ್ತಾಕ್ಷರಗಳು ೨) ವಿಜಾತೀಯ ಸಂಯುಕ್ತಾಕ್ಷರಗಳು

ಒಂದೇ ಜಾತಿಯ ಎರಡು ವ್ಯಂಜನಗಳು (ಸ್ವರದ ಸಹಾಯದಿಂದ) ಒಂದಕ್ಕೊಂದು ಸೇರಿದರೆ ಸಜಾತೀಯ ಸಂಯುಕ್ತಾಕ್ಷರಗಳಾಗುವುವು. ಉದಾ;– ಅ, ಕ್+ಕ್+ಅ=ಅಕ್ಕ. ಇಲ್ಲಿ ಕ್+ಕ್(+ಅ). ಇವು ಸಜಾತೀಯ ವ್ಯಂಜನಗಳಾಗಿದ್ದು ಇವು ಒಂದಕ್ಕೊಂದು ಕೂಡಿ 'ಕ್ಕ' ಎಂಬ ಸಜಾತೀಯ ಸಂಯುಕ್ತಾಕ್ಷರವಾಗಿವೆ.

ಉದಾ: ಅಪ್ಪ, ಅಮ್ಮ, ಅನ್ನ, ಅಣ್ಣ, ಅಕ್ಕರ, ಅಕ್ಕಪಕ್ಕ, ರಕ್ಕಸ,ಇತ್ಯಾದಿ.

ಬೇರೆ ಬೇರೆ ಜಾತಿಯ ಎರಡು ಅಥವಾ ಹೆಚ್ಚು ವ್ಯಂಜನಗಳು(ಸ್ವರದ ಸಹಾಯದಿಂದ) ಒಂದಕ್ಕೊಂದು ಕೂಡಿಕೊಂಡು ಉಂಟಾಗುವ ಅಕ್ಷರವು ವಿಜಾತೀಯ ಸಂಯುಕ್ತಾಕ್ಷರವೆನಿಸುವುದು.



ಉದಾ : ಭ್+ಅ+ಕ್+ತ್+ಅ=ಭಕ್ತ. ಇಲ್ಲಿ ಕ್+ತ್(+ಅ) ಇವು ವಿಜಾತೀಯ ಸಂಯುಕ್ತಾಕ್ಷರ ವ್ಯಂಜನಗಳಾಗಿದ್ದು ಇವೆರಡು ಕೂಡಿ 'ಕ್ತ' ಎಂಬ ವಿಜಾತೀಯ ಸಂಯುಕ್ತಾಕ್ಷರವಾಗಿದೆ.

ಉದಾ : ಚಕ್ರ, ದಿವ್ಯ, ಆಜ್ಞೆ, ಸ್ತ್ರೀ, ವಸ್ತ್ರ ಮುಂತಾದವುಗಳು.

ಆ. ಓದಿಗೆ ಮನ್ನಣೆ

೧. ದೇಶಕ್ಕಾಗಿ ಹೋರಾಡಿದ ಮಹಾಪುರುಷರನ್ನು ಕುರಿತ ಹಾಡುಗಳನ್ನು ಸಂಗ್ರಹಿಸಿ, ರಾಗಬದ್ಧವಾಗಿ ಹಾಡಿರಿ.

೨. ರಾಷ್ಟ್ರ ನಾಯಕರ ಜೀವನ ಚರಿತ್ರೆ ಓದಿರಿ.

ಇ. ಶುಭನುಡಿ

೧. ದೇಶ ಸೇವೆಯೇ ಈಶಸೇವೆ.

೨. ದೇಶವೆ ಗುಡಿ, ದೇಶಕ್ಕಾಗಿ ದುಡಿ.

೩. ದೇಶಕ್ಕಾಗಿ ಒಂದಾಗಿರಿ, ದೇಶಕ್ಕಾಗಿ ಮುಂದಾಗಿರಿ.

ಪೂರಕ ಪಾಠ : ಸ್ವಾತಂತ್ರ್ಯದ ಹಣತೆ



ಸದಾ ಉರಿಯುತಿರುವ ಹಾಗೆ ಸ್ವಾತಂತ್ರ್ಯದ ಹಣತೆ
ದುಡಿಮೆ ತೈಲವೆರೆಯುತಿರಲು ಬಿಡುವಿಲ್ಲದೆ ಜನತೆ
ಎಂತು ಕುಂದಬಹುದು ಎಮ್ಮ ತಾಯ್ನಾಡಿನ ಘನತೆ? ।ಸದಾ।

ಮುಳ್ಳಿನಿಂದ ಅರಿವೆ ಬಿಡಿಸಿದಂತೆ ಬಂತೆ ಮುಕ್ತಿ?
ಹುಲಿಯ ಬಾಯ ಮೇವ ಕಸಿಯುವಂತೆ ಧೀರಶಕ್ತಿ
ಪಡೆಯಿತದನು ಜನತೆ, ಬಾಳ ಬೆಸೆಯೆ ನಾಡ ಭಕ್ತಿ. ।ಸದಾ।

ಸ್ವಾತಂತ್ರ್ಯದ ಜೊತೆಗೆ ಬಂದು ಕೂಡಲಿಲ್ಲ ಗಳಿಕೆ
ವ್ಯಕ್ತಿ ವ್ಯಕ್ತಿ ಬೆವರ ಹೀರಿ ಮರವಾಗಿದೆ ಮೊಳಕೆ;
ಮೇಲೇರಿದ ಹಾಗೆ ಭದ್ರ ಪಾಯವುಂಟು ಗೃಹಕೆ ।ಸದಾ।

ಸಾಗಿದಂತೆ ಸಲ್ಲುತಿರಲಿ ಸಾಧನೆಯೆಡೆ ಗಮನ
ಪ್ರಾಣವನ್ನ ಪಗಡೆಯಾಡಿದವರಿಗೆಮ್ಮ ನಮನ;
ತಾಯಮುಡಿಗೆ ದಿನವು ಏರುತಿರಲಿ ಹೂವು ದವನ ।ಸದಾ।

– ಕೆ.ಎಸ್.ನಿಸಾರ್ ಅಹಮ್ಮದ್

ಕೆಳಗಿನ ಪ್ರಶ್ನೆಗಳಿಗೆ ಉತ್ತರ ತಿಳಿಯಿರಿ.

1) ಸದಾ ಉರಿಯುತ್ತಿರಬೇಕಾದುದು ಯಾವುದು?

2) ಧೀರಶಕ್ತಿ ಉಳ್ಳವರು ಏನು ಮಾಡಬಲ್ಲರು?

3) ಮೊಳಕೆ ಉಂಟಾದುದು ಹೇಗೆ?

4) ನಮ್ಮ ಗಮನ ಯಾವುದರ ಕಡೆಗೆ ಸಲ್ಲಬೇಕು?



ನಮ್ಮ ಮಾತೂ ಕೇಳಿ




ಒಂದಾನೊಂದು ಕಾಡು. ಅಲ್ಲಿ ಬಗೆಬಗೆಯ ಪ್ರಾಣಿಗಳು ವಾಸವಾಗಿದ್ದವು. ಆನೆಯು ಆ ಕಾಡಿನ ಅಧಿಪತಿಯಾಗಿತ್ತು. ಅದು ಆಗಾಗ ಸಭೆ ಕರೆದು ಅವುಗಳ ಕ್ಷೇಮ ಸಮಾಚಾರವನ್ನು ವಿಚಾರಿಸುತ್ತಿತ್ತು. ಊರಿನಲ್ಲಿರುವ ಪ್ರಾಣಿಗಳೊಂದಿಗೂ ಸ್ನೇಹವನ್ನು ಬೆಳೆಸಿತ್ತು. ಅವುಗಳಿಗೂ ಸಭೆಯಲ್ಲಿ ಪಾಲ್ಗೊಳ್ಳಲು ಅವಕಾಶ ನೀಡುತ್ತಿತ್ತು. ಉತ್ತಮ ನಾಯಕತ್ವಗುಣ ಹೊಂದಿದ ಆನೆಯು ಎಲ್ಲ ಪ್ರಾಣಿಗಳಿಂದಲೂ ಮೆಚ್ಚುಗೆಯನ್ನು ಗಳಿಸಿತ್ತು.

ಹೀಗೆಯೇ ಒಂದು ದಿನ ಸಭೆ ಸೇರಿತ್ತು. ಎಲ್ಲ ಪ್ರಾಣಿಗಳು ಅಂದು ಮನುಷ್ಯರ ಮೇಲೆ ಬಹಳವಾಗಿ ದೂರು ಹೇಳಿದ್ದವು. ಮಾನವನಿಂದ ಆಗುತ್ತಿರುವ ತೊಂದರೆ ಹಾಗೂ ಪರಿಹಾರ ಕುರಿತು ಚರ್ಚಿಸಿದ್ದವು. ಮನುಷ್ಯನಿಗೆ ತಿಳಿಹೇಳಲು ಫಲಕದಲ್ಲಿ ವಿವರ ಬರೆದು ತರಲು ಆನೆಯು ಸೂಚನೆ ನೀಡಿತ್ತು. ಅದರಂತೆ ಪ್ರಾಣಿಗಳು ಈ ದಿನದ ಸಭೆಗೆ ಸಿದ್ಧವಾಗಿ ಬಂದಿದ್ದವು. ನಾಯಕನ ಸೂಚನೆಯಂತೆ ಅವುಗಳು ತಮ್ಮ ಫಲಕಗಳನ್ನು ಹಿಡಿದುಕೊಂಡು ಸಾಲಾಗಿ ನಿಂತಿದ್ದವು. ಆನೆಯು ಅವುಗಳನ್ನು ಒಂದೊಂದಾಗಿ ಓದುತ್ತಾ ಮುನ್ನಡೆಯಿತು.



‘ನಮ್ಮನ್ನು ಹೆಚ್ಚು ಹೆಚ್ಚು ದುಡಿಸಿಕೊಳ್ಳುತ್ತೀರಿ. ಕಡಿಮೆ ಆಹಾರ ನೀಡುತ್ತೀರಿ. ನಮ್ಮ ಸೇವೆ ಬೇಕು; ನಾವು ಮಾತ್ರ ಬೇಡ ಅಲ್ಲವೆ? ನಮ್ಮ ಸೇವೆಯನ್ನು ಮರೆಯದಿರಿ’.


‘ದಯವಿರಲಿ ಸಕಲ ಪ್ರಾಣಿಗಳೆಲ್ಲರಲಿ’.





‘ನಮ್ಮ ಬದುಕಿನ ಆಧಾರತಾಣ ಕಾಡು. ಅದನ್ನು ನಾಶ ಮಾಡುತ್ತಿದ್ದೀರಿ. ನಮಗೆ ತಿನ್ನಲು ಹುಲ್ಲಿಲ್ಲ. ಮಲಗಲು ಮರದ ನೆರಳಿಲ್ಲ. ಕಾಡು ನಿಮಗೂ ಬೇಕು. ನಮಗೂ ಬೇಕು.’

‘ನಮ್ಮನ್ನು ಉಳಿಸಿರಿ, ನೀವೂ ಉಳಿಯಿರಿ.’



‘ನೀರು ಅಮೂಲ್ಯ ಸಂಪತ್ತು. ಅದನ್ನು ಹಾಳು ಮಾಡುತ್ತಿದ್ದೀರಿ. ಕಸಕಡ್ಡಿ ಹಾಕಿ ಕಲ್ಮಷಗೊಳಿಸುತ್ತಿದ್ದೀರಿ. ನಮಗೆ ನೀರಿನಲ್ಲಿರಲು ಕಷ್ಟವಾಗುತ್ತಿದೆ. ನೀರು ನಮ್ಮೆಲ್ಲರ ಜೀವ.’

‘ನೀರನ್ನು ದುರ್ಬಳಕೆ ಮಾಡಬೇಡಿ, ಕಲುಷಿತಗೊಳಿಸಬೇಡಿ.’




‘ಎಲ್ಲವನ್ನೂ ನೀವೇ ತಿನ್ನುತ್ತೀರಿ. ತಿಂದು, ಹೆಚ್ಚಾಗಿ ಹಾಳು ಮಾಡುತ್ತೀರಿ. ನಮ್ಮ ಹೊಟ್ಟೆ ಹಸಿವಿನ ಬಗ್ಗೆ ನೀವು ಗಮನಿಸುವುದಿಲ್ಲ. ನಮಗೇನೂ ಉಳಿಸುವುದಿಲ್ಲ.’

‘ನೀವೂ ತಿನ್ನಿ, ನಮಗೂ ತಿನ್ನಲು ಬಿಡಿ.’

‘ನಾವೂ ನಡೆದಾಡಬೇಕು, ಓಡಾಡಬೇಕು. ನಮಗೂ ದಾರಿ ಬಿಡಿ. ಹಾದಿ ಬೀದಿಗಳಲ್ಲಿ ನೀವು ಮತ್ತು ನಿಮ್ಮ ವಾಹನಗಳೇ ತುಂಬಿವೆ. ಮೈಮೇಲೆ ಎಚ್ಚರವಿಲ್ಲದಂತೆ ಸಾಗುತ್ತೀರಿ. ಇತರರಿಗೂ ತೊಂದರೆ ಕೊಡುತ್ತೀರಿ.’

‘ಸರಿಯಾಗಿ ಚಲಿಸಿರಿ, ಚಲಿಸಲು ಬಿಡಿ.’






‘ನಮಗೂ ಶಾಂತಿ, ನೆಮ್ಮದಿ ಬೇಕು. ನೋವಿನಲ್ಲೂ, ನಲಿವಿನಲ್ಲೂ ಪಟಾಕಿ ಸಿಡಿಸುತ್ತೀರಿ. ನಮ್ಮನ್ನು ಓಡಿಸಲು ಮದ್ದು ಗುಂಡುಗಳನ್ನು ಹಾರಿಸುತ್ತೀರಿ. ನಮ್ಮ ಹೃದಯವೇ ಸಿಡಿದು ಹೋದಂತಾಗುತ್ತದೆ.’


‘ಮದ್ದು ಗುಂಡು ಸಿಡಿಸಬೇಡಿ, ಶಾಂತಿಯನ್ನು ಕೆಡಿಸಬೇಡಿ.’





'ನಿಮ್ಮನ್ನು ಮೆಚ್ಚಿಸಲು ನಮಗೂ ಮನಸ್ಸಿದೆ. ನೀವು ಟಿ.ವಿ. ನೋಡುತ್ತೀರಿ, ಇಲ್ಲವೆ ಮೊಬೈಲನ್ನು ಮುದ್ದಿಸುತ್ತೀರಿ. ಆದರೆ ನಿಮ್ಮ ಪಕ್ಕದಲ್ಲೇ ಇರುವ ನಮ್ಮನ್ನು ಕಣ್ಣೆತ್ತಿ ನೋಡುವುದಿಲ್ಲ. ಈ ಉಪೇಕ್ಷೆ ಬೇಡ.'

'ನಾವೂ ನಿಮ್ಮೊಂದಿಗಿದ್ದೇವೆ, ನಮ್ಮನ್ನೂ ಮುದ್ದಿಸಿರಿ'.



'ನಾವು ರೈತನಿಗೂ, ನಿಮಗೂ ಮಿತ್ರರು. ಬೇಗ ಬೆಳೆ ತೆಗೆಯಲು ವಿಷದ ಗೊಬ್ಬರ ಹಾಕುತ್ತೀರಿ. ಥರಥರದ ಔಷಧ ಚಿಮುಕಿಸುತ್ತೀರಿ. ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸುವ ನಮ್ಮನ್ನು ಮತ್ತು ಅನ್ನ ನೀಡುವ ಮಣ್ಣನ್ನು ಏಕೆ ಸಾಯಿಸುತ್ತೀರಿ?'

'ರಕ್ಷಕರಾಗಿ, ರಾಕ್ಷಸರಾಗದಿರಿ.'

ಎಲ್ಲವನ್ನೂ ಓದಿದ ಆನೆ, ಎಲ್ಲರಿಗೂ 'ಶಹಬ್ಬಾಸ್' ಎಂದಿತು. 'ಚೆನ್ನಾಗಿ ಬರೆದಿದ್ದೀರಿ. ಸ್ವಲ್ಪ ಖಾರವಾಯಿತಲ್ಲವೆ? ಎಲ್ಲ ಮನುಷ್ಯರೂ ಕೆಟ್ಟವರಲ್ಲ; ಎಲ್ಲರ ಕುರಿತಾಗಿಯೂ ಈ ರೀತಿಯ ಆಕ್ರೋಶ ಸಲ್ಲದು. ಇರಲಿ. ಇವುಗಳನ್ನು ಇನ್ನೊಮ್ಮೆ ಪರಿಶೀಲಿಸಿ ಚರ್ಚಿಸೋಣ. ಅನಂತರ ಕಾಡಿನ ಅಂಚಿನ ರಸ್ತೆಯ ಬದಿಯಲ್ಲಿ ಪ್ರದರ್ಶಿಸೋಣ. ಬನ್ನಿರಿ, ಎಲ್ಲರೂ ಮೊದಲು ಊಟಮಾಡೋಣ. ಭೋಜನ ಶಾಲೆಗೆ ನಡೆಯಿರಿ.' ಎಂದು ಹೇಳಿದ ಅಧಿಪತಿಯು ಆ ಕಡೆಗೆ ಹೆಜ್ಜೆ ಹಾಕಿತು.



ಕ್ಷೇತ್ರ : ಓದುವುದು.
ಸಾಮರ್ಥ್ಯ : ಚಿತ್ರಕಥೆ, ಭಿತ್ತಿಪತ್ರಗಳನ್ನು ಓದುವುದು.

ಆಶಯ

ಎಲ್ಲ ಜೀವಿಗಳಿಗೂ ಬದುಕಲು ಸಮಾನ ಹಕ್ಕಿದೆ. ಆದರೆ ಮನುಷ್ಯ ತನ್ನ ಸ್ವಾರ್ಥ ನಿಮಿತ್ತವಾಗಿ ಅದಕ್ಕೆ ಅವಕಾಶ ನೀಡುತ್ತಿಲ್ಲ. ಕೆಲವೊಮ್ಮೆ ಆತ ತನ್ನ ಶಾಂತಿ ನೆಮ್ಮದಿಗಳಿಗೆ ತಾನೇ ಅಡ್ಡಿಯಾಗುತ್ತಾನೆ. ಮನುಷ್ಯ ಮಾಡುತ್ತಿರುವ ಸಾಧುವಲ್ಲದ ಕಾರ್ಯಗಳನ್ನು ಪ್ರಾಣಿಗಳ ಮೂಲಕ ಹೇಳಿಸಿ, ಆ ಮೂಲಕ ಆತನನ್ನು ಯೋಚನೆಗೆ ಹಚ್ಚುವುದು ಇಲ್ಲಿನ ಆಶಯವಾಗಿದೆ.

ಅ. ಅರ್ಥ ತಿಳಿಯಿರಿ.

ಕಾಡು– ಅರಣ್ಯ, ಅಡವಿ. ಅಧಿಪತಿ–ಒಡೆಯ, ನಾಯಕ. ಅವಕಾಶ – ಸಂದರ್ಭ, ಎಡೆ. ಮೆಚ್ಚುಗೆ–ತೃಪ್ತಿ, ಪ್ರಶಂಸೆ. ಗಳಿಸು–ಸಂಪಾದಿಸು, ಪಡೆಯು. ದೂರು – ನಿಂದಿಸು, ಆಪಾದನೆ. ಚರ್ಚೆ–ವಾಗ್ವಾದ, ತರ್ಕ. ಮುನ್ನಡೆ–ಏಳಿಗೆ, ಪ್ರಗತಿ. ಸೇವೆ–ಉಪಚಾರ, ಆರಾಧನೆ. ಸಕಲ – ಎಲ್ಲ, ಇಡಿಯ. ತಾಣ – ಸ್ಥಾನ, ಸ್ಥಳ. ಅಮೂಲ್ಯ – ಬೆಲೆ ಕಟ್ಟಲಾಗದ. ಕಲ್ಮಷ–ಕೊಳೆ, ಕಲುಷಿತ. ಸಾಗು–ಚಲಿಸು, ಮುಂದಕ್ಕೆ ಹೋಗು. ಸಿಡಿದುಹೋಗು–ಚಿಮ್ಮು, ಸ್ಫೋಟಗೊಳ್ಳು. ಮುದ್ದಿಸು – ಪ್ರೀತಿಸು, ಮುದ್ದಾಡು, ಉಪೇಕ್ಷೆ–ಅಲಕ್ಷ್ಯ, ಕಡೆಗಣಿಸುವಿಕೆ. ಫಲವತ್ತತೆ – ಫಲವುಳ್ಳ, ಸಾರವತ್ತಾದ. ರಾಕ್ಷಸ–ದಾನವ, ದುಷ್ಟಶಕ್ತಿ. ಖಾರ–ತೀಕ್ಷ್ಣ, ಕಟು. ಆಕ್ರೋಶ–ಗರ್ಜನೆ, ಕೋಪಿಸುವಿಕೆ. ಅಂಚು – ಪಕ್ಕ, ಮೇರೆ.

ಆ. ವಿವರ ತಿಳಿಯಿರಿ.

ಕ್ಷೇಮ ಸಮಾಚಾರ : ಕುಶಲ, ಆರೋಗ್ಯದ ಕುರಿತಾದ ವಿಷಯ.
ನಾಯಕತ್ವ ಗುಣ : ಆಲೋಚಿಸಿ ಜವಾಬ್ದಾರಿಯನ್ನು ನಿರ್ವಹಿಸುವ ಮನೋಭಾವ.
ಫಲಕ : ಬರೆಯುವ ಹಾಳೆ, ವಿವರ ಬರೆದು ಹಾಕುವ ಹಲಗೆ.
ಪಟಾಕಿ : ಉತ್ಸವಾದಿಗಳಲ್ಲಿ ಹಾರಿಸುವ ಸಣ್ಣ ಸಿಡಿಮದ್ದು.
ಮದ್ದು : ಬಂದೂಕು, ಕೋವಿಗಳಲ್ಲಿ ತುಂಬುವ ಸ್ಫೋಟಕ ಪುಡಿ.
ವಿಷದ ಗೊಬ್ಬರ : ರಾಸಾಯನಿಕ ವಸ್ತುಗಳನ್ನೊಳಗೊಂಡ ಗೊಬ್ಬರ.
ಪರಿಶೀಲಿಸು : ಸೂಕ್ಷ್ಮವಾಗಿ ವಿಚಾರಿಸಿ ನೋಡುವುದು.
ಪ್ರದರ್ಶಿಸು : ಕಾಣುವಂತೆ ಮಾಡು, ಗಮನಿಸುವಂತೆ ತೋರಿಸು.



ಇ. ಕೆಳಗಿನ ಪ್ರಶ್ನೆಗಳಿಗೆ ಉತ್ತರ ಹೇಳಿರಿ.

೧. ಕಾಡಿನ ಅಧಿಪತಿ ಯಾರು?

೨. ಆನೆಯು ಯಾವುದರಲ್ಲಿ ವಿವರ ಬರೆದು ತರಲು ಸೂಚನೆ ನೀಡಿತ್ತು?

೩. 'ಮನುಷ್ಯರು ಕಡಿಮೆ ಆಹಾರ ನೀಡುತ್ತಾರೆ' ಎಂದು ದೂರು ಬರೆದವರು ಯಾರು?

೪. 'ಕಾಡು ನಿಮಗೂ ಬೇಕು' ಎಂದು ಎಚ್ಚರಿಸಿದವರು ಯಾರು?

೫. 'ಮದ್ದು ಗುಂಡುಗಳನ್ನು ಸಿಡಿಸಬೇಡಿ' ಎಂದು ಹೇಳಿದವರು ಯಾರು?

ವ್ಯಾಕರಣ ಮಾಹಿತಿ

ಅ. ವಚನಗಳು

<u>ಆನೆಯು</u> ಎಲ್ಲರ ಮೆಚ್ಚುಗೆಯನ್ನು ಗಳಿಸಿತ್ತು.
ಕಾಡಿನಲ್ಲಿ ವಿವಿಧ ರೀತಿಯ <u>ಪ್ರಾಣಿಗಳು</u> ವಾಸವಾಗಿದ್ದವು.

ಮೇಲಿನ ವಾಕ್ಯಗಳನ್ನು ಓದಿ. ಅಡಿಗೆರೆ ಎಳೆದಿರುವ ಪದಗಳನ್ನು ಗಮನಿಸಿರಿ.
'ಆನೆ' ಎಂಬುದು 'ಒಂದು ಆನೆ' ಎಂಬುದನ್ನು ಸೂಚಿಸುತ್ತದೆ. 'ಪ್ರಾಣಿಗಳು' ಎಂಬುದು 'ಒಂದಕ್ಕಿಂತ ಹೆಚ್ಚು' ಎಂಬುದನ್ನು ಸೂಚಿಸುತ್ತದೆ.

<u>ಜಿಂಕೆಯು</u> ಈ ದಿನದ ಸಭೆಗೆ ಸಿದ್ಧವಾಗಿ ಬಂದಿತ್ತು.
<u>ಬೆಕ್ಕುಗಳು</u> ಸಭೆಯಲ್ಲಿ ಭಾಗವಹಿಸಿದ್ದವು.

ಮೇಲಿನ ವಾಕ್ಯಗಳನ್ನು ಓದಿ ಅಡಿಗೆರೆ ಎಳೆದಿರುವ ಪದಗಳನ್ನು ಗಮನಿಸಿರಿ. 'ಜಿಂಕೆ' ಎಂಬುದು 'ಒಂದು' ಎಂಬುದನ್ನು ಸೂಚಿಸುತ್ತದೆ. ಇದು ಏಕವಚನ. 'ಬೆಕ್ಕುಗಳು' ಎಂಬುದು 'ಒಂದಕ್ಕಿಂತ ಹೆಚ್ಚು' ಎಂಬುದನ್ನು ಸೂಚಿಸುತ್ತದೆ. ಇದು ಬಹುವಚನ.

ಏಕವಚನ ಮತ್ತು ಬಹುವಚನಗಳಿಗೆ ಇನ್ನೂ ಕೆಲವು ಉದಾಹರಣೆಗಳನ್ನು ತಿಳಿಯೋಣ.

ಏಕವಚನ	ಬಹುವಚನ
ಪತ್ರ	ಪತ್ರಗಳು
ನಾಯಕ	ನಾಯಕರು
ತಮ್ಮ	ತಮ್ಮಂದಿರು
ರೈತ	ರೈತರು



ಆ. ಓದಿಗೆ ಮನ್ನಣೆ

೧. ವಿವಿಧ ಪ್ರಾಣಿಗಳ ಜೀವನ ಕ್ರಮದ ಬಗ್ಗೆ ಓದಿ ತಿಳಿಯಿರಿ.

೨. ವಿವಿಧ ಸಂಪತ್ತಿನ ಪ್ರಯೋಜನಗಳನ್ನು ಕುರಿತು ತಿಳಿಯಿರಿ.

೩. ಪತ್ರಿಕೆಗಳಲ್ಲಿ ಬರುವ ವಾಚಕರ ಸಲಹೆಗಳನ್ನು ಓದಿರಿ.

೪. ಚಿತ್ರಕಥೆ, ಭಿತ್ತಿಪತ್ರಗಳನ್ನು ಗೆಳೆಯರೊಂದಿಗೆ ಓದಿ ನಲಿಯಿರಿ.

ಇ. ಶುಭನುಡಿ


೧. ಇತರರ ಮಾತುಗಳಿಗೂ ಮನ್ನಣೆ ಕೊಡಿರಿ.

೨. ಸಂಪನ್ಮೂಲಗಳನ್ನು ಅಗತ್ಯವಿದ್ದಷ್ಟು ಮಾತ್ರ ಬಳಸಿರಿ.

೩. ಉತ್ತಮ ನಾಯಕನಿಂದ ಅತ್ಯುತ್ತಮ ಕೆಲಸ ಸಾಧ್ಯ.

೪. ವನಗಳನ್ನು ಬೆಳೆಸಿರಿ, ವನ್ಯ ಜೀವಿಗಳನ್ನು ಉಳಿಸಿರಿ.

ಪೂರಕ ಪಾಠ : ಇರುವೆ ಮತ್ತು ಬೂಟುಗಳು



ಒಂದು ನದಿಯ ಪಕ್ಕದಲ್ಲಿ ಒಂದು ಇರುವೆ ಇತ್ತು. ಅದು ಬೂಟುಗಳನ್ನು ತಯಾರಿಸಲು ಯೋಚಿಸಿತು. ಶ್ರಮಪಟ್ಟು ಎರಡು ಬೂಟುಗಳನ್ನು ತಯಾರಿಸಿತು.



ಇರುವೆ ಬೂಟುಗಳನ್ನು ಹೊತ್ತುಕೊಂಡು ಮಾರಲು ಹೊರಟಿತು. ಮರದ ಮೇಲಿರುವ ಮಂಗನನ್ನು ನೋಡಿತು. ಬೂಟುಗಳನ್ನು ಕೊಳ್ಳಲು ಕೇಳಿತು. ಮಂಗ 'ಅವು ನನಗೆ ಚಿಕ್ಕವಾಗುತ್ತವೆ ಬೇಡ' ಎಂದಿತು.



ಮುಂದೆ ನಡೆದ ಇರುವೆ ಅಲ್ಲೊಂದು ಗಿಳಿಯನ್ನು ನೋಡಿತು. ಬೂಟುಗಳನ್ನು ಕೊಳ್ಳಲು ಕೇಳಿತು. 'ನನ್ನ ಕಾಲುಗಳು ಟಿಸಿಲುಗಳಂತಿವೆ. ಈ ಬೂಟುಗಳು ಸರಿಹೊಂದುವುದಿಲ್ಲ' ಎಂದು ಹೇಳಿತು.



ಮತ್ತೆ ಮುಂದೆ ನಡೆದ ಇರುವೆ ಚಿಟ್ಟೆಯನ್ನು ಕಂಡಿತು. ಬೂಟುಗಳನ್ನು ಕೊಳ್ಳಲು ಕೇಳಿತು. 'ನಾನು ಯಾವಾಗಲೂ ಹಾರಾಡುತ್ತಿರುತ್ತೇನೆ . ನನಗೆ ಬೂಟುಗಳ ಆವಶ್ಯಕತೆ ಇಲ್ಲ' ಎಂದಿತು.

ಇನ್ನೂ ಮುಂದೆ ಸಾಗಿದ ಇರುವೆ ಮೊಲವನ್ನು ನೋಡಿತು. ಬೂಟುಗಳನ್ನು ಕೊಳ್ಳಲು ಕೇಳಿತು. ಮೊಲವು 'ನನಗೆ ನಾಲ್ಕು ಕಾಲುಗಳಿವೆಯಲ್ಲ, ಬೂಟುಗಳು ಎರಡೇ ಇವೆ. ಬೇಡ' ಎಂದಿತು.




ಇರುವೆ ಸಪ್ಪೆಮೋರೆ ಹಾಕಿಕೊಂಡು ಹಿಂದಿರುಗಿತು. ಮತ್ತೆ ಎರಡು ಬೂಟುಗಳನ್ನು ತಯಾರಿಸಿಕೊಂಡು ಮೊಲಕ್ಕೆ ಮಾರಲೆಂದು ಹೊರಟಿತು. ಅಲ್ಲಿ ಮೊಲ ಕಾಣಲಿಲ್ಲ. ಸುತ್ತಲೂ ನೋಡಿತು. ಮೊಲ ಎಲ್ಲೂ ಕಾಣಲಿಲ್ಲ.

ಇರುವೆ ಇನ್ನೂ ಮುಂದೆ ಮುಂದೆ ನಡೆಯಿತು. ಅಲ್ಲೊಂದು ಜೇಡ ಕಂಡಿತು. ಬೂಟುಗಳನ್ನು ಕೊಳ್ಳಲು ಕೇಳಿತು. 'ನನಗೆ ಆರು ಕಾಲುಗಳಿವೆ. ನಿನ್ನ ಹತ್ತಿರ ನಾಲ್ಕೇ ಬೂಟುಗಳಿವೆಯಲ್ಲ?' ಎಂದಿತು.




'ಇರುವೆ ಮತ್ತೆ ಹಿಂದಿರುಗಿ ಇನ್ನೂ ಎರಡು ಬೂಟುಗಳನ್ನು ತಯಾರಿಸಿಕೊಂಡು ಜೇಡದ ಹತ್ತಿರ ಹೋಯಿತು. 'ತೆಗೆದುಕೋ ಆರು ಬೂಟುಗಳಿವೆ' ಎಂದಿತು. ಜೇಡ ಸ್ವಲ್ಪ ಯೋಚಿಸಿ 'ನಾನು ಬೂಟುಗಳನ್ನು ಹಾಕಿಕೊಂಡು ನಡೆದರೆ ಬಲೆ ಹರಿದುಹೋಗುತ್ತದೆ. ನನಗೆ ಬೇಡ' ಎಂದಿತು. ಇರುವೆಗೆ ಬೇಸರವಾಯಿತು.




ಇರುವೆ ದೂರ ದೂರ ಸಾಗಿತು. ಸಮುದ್ರದ ತೀರಕ್ಕೆ ಹೋಯಿತು. ಅಲ್ಲಿ ಆಕ್ಟೋಪಸ್ ಕಂಡಿತು. ಬೂಟುಕೊಳ್ಳಲು ಕೇಳಿತು. 'ಅದಕ್ಕೆ ಆಕ್ಟೋಪಸ್ ನನಗೆ ಎಂಟು ಕಾಲುಗಳಿವೆಯಲ್ಲ' ಎಂದಿತು.

ಇರುವೆ ಮತ್ತೆ ಎರಡು ಬೂಟುಗಳನ್ನು ತಯಾರಿಸಿಕೊಂಡು ಆಕ್ಟೋಪಸ್‌ನ ಬಳಿಗೆ ಹೋಯಿತು. 'ತೆಗೆದುಕೋ ಎಂಟು ಬೂಟುಗಳಿವೆ' ಎಂದಿತು. ಅದಕ್ಕೆ ಆಕ್ಟೋಪಸ್ 'ನನ್ನ ಕಾಲುಗಳ ತುದಿ ಚೂಪಾಗಿವೆ, ಬೂಟುಗಳನ್ನು ಹಾಕಿದರೆ ಅವು ಜಾರುತ್ತವೆ. ಬೇಡ' ಎಂದಿತು.

ಇರುವೆಗೆ ತುಂಬಾ ಬೇಸರವಾಗಿ ಹಿಂದಿರುಗಿ ಹೊರಟಿತು. ಅಲ್ಲೊಂದು ಶತಪದಿ ಕಂಡಿತು. ಬೂಟುಗಳನ್ನು ಕೊಳ್ಳಲು ಕೇಳಿತು. ಅದಕ್ಕೆ ಶತಪದಿಯು 'ನನಗೆ ಇಷ್ಟೊಂದು ಕಾಲುಗಳಿವೆಯಲ್ಲ' ಎಂದಿತು.



'ಇರುವೆ ಮತ್ತೆ ಹಿಂದಿರುಗಿ ಶ್ರಮವಹಿಸಿ ಶತಪದಿಗೆ ಬೇಕಾಗುವಷ್ಟು ಬೂಟುಗಳನ್ನು ತಯಾರಿಸಿಕೊಂಡು ಶತಪದಿ ಇದ್ದಲ್ಲಿಗೆ ಹೋಯಿತು. ಆದರೆ ಅಲ್ಲಿ ತುಂಬ ಶತಪದಿಗಳಿದ್ದವು. ಇರುವೆಗೆ ದಾರಿ ತೋಚಲಿಲ್ಲ. ಯಾರಿಗೆಂದು ಕೊಡುವುದು?



ಇರುವೆ ಮನೆಯ ಕಡೆಗೆ ಹೊರಟಿತು. ದಾರಿಯಲ್ಲಿ ಸಹಸ್ರಪದಿ ಕಾಣಿಸಿತು. ಇರುವೆ ಬೂಟುಗಳನ್ನು ಕೊಳ್ಳಲು ಕೇಳಿತು. 'ಇಷ್ಟು ಬೂಟುಗಳು ನನಗೆ ಸಾಕಾಗುವುದಿಲ್ಲ ನನಗೆ ಇಷ್ಟೊಂದು ಕಾಲುಗಳಿವೆಯಲ್ಲ' ಎಂದಿತು ಸಹಸ್ರಪದಿ. ಇರುವೆಗೆ ತುಂಬಾ ಬೇಸರ ಮತ್ತು ಆಯಾಸವಾಗಿತ್ತು. ಆಗ ಸಹಸ್ರಪದಿ 'ನಿರಾಶೆಯಾಗಬೇಡ, ನನಗೆ ಬೇಕಾಗುವಷ್ಟು ಬೂಟುಗಳನ್ನು ತಯಾರಿಸಿಕೊಂಡು ಬಾ. ಕೊಂಡುಕೊಳ್ಳುತ್ತೇನೆ. ' ಎಂದಿತು. ಸಹಸ್ರಪದಿಯ ಮಾತಿನಿಂದ ಇರುವೆಗೆ ಉತ್ಸಾಹ ಬಂದಿತು. ಇನ್ನಷ್ಟು ಬೂಟುಗಳನ್ನು ತಯಾರಿಸಲು ಮನೆಯಕಡೆಗೆ ಹೊರಟಿತು.

ಗಮನಿಸಿರಿ.

1. ಶತಪದಿ : ಒಂದು ಬಗೆಯ ಹುಳು, ಜರಿ.
2. ಸಹಸ್ರಪದಿ : ಸಾವಿರ ಕಾಲುಗಳಿವೆಯೆಂದು ಭಾವಿಸಲಾದ ಕೀಟ, ಒನಕೆ ಬಂಡೆ ಹುಳು.

ಪ್ರಶ್ನೆಗಳಿಗೆ ಉತ್ತರ ಹೇಳಿರಿ.

1. ಚಿಟ್ಟೆ ಬೂಟುಗಳನ್ನು ಏಕೆ ಬೇಡವೆಂದಿತು?
2. ಜೇಡನನ್ನು ಮೊದಲು ಕಂಡಾಗ ಇರುವೆಯ ಹತ್ತಿರ ಎಷ್ಟು ಬೂಟುಗಳಿದ್ದವು?
3. ಗಿಳಿಯು ಬೂಟುಗಳನ್ನು ಏಕೆ ಕೊಳ್ಳಲಿಲ್ಲ?
4. ಬೂಟುಗಳನ್ನು ಕೊಳ್ಳುತ್ತೇನೆಂದು ಕೊನೆಗೆ ಯಾರು ಹೇಳಿದರು?
5. ಸಮುದ್ರ ತೀರದ ಬಳಿ ಇರುವೆ ಯಾರನ್ನು ನೋಡಿತು?

೫ ಆಸೆ, ಭಕ್ತಿ, ಆದರ್ಶ




ಆಸೆ

ಆಸೆಯೆಂಬುದು ಅರಸಿಂಗಲ್ಲದೆ ಶಿವಭಕ್ತರಿಗುಂಟೆ ಅಯ್ಯಾ?
ರೋಷವೆಂಬುದು ಯಮದೂತರಿಗಲ್ಲದೆ
ಅಜಾತರಿಗುಂಟೆ ಅಯ್ಯಾ?
ಈಸಕ್ಕಿಯಾಸೆ ನಿಮಗೇಕೆ? ಈಶ್ವರನೊಪ್ಪ
ಮಾರಯ್ಯಪ್ರಿಯ ಅಮರೇಶ್ವರ ಲಿಂಗಕ್ಕೆ ದೂರ ಮಾರಯ್ಯ.



ಭಕ್ತಿ



ಗರ್ವದಿಂದ ಮಾಡುವ ಭಕ್ತಿ ದ್ರವ್ಯದ ಕೇಡು;
ನಡೆಯಿಲ್ಲದ ನುಡಿ ಅರಿವಿಂಗೆ ಹಾನಿ;
ಕೊಡದೆ ತ್ಯಾಗಿ ಎನಿಸಿಕೊಂಬುದು ಮುಡಿಯಿಲ್ಲದ ಶೃಂಗಾರ;
ದೃಢವಿಲ್ಲದ ಭಕ್ತಿ ಒಡೆದ ಕುಂಭದಲಿ
ಸುಜಲವ ತುಂಬಿದಂತೆ
ಮಾರಯ್ಯಪ್ರಿಯ ಅಮರೇಶ್ವರ
ಲಿಂಗವ ಮುಟ್ಟದ ಭಕ್ತಿ.

– ಆಯ್ದಕ್ಕಿ ಲಕ್ಕಮ್ಮ

ಆದರ್ಶ

ತುಕ್ಕು ಹಿಡಿದು ಉಳಿವುದಕ್ಕಿಂತ
ತಿಕ್ಕಿ ಬಳಸಿ ಅಳಿವುದು ಮೇಲಯ್ಯ;
ಹುಳು ಹತ್ತಿ ಕೊಳೆವುದಕ್ಕಿಂತ
ಮಣ್ಣ ಬೆರೆತು ಮೊಳೆವುದು ಮೇಲಯ್ಯ;
ಇಟ್ಟು ನುಸಿ ಮುಟ್ಟಿ ನಶಿಸುವುದಕ್ಕಿಂತ
ತೊಟ್ಟು ಉಟ್ಟು ಹರಿವುದು ಮೇಲಯ್ಯ;
ಉಂಡು ಮಲಗಿ ಬೊಜ್ಜು
ಬೆಳೆಸುವುದಕ್ಕಿಂತ
ಮಾಡಿ ಮಾಡಿ ಮಡಿವುದು ಮೇಲಯ್ಯ;
ಓದಿ, ಬೋಧಿಸಿ, ವಾದಿಸುವುದಕ್ಕಿಂತ
ಅರಿತು, ಆಚರಿಸಿ, ಆದರ್ಶವಾಗುವುದು
ಮೇಲಯ್ಯ;
ಸ್ವತಂತ್ರಧೀರ ಸಿದ್ಧೇಶ್ವರಾ,
ಮಣಿಯನೆಣಿಸಿ ದಣಿವುದಕ್ಕಿಂತ
ಜನರ ತಣಿಸಿ ಕುಣಿವುದು ಮೇಲಯ್ಯ!

–ಸಿದ್ಧಯ್ಯ ಪುರಾಣಿಕ





ಕ್ಷೇತ್ರ : ಬರೆಯುವುದು.
ಸಾಮರ್ಥ್ಯ : ಸರಿಯಾದ ಕ್ರಮದಲ್ಲಿ ಸ್ಪಷ್ಟವಾಗಿ ಬರೆಯುವುದು.

ಆಶಯ

'ಆಸೆಯು ದುಃಖಕ್ಕೆ ಮೂಲ' ಎಂಬುದು ಬುದ್ಧನಿಂದ ಮೊದಲ್ಗೊಂಡು ಹರಿದು ಬಂದ ಬೋಧನೆಯಾಗಿದೆ. ರೋಷ, ಗರ್ವಗಳು ಮಾನವನ ಶತ್ರುಗಳು. ನಿಜಭಕ್ತಿ ಮನುಷ್ಯನನ್ನು ದೇವರು ಮೆಚ್ಚುವಂತೆ ಮಾಡುತ್ತದೆ. ಇದಕ್ಕಾಗಿ ಮನುಷ್ಯ ಸದಾ ಕಾಯಕದಲ್ಲಿ ತೊಡಗಬೇಕು. ಯಾವುದು ಒಳ್ಳೆಯದು ಆ ಕಾರ್ಯವನ್ನೇ ಮಾಡಬೇಕು. ಸಮಾಜದಲ್ಲಿ ಒಳ್ಳೆಯ ಪ್ರಜೆಯಾಗಿ, ಆದರ್ಶವ್ಯಕ್ತಿಯಾಗಿ ಬಾಳಬೇಕೆಂಬುದು ಇಲ್ಲಿನ ಆಶಯವಾಗಿದೆ.

ವಚನಕಾರರ ಪರಿಚಯ

೧. ಆಯ್ದಕ್ಕಿ ಲಕ್ಕಮ್ಮ :

ಆಯ್ದಕ್ಕಿ ಲಕ್ಕಮ್ಮ ೧೨ನೆಯ ಶತಮಾನದ ಒಬ್ಬ ಶಿವಶರಣೆ. ಬಸವಣ್ಣನವರ ಸಮಕಾಲೀನಳು. ಕಾಯಕಯೋಗಿ ಆಯ್ದಕ್ಕಿ ಮಾರಯ್ಯನ ಧರ್ಮಪತ್ನಿ. ಇವರು ಮೂಲತಃ ರಾಯಚೂರು ಜಿಲ್ಲೆಯ, ಲಿಂಗಸಗೂರು ತಾಲೂಕಿನ ಅಮರೇಶ್ವರ ಎಂಬ ಗ್ರಾಮದವರು. ಬಸವಣ್ಣನವರ ಕೀರ್ತಿಯನ್ನು ಕೇಳಿದ ಇವರು ಕಲ್ಯಾಣಕ್ಕೆ ಬಂದು ನೆಲೆಸುತ್ತಾರೆ. ಮಹಾಮನೆಯ ಅಂಗಳದಲ್ಲಿ ಬಿದ್ದ ಅಕ್ಕಿಯನ್ನು ಆಯ್ದು ಜಂಗಮ ದಾಸೋಹ ನಡೆಸುತ್ತಿದ್ದರು. 'ಮಾರಯ್ಯಪ್ರಿಯ ಅಮರೇಶ್ವರ ಲಿಂಗ' ಎಂಬುದು ಆಯ್ದಕ್ಕಿ ಲಕ್ಕಮ್ಮನ ವಚನಗಳ ಅಂಕಿತವಾಗಿದೆ

೨. ಸಿದ್ಧಯ್ಯ ಪುರಾಣಿಕ :



ಸಿದ್ಧಯ್ಯ ಪುರಾಣಿಕರು ಆಧುನಿಕ ವಚನಕಾರರಲ್ಲಿ ಒಬ್ಬರು. ಇವರು ೧೮-೦೮-೧೯೧೮ ರಂದು ರಾಯಚೂರು ಜಿಲ್ಲೆಯ, ಯಲಬುರ್ಗಿ ತಾಲೂಕಿನ ದ್ಯಾಂಪೂರ ಎಂಬ ಗ್ರಾಮದಲ್ಲಿ ಜನಿಸಿದರು. ಇವರ ತಂದೆಯ ಹೆಸರು ಕಲ್ಲಿನಾಥ ಶಾಸ್ತ್ರಿ, ತಾಯಿಯ ಹೆಸರು ದಾನಮ್ಮ. ಪುರಾಣಿಕರು ತುಷಾರಹಾರ, ಮಾನಸ ಸರೋವರ, ಗಿರಿಜಾಕಲ್ಯಾಣ, ವಚನೋದ್ಯಾನ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಹಲವಾರು ಪ್ರಶಸ್ತಿಗಳು ದೊರಕಿವೆ. 'ಕಾವ್ಯಾನಂದ' ಎಂಬುದು ಇವರ ಕಾವ್ಯನಾಮ. 'ಸ್ವತಂತ್ರಧೀರ ಸಿದ್ಧೇಶ್ವರ' ಎಂಬುದು ಇವರ ವಚನಗಳ ಅಂಕಿತವಾಗಿದೆ.



ಅ. ಅರ್ಥ ತಿಳಿ.

ಆಸೆ–ಬಯಕೆ, ಇಚ್ಛೆ. ರೋಷ – ಸಿಟ್ಟು, ರೇಗು. ಅಜಾತ – ಹುಟ್ಟು ಇಲ್ಲದವ. ಈಸು–ಇನಿತು, ಇಷ್ಟು. ದ್ರವ್ಯ–ಧನ, ಸಂಪತ್ತು. ಕೇಡು–ಕೆಡುಕು, ಹಾನಿ. ತ್ಯಾಗಿ–ಉದಾರಿ, ದಾನಿ. ಮುಡಿ–ಕೂದಲು, ತುರುಬು. ಶೃಂಗಾರ–ಅಲಂಕಾರ, ಸೊಬಗು. ದೃಢ – ಸ್ಥಿರ, ನಿಶ್ಚಿತ. ಕುಂಭ–ಕೊಡ, ಜಲಪಾತ್ರೆ. ಆದರ್ಶ–ಧ್ಯೇಯ, ಮಾದರಿ. ತಿಕ್ಕು–ಉಜ್ಜು, ಹೊಸೆ. ಮೊಳೆ–ಚಿಗುರುಬಿಡು, ಅಂಕುರಿಸು. ನಶಿಸು – ನಾಶವಾಗು, ಹಾಳಾಗು. ಬೊಜ್ಜು–ಡೊಳ್ಳುಹೊಟ್ಟೆ, ಬೆಳೆದ ಹೊಟ್ಟೆ. ವಾದ–ಚರ್ಚೆ, ಜೋರಾಗಿ ಮಾತಾಡುವಿಕೆ. ತಣಿಸು–ತೃಪ್ತಿಗೊಳಿಸು, ಸಮಾಧಾನಪಡಿಸು.

ಆ. ವಿವರ ತಿಳಿಯಿರಿ.

ಅರಸಿಂಗೆ	: ಅರಸು ವಂಶದವರಿಗೆ, ರಾಜವಂಶಸ್ಥರಿಗೆ
ಯಮದೂತರು	: ಯಮಧರ್ಮನ ದೂತರು, ಯಮನ ಅನುಯಾಯಿಗಳು
ಅಮರೇಶ್ವರ ಲಿಂಗ	: ಆಯ್ದಕ್ಕಿ ಲಕ್ಕಮ್ಮ ಮಾರಯ್ಯರ ಇಷ್ಟದೈವ
ಸುಜಲ	: ಪವಿತ್ರವಾದ ಜಲ, ಪರಿಶುದ್ಧವಾದ ನೀರು
ತುಕ್ಕು	: ಕಬ್ಬಿಣಕ್ಕೆ ಹತ್ತುವ ಜಂಗು
ಮಹಾಮನೆ	: ಬಸವಣ್ಣನು ನಿತ್ಯದಾಸೋಹ ಮಾಡುತ್ತಿದ್ದ ಮನೆ.
ದಾಸೋಹ	: ಪ್ರತಿನಿತ್ಯ ಶಿವಶರಣರಿಗೆ ಭೋಜನ ನೀಡುವ ವ್ಯವಸ್ಥೆ.

ಇ. ಕೆಳಗಿನ ಪ್ರಶ್ನೆಗಳಿಗೆ ಉತ್ತರ ಹೇಳಿರಿ.

೧. ಯಾರಿಗೆ ಆಸೆ ಇರುವುದಿಲ್ಲ ?

೨. ಎಂತಹ ಭಕ್ತಿಯಿಂದ ದ್ರವ್ಯದ ಕೇಡು ಆಗುತ್ತದೆ?

೩. ಮಣ್ಣ ಬೆರೆತು ಮೊಳೆಯುವುದು ಯಾವುದಕ್ಕಿಂತ ಮೇಲು ?

೪. ಬೊಜ್ಜು ಏಕೆ ಬೆಳೆಯುತ್ತದೆ?

೫. ಮಣಿಯನೆಣಿಸಿ ದಣಿಯುವುದಕ್ಕಿಂತ ಯಾವುದು ಮೇಲು ?



ವ್ಯಾಕರಣ ಮಾಹಿತಿ

ಅ. ಲಿಂಗಗಳು

೧. ಶಿವಪುರದಲ್ಲಿ ಒಬ್ಬ ಶಿವಭಕ್ತನಿದ್ದನು.

೨. ಭಜನೆಯ ಮಂದಿರಕ್ಕೆ ಒಬ್ಬ ಶರಣೆ ಬಂದಿದ್ದಳು.

೩. ನದಿಯ ಹತ್ತಿರ ಒಂದು ಮೊಸಳೆ ಇತ್ತು.

ಮೇಲಿನ ವಾಕ್ಯಗಳನ್ನು ಓದಿ. ಗೆರೆ ಎಳೆದಿರುವ ಪದಗಳನ್ನು ಗಮನಿಸಿರಿ. ಶಿವಭಕ್ತ ಎಂಬ ಪದವು 'ಗಂಡಸು' ಎಂಬುವುದನ್ನು ಸೂಚಿಸುತ್ತದೆ. 'ಶರಣೆ' ಎಂಬ ಪದವು 'ಹೆಂಗಸು' ಎಂಬುದನ್ನು ಸೂಚಿಸುತ್ತದೆ. ಆದರೆ 'ಮೊಸಳೆ' ಎಂಬ ಪದವು 'ಗಂಡಸು' ಎಂಬುದನ್ನಾಗಲೀ 'ಹೆಂಗಸು' ಎಂಬುದನ್ನಾಗಲೀ ಸೂಚಿಸುತ್ತಿಲ್ಲ.

೧. ಆ ಊರಿನಲ್ಲಿ ಪ್ರಸಿದ್ಧ ವ್ಯಕ್ತಿ ಇರುವನು.

೨. ಪುನೀತ್ ಬಹಳ ಒಳ್ಳೆಯವನು.

ಮೇಲಿನ ವಾಕ್ಯಗಳನ್ನು ಓದಿ ಅಡಿಗೆರೆ ಎಳೆದಿರುವ ಪದಗಳನ್ನು ಗಮನಿಸಿರಿ, 'ವ್ಯಕ್ತಿ' , 'ಪುನೀತ್' ಎಂಬ ಪದಗಳು 'ಗಂಡಸು' ಎಂಬ ಅರ್ಥದಿಂದ ಬಳಕೆಯಾಗಿವೆ. ಇವು ಪುಲ್ಲಿಂಗ.

೧. ಸಿಂಧು ಬಲು ಅಪರೂಪದವಳು.

೨. ಆಸೆಯು ರಾಣಿಗಲ್ಲದೆ ಮತ್ತಾರಿಗೆ?

ಮೇಲಿನ ವಾಕ್ಯಗಳನ್ನು ಓದಿ ಗೆರೆ ಎಳೆದಿರುವ ಪದಗಳನ್ನು ಗಮನಿಸಿರಿ. 'ಸಿಂಧು', 'ರಾಣಿ' ಎಂಬ ಪದಗಳು 'ಹೆಂಗಸು'ಎಂಬ ಅರ್ಥದಿಂದ ಬಳಕೆಯಾಗಿವೆ. ಇವು ಸ್ತ್ರೀಲಿಂಗ.

೧. ಗಿಳಿಯ ಮೈಬಣ್ಣ ಹಸಿರು.

೨. ಭರತನ ತೋಟದಲ್ಲಿ ಹಣ್ಣುಗಳಿವೆ.

ಮೇಲಿನ ವಾಕ್ಯಗಳನ್ನು ಓದಿ ಗೆರೆ ಎಳೆದಿರುವ ಪದಗಳನ್ನು ಗಮನಿಸಿ. 'ಗಿಳಿ', 'ಹಣ್ಣು' ಎಂಬ ಪದಗಳು 'ಗಂಡಸು' ಅಥವಾ 'ಹೆಂಗಸು' ಎಂಬ ಅರ್ಥದಿಂದ ಬಳಕೆಯಾಗಿಲ್ಲ. ಇವು ನಪುಂಸಕಗಳು.

ಒಟ್ಟಾರೆಯಾಗಿ 'ಗಂಡಸು' ಎಂಬ ಅರ್ಥದಿಂದ ಬಳಸುವ ಪದಗಳು 'ಪುಲ್ಲಿಂಗ'. 'ಹೆಂಗಸು' ಎಂಬ ಅರ್ಥದಿಂದ ಬಳಸುವ ಪದಗಳು 'ಸ್ತ್ರೀಲಿಂಗ'. 'ಗಂಡಸು' ಅಥವಾ 'ಹೆಂಗಸು' ಎಂಬ ಅರ್ಥದಿಂದ ಬಳಕೆಯಾಗದ ಪದಗಳು ನಪುಂಸಕಲಿಂಗಗಳು.



ಆ. ಓದಿಗೆ ಮನ್ನಣೆ

೧. ವಿವಿಧ ವಚನಕಾರರ ವಚನಗಳನ್ನು ಸಂಗ್ರಹಿಸಿ ಓದಿರಿ.

೨. ಧ್ವನಿ ಸುರುಳಿಯಲ್ಲಿರುವ ವಚನಗಳನ್ನು ಆಲಿಸಿರಿ.

೩. ಸಾಮೂಹಿಕವಾಗಿ ವಚನಗಳನ್ನು ಹಾಡಿರಿ.

೪. ವಚನಕಾರರ ಜೀವನ ಚರಿತ್ರೆಗಳನ್ನು ಓದಿ ತಿಳಿಯಿರಿ.

ಇ. ಶುಭ ನುಡಿ

೧. ಅತಿಯಾದ ಆಸೆ ತರುವುದು ನಿರಾಸೆ.


೨. ನಿಜವಾದ ಭಕ್ತಿ ಮನಸ್ಸಿಗೆ ಶಕ್ತಿ.

೩. ಸದಾ ಚಟುವಟಿಕೆ ತುಂಬುತ್ತದೆ ಲವಲವಿಕೆ.

೪. ಕ್ರಿಯಾಶೀಲ ಪ್ರವೃತ್ತಿ ಜೀವನಕ್ಕೆ ಬುತ್ತಿ.

ಪೂರಕ ಪಾಠ : ಸತ್ಯ, ದಾನ

ಉತ್ತಮರು ಎಂಬುವರು। ಸತ್ಯದಲಿ ನಡೆದಿಹರು ।
ಉತ್ತಮರಧಮರೆನಬೇಡ ಅವರೊಂದು ।
ಮುತ್ತಿನಂತಿಹರು ಸರ್ವಜ್ಞ ॥



ಸಿರಿಬಂದ ಕಾಲಕ್ಕೆ। ಕರೆದು ದಾನವ ಮಾಡು ।
ಪರಿಣಾಮವಕ್ಕು, ಪದವಕ್ಕು, ಕೈಲಾಸ ।
ನೆರೆಮನೆಯು ಅಕ್ಕು ಸರ್ವಜ್ಞ ॥

ಕೊಟ್ಟಿದ್ದು ತನಗೆ ಬಚ್ಚಿಟ್ಟದ್ದು ಪರರಿಂಗೆ ।
ಕೊಟ್ಟದ್ದು ಕೆಟ್ಟಿತೆನಬೇಡ! ಮುಂದಕ್ಕೆ
ಕಟ್ಟಿಹುದು ಬುತ್ತಿ ಸರ್ವಜ್ಞ ॥

ಆಗ ಬಾ! ಈಗ ಬಾ! ಹೋಗಿ ಬಾ! ಎನ್ನದಲೆ ।
ಆಗಲೇ ಕರೆದು ಕೊಡುವವನ ಧರ್ಮ ಹೊ ।
ನ್ನಾಗದೆ ಬಿಡದು! ಸರ್ವಜ್ಞ ॥

–ಸರ್ವಜ್ಞ

ಪ್ರಶ್ನೆಗಳಿಗೆ ಉತ್ತರ ಹೇಳಿರಿ.

೧. ಸಿರಿಬಂದ ಕಾಲಕ್ಕೆ ಏನು ಮಾಡಬೇಕು?


೨. ಬಚ್ಚಿಟ್ಟದ್ದು ಯಾರಿಗೆ ಸೇರುತ್ತದೆ?

೩. ಕೊಡುವವನ ಧರ್ಮ ಯಾವಾಗ ಹೊನ್ನಾಗುತ್ತದೆ?

೪. ಯಾರು ಸತ್ಯದಲ್ಲಿ ನಡೆಯುತ್ತಾರೆ?



ಎಷ್ಟೇ ಕಷ್ಟ ಬಂದರೂ ಸುಳ್ಳು ಹೇಳಬಾರದು



ಮಹಾತ್ಮ ಗಾಂಧೀಜಿಯವರು ಮಗುವಾಗಿ ಇದ್ದ ದಿನಗಳಲ್ಲಿ ಎಲ್ಲರೂ ಅವರನ್ನು 'ಮೋನು ಪಾಪು' ಎಂದು ಕರೆಯುತ್ತಿದ್ದರು. ಮೋನು ಪಾಪುವಿನ ಅಮ್ಮನ ಹೆಸರು ಪುತಲೀಬಾಯಿ.


ಪ್ರತಿ ವರ್ಷವೂ ಮಳೆಗಾಲದ ನಂತರ ಬರುವ 'ಚಾತುರ್ಮಾಸ'ದಲ್ಲಿ ಅವಳು ಉಪವಾಸ ವ್ರತವನ್ನು ನಿಷ್ಠೆಯಿಂದ ಆಚರಿಸುತ್ತಿದ್ದಳು. ಎಷ್ಟೇ ಕಷ್ಟವಾದರೂ ವ್ರತದ ನಿಯಮದಂತೆ ಸೂರ್ಯೋದಯವಾಗುವುದನ್ನು ಕಣ್ಣಾರೆ ನೋಡದೆ ಊಟ ಮಾಡುತ್ತಿರಲಿಲ್ಲ.

ಅಂತಹ ವ್ರತದ ದಿನಗಳಲ್ಲಿ ಅಮ್ಮ ಬೇಗನೇ ಊಟಮಾಡಬೇಕೆಂದು ಮೋನು ಪಾಪು ಆಸೆ ಪಡುತ್ತಿದ್ದನು. ಅದಕ್ಕಾಗಿ ಮೋನು ಪಾಪು ಬೆಳಗ್ಗೆ ಬೇಗನೆ ಎದ್ದು, ಮನೆಯೆದುರು ಇದ್ದ ಎತ್ತರದ ಮಣ್ಣಿನ ದಿಣ್ಣೆಯನ್ನು ಏರಿ ನಿಂತು ಪೂರ್ವ ದಿಕ್ಕಿನಲ್ಲಿ ಉದಯಿಸುವ ಸೂರ್ಯನನ್ನು ಎಲ್ಲರಿಗಿಂತ ಮೊದಲು ನೋಡಿ, ಓಡಿ ಬಂದು ಅಮ್ಮನಿಗೆ ತಿಳಿಸುತ್ತಿದ್ದನು. ಆಗ ಅವನ ಅಮ್ಮ ಹೊರಗೆ ಅಂಗಳಕ್ಕೆ ಬಂದು, ಸೂರ್ಯನನ್ನು ಕಂಡು ಭಕ್ತಿಯಿಂದ ನಮಸ್ಕರಿಸಿ, ಅನಂತರ ಊಟ ಮಾಡುತ್ತಿದ್ದಳು. ಆಗ ಮೋನುಪಾಪುವಿಗೆ ಸಂತೋಷವಾಗುತ್ತಿತ್ತು.

ಆದರೆ, ಕೆಲವು ದಿವಗಳಲ್ಲಿ ಉದಯಿಸುವ ಸೂರ್ಯನನ್ನು ಕಪ್ಪಾದ ಮೋಡಗಳು ಮರೆ ಮಾಡುತ್ತಿದ್ದುದರಿಂದ, ಸೂರ್ಯ ಕಾಣದೆ ಅಮ್ಮ ಉಪವಾಸವನ್ನು ಮುಂದುವರಿಸುತ್ತಿದ್ದಳು. ಅಂತಹ ದಿನಗಳಲ್ಲಿ ಹಸಿವಿನಿಂದ ಅಮ್ಮ ಕಷ್ಟ ಪಡುವುದು ಮೋನು ಪಾಪುವಿಗೆ ಬೇಸರವನ್ನುಂಟು ಮಾಡುತ್ತಿತ್ತು.

ಮೋನು ಪಾಪುವಿಗೆ ಐದು ವರ್ಷ ತುಂಬಿದ ದಿನ ಅವನಿಗೆ ಹೊಸಬಟ್ಟೆ ಹೊಲಿಸಿದ್ದರು. ಮನೆಯಲ್ಲಿ ಸಿಹಿ ಊಟ ತಯಾರಿಸಿದ್ದರು. ಮೋನು ಪಾಪು ಸಿಹಿ ಊಟ ಮಾಡಿ ಹೊಸ ಬಟ್ಟೆ ಧರಿಸುವ ಆತುರದಿಂದ ಇದ್ದನು.





ಆದರೆ ಅಂದು ಮುಂಜಾನೆ ಅನಿರೀಕ್ಷಿತವಾಗಿ ಮಳೆ ಸುರಿದಿತ್ತು. ಪೂರ್ವ ದಿಕ್ಕಿನ ಆಕಾಶದಲ್ಲಿ ಕವಿದಿರುವ ಕಪ್ಪು ಮೋಡಗಳು ಸೂರ್ಯನನ್ನು ಮರೆ ಮಾಡಿದ್ದವು.

ಕಳೆದ ಎರಡು ದಿನಗಳಿಂದ ಜ್ವರ ಬರುತ್ತಿರುವ ಕಾರಣದಿಂದ ಅಮ್ಮ ಒಳಗಿನ ಕೋಣೆಯಲ್ಲಿ ಮಲಗಿದ್ದಳು. ಆದರೂ ವ್ರತದಲ್ಲಿರುವ ಅಮ್ಮ ಸೂರ್ಯನನ್ನು ನೋಡದೆ ಊಟ ಮಾಡಲು ಒಪ್ಪುವುದಿಲ್ಲ ಎಂಬುದು ಮೋನು ಪಾಪುವಿಗೆ ಗೊತ್ತಿತ್ತು. ಖಾಯಿಲೆಯಿಂದ ಮಲಗಿರುವ ಅಮ್ಮ ಉಪವಾಸದಲ್ಲಿರುವಾಗ ತಾವೊಬ್ಬರೇ ಪಿರಿಯೂಟ ಮಾಡುವುದು ಮೋನು ಪಾಪುವಿಗೆ ಇಷ್ಟವಿರಲಿಲ್ಲ. ಹಿಂದಿನ ರಾತ್ರಿ ಅಮ್ಮನಿಗೆ ಕಷಾಯ ಕುಡಿಸಿ ಹೋಗಿದ್ದ ವೈದ್ಯರು, ಸ್ವಲ್ಪವಾದರೂ ಊಟ ಮಾಡಲೇಬೇಕು ಎಂದು ಅಮ್ಮನಿಗೆ ಹೇಳಿದ್ದನ್ನು ಮೋನು ಪಾಪು ಕೇಳಿಸಿಕೊಂಡಿದ್ದರು.

ಮೋನು ಪಾಪುವಿಗೆ ಗೊತ್ತಿತ್ತು; ಯಾರು ಏನು ಹೇಳಿದರೂ ಪೂರ್ವ ದಿಕ್ಕಿನಲ್ಲಿ ಉದಯಿಸುವ ಸೂರ್ಯನನ್ನು ಕಣ್ಣಾರೆ ಕಾಣದೆ ಅಮ್ಮ ಊಟ ಮಾಡಲು ಒಪ್ಪುವುದಿಲ್ಲ ಎಂದು. ಆದರೆ, ಸೂರ್ಯ ಉದಯಿಸುವುದನ್ನು ಕಾಣಲು 'ಧೋ' ಎಂದು ಸುರಿಯುತ್ತಿರುವ ಮಳೆ ನಿಂತು, ಕಪ್ಪು ಮೋಡಗಳು ಕರಗಬೇಕು; ಆಕಾಶ ತಿಳಿಯಾಗಿ ಕಾಣಿಸಬೇಕು.

ಆದರೆ ಮೋಡಗಳು ಕರಗುವ ಸೂಚನೆಗಳು ಕಾಣಿಸುತ್ತಿರಲಿಲ್ಲ. ಬೇಸರಗೊಂಡ ಮೋನು ಪಾಪು ಈ ವಿಷಯವನ್ನು ಅವನ ಅಕ್ಕ ಲಲಿತಳ ಹತ್ತಿರ ಚರ್ಚೆ ಮಾಡಿದನು. ಅಮ್ಮ ಊಟ ಮಾಡುವಂತೆ ಅವರಿಬ್ಬರೂ ಒಂದು ಉಪಾಯ ಮಾಡಿದರು.

ಇಬ್ಬರೂ ಅಂಗಳಕ್ಕೆ ಹೋದರು. ಮೋಡಗಳ ಮರೆಯಲ್ಲಿ ಸೂರ್ಯನು ಕಾಣುವುದು ಹೋಗಲಿ, ಸೂರ್ಯನ ಕಿರಣಗಳೂ ಕಾಣಿಸುತ್ತಿರಲಿಲ್ಲ. ಆದರೆ, ಮೊದಲೇ ನಿರ್ಧರಿಸಿದಂತೆ ಮನೆಯ ಜಗಲಿಯಲ್ಲಿ ನಿಂತು, ಒಳಮನೆಯಲ್ಲಿ ಇರುವ ಅಮ್ಮನಿಗೆ ಕೇಳಿಸುವಂತೆ "ಓಹ! ಸೂರ್ಯ ಉದಯಿಸಿದ, ಸೂರ್ಯ ಕಾಣಿಸಿದ!" ಎಂದು ಸುಳ್ಳು ಸುಳ್ಳೇ ಕಿರುಚಿದರು. ಹಾಗೆಯೇ ಗಟ್ಟಿಯಾಗಿ ಹೇಳುತ್ತಾ ಒಳಗೆ ಓಡಿ ಹೋಗಿ ಅಮ್ಮನ ಎದುರು ನಿಂತುಬಿಟ್ಟರು.
ಅಮ್ಮನಿಗೆ ತನ್ನ ಮಕ್ಕಳು ಸುಳ್ಳು ಹೇಳುತ್ತಿದ್ದಾರೆ ಎಂದು ಗೊತ್ತಾಗಿಬಿಟ್ಟಿತ್ತು. ಕಪ್ಪು ಬಣ್ಣದ ದಟ್ಟ ಮೋಡಗಳು ಕವಿದಿರುವ ಮುಂಜಾನೆಯಲ್ಲಿ ಉದಯಿಸುತ್ತಿರುವ ಸೂರ್ಯನನ್ನು ಕಾಣಲು ಸಾಧ್ಯವಿಲ್ಲ ಎಂಬುದು ಅವಳಿಗೆ ಗೊತ್ತಿತ್ತು. ತನ್ನ ಮಕ್ಕಳು ಸುಳ್ಳು ಹೇಳುತ್ತಿರುವುದನ್ನು ಕೇಳಿ ತುಂಬಾ ದುಃಖವಾಯಿತು.

ಅಮ್ಮ ಮಲಗಿದ್ದಲ್ಲಿಂದಲೇ ತಲೆಯೆತ್ತಿ ತನ್ನ ಇಬ್ಬರು ಪುಟ್ಟ ಮಕ್ಕಳನ್ನು ಕೋಪದಿಂದ ದಿಟ್ಟಿಸಿ, "ನೀವಿಬ್ಬರೂ ಉದಯಿಸುತ್ತಿರುವ ಸೂರ್ಯನನ್ನು ಕಂಡದ್ದು ನಿಜವೇ?" ಎಂದು ಪ್ರಶ್ನಿಸಿದಳು.



ಖಾಯಿಲೆಯಿಂದ ಮಲಗಿರುವ ಅಮ್ಮ ಊಟ ಮಾಡುವುದು ತೀರಾ ಅಗತ್ಯ ಎಂದು ನಂಬಿದ್ದ ಇಬ್ಬರು ಮಕ್ಕಳೂ 'ಹೌದು' ಎಂದು ಸುಳ್ಳು ಹೇಳಿಬಿಟ್ಟರು. ತನ್ನ ಮಕ್ಕಳು ಮತ್ತೊಮ್ಮೆ ಸುಳ್ಳು ಹೇಳುತ್ತಿರುವುದನ್ನು ಕೇಳಿ ಅವಳಿಗೆ ಇನ್ನಷ್ಟು ದುಃಖ ಉಂಟಾಯಿತು.


ಅಮ್ಮ ನಿಧಾನವಾಗಿ ಮಂಚದಿಂದ ಎದ್ದು ಕುಳಿತಳು. ಅನಂತರ ತನ್ನ ಬಲಗೈಯನ್ನು ಮುಂದಕ್ಕೆ ಚಾಚಿ "ನೋಡಿ ಮಕ್ಕಳೇ, ನಾನು ನನ್ನ ಬಲಗೈಯನ್ನು ಹೀಗೆ ಹಿಡಿದುಕೊಂಡು ಕಣ್ಣುಗಳನ್ನು ಮುಚ್ಚಿ ಕುಳಿತುಕೊಂಡಿರುತ್ತೇನೆ. ಸೂರ್ಯನನ್ನು ನೀವು ನೋಡಿದ್ದು ನಿಜವೇ ಆಗಿದ್ದರೆ, ನನ್ನ ಕೈಯನ್ನು ನೀವು ನಿಮ್ಮ ಬಲಗೈಯಲ್ಲಿ ಮುಟ್ಟಬೇಕು. ನೀವು ಹೇಳುತ್ತಿರುವುದು ಸುಳ್ಳಾಗಿದ್ದರೆ ನನ್ನ ಕೈಯನ್ನು ನಿಮ್ಮ ಎಡಗೈಯಲ್ಲಿ ಮುಟ್ಟಬೇಕು. ನೀವು ನಿಮ್ಮ ಯಾವ ಕೈಯಲ್ಲಿ ಮುಟ್ಟುತ್ತೀರಿ ಎಂಬುದು ನನಗೆ ಗೊತ್ತಾಗುವುದಿಲ್ಲ. ಆದರೆ, ನನ್ನ ಒಳ್ಳೆಯ ಮುದ್ದು ಮಕ್ಕಳು ಸುಳ್ಳು ಹೇಳಿ ನನ್ನನ್ನು ಮುಟ್ಟುವುದಿಲ್ಲ ಎಂದು ನಂಬಿದ್ದೇನೆ" ಎಂದು ಹೇಳಿ ಕಣ್ಣು ಮುಚ್ಚಿ ಕುಳಿತುಕೊಂಡಳು.



ಮೋನು ಪಾಪು ಅಕ್ಕನ ಮುಖ ನೋಡಿದನು; ತಪ್ಪು ಮಾಡಿದವಳಂತೆ ಅವಳು ನಾಚಿಕೆಯಿಂದ ತಲೆ ತಗ್ಗಿಸಿ ನಿಂತಿದ್ದಳು. ಇಬ್ಬರಿಗೂ ತಮ್ಮ ತಪ್ಪಿನ ಅರಿವು ಆಗಿತ್ತು. ಇಷ್ಟು ಒಳ್ಳೆಯ ಅಮ್ಮನ ಬಳಿ ಸುಳ್ಳು ಹೇಳಿದುದಕ್ಕಾಗಿ ಅವರಿಬ್ಬರಿಗೂ ತುಂಬಾ ನಾಚಿಕೆ ಉಂಟಾಯಿತು. ಸುಳ್ಳು ಹೇಳಿ ಅಮ್ಮನ ಕೈ ಮುಟ್ಟಲು ಭಯವಾಯಿತು.

ಬಹಳ ಹೊತ್ತು ದಾಟಿದರೂ ತನ್ನ ಕೈಯನ್ನು ಯಾರೂ ಮುಟ್ಟಲು ಬಾರದಿದ್ದಾಗ, ಸುಳ್ಳು ಹೇಳಿದ್ದ ಮಕ್ಕಳು ಈಗ ಪಶ್ಚಾತ್ತಾಪ ಪಡುತ್ತಿದ್ದಾರೆ ಎಂದು ತಿಳಿಯಿತು. ಸಂತೋಷಪಟ್ಟ ಅಮ್ಮ ಕಣ್ಣು ತೆರೆದಳು. ಇಬ್ಬರು ಮಕ್ಕಳನ್ನೂ ಹತ್ತಿರಕ್ಕೆ ಕರೆದು ಅಪ್ಪಿಕೊಂಡು ಮುದ್ದು ಮಾಡಿದಳು. "ಯಾವುದೇ ಕಾರಣಕ್ಕೂ ಸುಳ್ಳು ಹೇಳಬಾರದು ಮಕ್ಕಳೇ" ಎಂದು ಹೇಳಿದಳು.

ಮೋನು ಪಾಪು ಅಂದೇ ಶಪಥ ಮಾಡಿದನು–
"ಏನೇ ಕಷ್ಟ ಬಂದರೂ ಇನ್ನು ಮುಂದೆ ನಾನು ಸುಳ್ಳು ಹೇಳುವುದಿಲ್ಲ."



(ಬೊಳುವಾರು ಮಹಮ್ಮದ್ ಕುಂಞಿ)

[ಈ ಪಾಠವನ್ನು ಲೇಖಕರ ಹಸ್ತಾಕ್ಷರದಲ್ಲೇ ಮುದ್ರಿಸಲಾಗಿದೆ.]



ಕ್ಷೇತ್ರ : ಓದುವುದು.
ಸಾಮರ್ಥ್ಯ : ಕೈಬರಹ ಮತ್ತು ಮುದ್ರಿತ ವಿಷಯಗಳನ್ನು ನಿರರ್ಗಳವಾಗಿ ಓದುವುದು.

ಆಶಯ

ಎಳೆಯವರಿದ್ದಾಗ ಪ್ರತಿಯೊಬ್ಬರೂ ಒಂದಲ್ಲ ಒಂದು ಸಂದರ್ಭದಲ್ಲಿ ಸುಳ್ಳು ಹೇಳಿಯೇ ಹೇಳುತ್ತಾರೆ. ಮಹಾತ್ಮಾಗಾಂಧಿ ಕೂಡ ಅದಕ್ಕೆ ಹೊರತಾಗಿರಲಿಲ್ಲ. ಗಾಂಧೀಜಿಯವರ ಬದುಕಿನಲ್ಲಿ ನಡೆದ ಘಟನೆಯೊಂದು ಮುಂದೆ ಅವರನ್ನು ಸುಳ್ಳು ಹೇಳದಂತೆ ಮಾಡಿತು. ಸರಿಯಾದ ಮಾರ್ಗದರ್ಶನ ಸಿಗಬೇಕಾದ ಸಂದರ್ಭದಲ್ಲಿ ಸಿಕ್ಕಿದರೆ ಎಂಥವರೂ ತಮ್ಮ ತಪ್ಪನ್ನು ತಿದ್ದಿಕೊಳ್ಳುತ್ತಾರೆ ಎಂಬುದು ಈ ಪಾಠದ ಆಶಯವಾಗಿದೆ.

ಲೇಖಕರ ಪರಿಚಯ



ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನ ಬೊಳುವಾರು ಎಂಬಲ್ಲಿ ೧೯೫೧ರಲ್ಲಿ ಜನಿಸಿದ ಮಹಮ್ಮದ್ ಕುಂಞಿ ಅವರು ಸಿಂಡಿಕೇಟ್ ಬ್ಯಾಂಕ್ ಬೆಂಗಳೂರು ಕಛೇರಿಯಲ್ಲಿ ಮುಖ್ಯ ಪ್ರಬಂಧಕರಾಗಿದ್ದರು. ಮುಸ್ಲಿಂ ಸಂಸ್ಕೃತಿಯನ್ನು ಕನ್ನಡ ಸಾಹಿತ್ಯದ ಮೂಲಕ ಲೋಕಾರ್ಪಣೆ ಮಾಡಿದವರಲ್ಲಿ ಮೊದಲಿಗರು. 'ದೇವರುಗಳ ರಾಜ್ಯದಲ್ಲಿ', 'ಆಕಾಶಕ್ಕೆ ನೀಲಿ ಪರದೆ', 'ಜಿಹಾದ್', 'ಸ್ವಾತಂತ್ರ್ಯದ ಓಟ', 'ಪಂಡಿತ ಫಕೀರ', 'ತಟ್ಟು ಚಪ್ಪಾಳೆ ಪುಟ್ಟ ಮಗು', 'ಕಲಾಂ ಮೇಷ್ಟ್ರು' ಮುಂತಾದ ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಭಾರತೀಯ ಸಾಹಿತ್ಯ ಪ್ರತಿಷ್ಠಾನ ಪ್ರಶಸ್ತಿ, ರಾಷ್ಟ್ರೀಯ ಚಲನಚಿತ್ರ ಕಥಾ ಪ್ರಶಸ್ತಿ ಮುಂತಾದ ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ಪ್ರಸ್ತುತ ಕಥಾಭಾಗವನ್ನು ಬೊಳುವಾರರ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತ 'ಪಾಪು ಗಾಂಧಿ ಗಾಂಧಿ ಬಾಪು ಆದ ಕಥೆ' ಎಂಬ ಮಕ್ಕಳ ಕಾದಂಬರಿಯಿಂದ ಆಯ್ದುಕೊಳ್ಳಲಾಗಿದೆ.

ಅ. ಅರ್ಥ ತಿಳಿಯಿರಿ.

ದಿನ್ನೆ–ದಿಬ್ಬ, ಬೋರೆ, ತೆವರು. ಉದಯಿಸು–ಹುಟ್ಟು, ಮೂಡು. ಕೆಂಬಣ್ಣ – ಕೆಂಪು ಬಣ್ಣ, ರಕ್ತವರ್ಣ. ಸಂತೋಷ–ಹಿಗ್ಗು, ಆನಂದ. ವ್ರತ – ನಿಯಮ, ನೋಂಪಿ. ಮುಂಜಾನೆ–ಬೆಳಗಿನ ಜಾವ, ನಸುಕು. ಮೀರಿ–ದಾಟಿ, ಮುಂದೆಹೋಗಿ. ದಟ್ಟ–ಸಾಂದ್ರವಾದ, ಮಂದವಾದ. ಪರದೆ–ತೆರೆ, ಜವನಿಕೆ. ಕವಿದಿರುವ–ಆವರಿಸಿರುವ, ಮರೆಮಾಡಿರುವ. ದುರುಗುಟ್ಟು–ನೆಟ್ಟಕಣ್ಣಿನಿಂದ ನೋಡು, ದಿಟ್ಟಿಸಿ ನೋಡು. ಚಾಚಿ–ನೀಡಿ, ಮುಂದೆ ಒಡ್ಡಿ. ಅಪ್ಪಿ–ತಬ್ಬಿಕೊಂಡು, ಆಲಿಂಗನ ಮಾಡಿ. ಶಪಥ–ಪ್ರತಿಜ್ಞೆ, ಆಣೆ. ಪ್ರಸಿದ್ಧ–ಹೆಸರುವಾಸಿಯಾದ, ಖ್ಯಾತಿಹೊಂದಿದ.



ಆ. ವಿವರ ತಿಳಿಯಿರಿ:

ಚಾತುರ್ಮಾಸ : ನಾಲ್ಕು ತಿಂಗಳು, ನಾಲ್ಕು ತಿಂಗಳು ನಡೆಸುವ ವ್ರತ.
ಕಷಾಯ : ಔಷಧಿ, ಗಿಡಮೂಲಿಕೆಗಳನ್ನು ಭಟ್ಟಿ ಇಳಿಸಿ ತೆಗೆದ ರಸ.
ಪಶ್ಚಾತ್ತಾಪ : ಮಾಡಿದ ತಪ್ಪು ಕೆಲಸಕ್ಕಾಗಿ ಮರುಗುವಿಕೆ.

ಇ. ಕೆಳಗಿನ ಪ್ರಶ್ನೆಗಳಿಗೆ ಉತ್ತರ ಹೇಳಿರಿ.

೧) ಪುತಲೀಬಾಯಿಯವರು ಗಾಂಧೀಜಿಯವರನ್ನು ಏನೆಂದು ಕರೆಯುತ್ತಿದ್ದರು?
೨) ಪುತಲೀಬಾಯಿಯವರ ವ್ರತದ ನಿಯಮವೇನು?
೩) ಮೋನುಪಾಪು ಏನೆಂದು ಆಸೆ ಪಡುತ್ತಿದ್ದನು?
೪) ಮೋನುಪಾಪು ಮತ್ತು ಅಕ್ಕ ರಲಿತ ಏನೆಂದು ಕಿರುಚಿದರು?
೫) ಮಕ್ಕಳಿಬ್ಬರಿಗೂ ಏಕೆ ನಾಚಿಕೆ ಉಂಟಾಯಿತು?

ವ್ಯಾಕರಣ ಮಾಹಿತಿ

ಅ. ನಾಮಪದ

ವ್ಯಕ್ತಿ, ವಸ್ತು, ಸ್ಥಳ ಮತ್ತು ಪ್ರಾಣಿಗಳ ಹೆಸರುಗಳನ್ನು ಸೂಚಿಸುವ ಪದಗಳಿಗೆ ನಾಮಪದ ಎನ್ನುವರು.

ಉದಾಹರಣೆ: ಮಂಡ್ಯ, ತಿಮ್ಮಣ್ಣ, ಹುಲಿ, ಕಲ್ಲು–ಇತ್ಯಾದಿ.

ಈ ಕೆಳಗೆ ಮೂರು ವಿಧದ ನಾಮಪದಗಳನ್ನು ಹೆಸರಿಸಲಾಗಿದೆ.

ನಾಮಪದಗಳು

- ರೂಢನಾಮ
- ಅಂಕಿತನಾಮ
- ಅನ್ವರ್ಥನಾಮ

ರೂಢನಾಮ : ರೂಢಿಯಿಂದ ಬಂದ ಪದಗಳಿಗೆ ರೂಢನಾಮ ಎನ್ನುವರು.
ಉದಾ : ನದಿ, ಪರ್ವತ, ಹೆಂಗಸು, ಪಟ್ಟಣ, ದೇಶ, ಇತ್ಯಾದಿ.

ಅಂಕಿತನಾಮ : ಗುರುತಿಗಾಗಿ ಹಾಗೂ ವ್ಯವಹಾರದ ಉಪಯೋಗಕ್ಕೆ ಇಟ್ಟುಕೊಂಡ ಹೆಸರುಗಳೆಲ್ಲ ಅಂಕಿತನಾಮಗಳು.
ಉದಾ : ಕೂಡಲಸಂಗಮದೇವ, ಪುರಂದರ ವಿಠಲ, ಗಂಗಾ, ಬ್ರಹ್ಮಪುತ್ರ, ಭಾರತ, ಇತ್ಯಾದಿ.



<u>ಅನ್ವರ್ಥನಾಮ</u> : ರೂಪ, ಗುಣ, ವೃತ್ತಿ, ಸ್ವಭಾವಾದಿ ವಿಶೇಷವಾದ ಅರ್ಥಕ್ಕೆ ಅನುಗುಣವಾಗಿ ಇಟ್ಟ ಹೆಸರುಗಳೆಲ್ಲ ಅನ್ವರ್ಥನಾಮಗಳು.

ಉದಾ : ವ್ಯಾಪಾರಿ, ರೋಗಿ, ಯೋಗಿ, ಬಳೆಗಾರ, ಪೂಜಾರ ಇತ್ಯಾದಿ.

ಆ. ಓದಿಗೆ ಮನ್ನಣೆ

೧. ಮುದ್ರಿತ ಕರಪತ್ರ ಹಾಗೂ ಲಗ್ನ ಪತ್ರಿಕೆಗಳನ್ನು ಸಂಗ್ರಹಿಸಿ ಓದಿರಿ.
೨. ಶಿಶುಗೀತೆಗಳನ್ನು ಓದಿರಿ.
೩. ರಾಜರತ್ನಂ, ಡುಂಡಿರಾಜ್ ಮೊದಲಾದ ಲೇಖಕರು ಬರೆದ ಲೇಖನಗಳನ್ನು ಓದಿರಿ.

ಇ. ಶುಭ ನುಡಿ

೧. ಕನ್ನಡಿ ನಿನಗೆ ಬೇಡ, ಕನ್ನಡಿಯೆ ನೀನಾಗು.
೨. ನುಡಿದರೆ ಮುತ್ತಿನ ಹಾರದಂತಿರಬೇಕು.
೩. ಮಾತಿನ ರೀತಿಗೆ ಪ್ರೀತಿಯ ಬೆಸುಗೆ.

ಪೂರಕ ಪಾಠ : **ಪ್ರಾಮಾಣಿಕತೆ**



ರಾಜು ದೂರದ ಹೊಳೇಪುರಕ್ಕೆ ಹೋಗಬೇಕಿತ್ತು. ಆತನಲ್ಲಿ ಸಾಕಷ್ಟು ಹಣವಿರಲಿಲ್ಲ. ಆತ ಬಸ್ ನಿಲ್ದಾಣಕ್ಕೆ ಬಂದು ಹೊಳೇಪುರಕ್ಕೆ ಹೋಗುವ ಬಸ್ಸು ಹತ್ತಿದನು. ಕಿಟಕಿಯ ಹತ್ತಿರ ಕುಳಿತು ಯೋಚಿಸತೊಡಗಿದನು. ಇರುವ ಹಣದಲ್ಲಿ ಹೋಗಬಹುದಾದ ದೂರವನ್ನು ಪ್ರಯಾಣಿಸಿ ಉಳಿದ ದೂರವನ್ನು ನಡೆದುಕೊಂಡೇ ಹೋಗಲು ನಿರ್ಧರಿಸಿದನು.

ಪಕ್ಕದಲ್ಲಿ ಕುಳಿತಿದ್ದವರು ಅವರಾಗಿಯೇ ಮಾತಿಗೆ ಹೊರಟರು:

'ಎಲ್ಲಿಗೆ ಹೊರಟಿದ್ದೀರಿ?'

ರಾಜು ಹೇಳಿದ: ಹೊಳೇಪುರಕ್ಕೆ.

ಆತ ಕೇಳಿದ: ಮತ್ಯಾಕೆ ನೀವು ಅರಸೀಪುರಕ್ಕೆ ಟಿಕೆಟ್ ಕೊಂಡಿರಿ?

ರಾಜು ಹೇಳಿದ: ನನ್ನಲ್ಲಿ ಹಣ ಇದ್ದದ್ದೇ ಅಷ್ಟು.

ಆತ ಕೇಳಿದ : ಮುಂದೆ?

ರಾಜು ಹೇಳಿದ : ಮುಂದೆ, ನಡೆದೇ ಹೋಗ್ತೇನೆ.

ಆತ ಅಂದ : ಅಯ್ಯೋ! ಈಗಿನ ಕಾಲದಲ್ಲೂ ನಿಮ್ಮಂಥವರು ಇದ್ದಾರಲ್ಲ! ಇಲ್ಲ ನೋಡ್ರಿ, ಸುಮ್ನೆ ನಿದ್ದೆ ಬಂದವರಂತೆ ಮಲಗಿಬಿಡಿ. ಹೊಳೇಪುರ ಬಂದಾಗ ಇಳಿದು ಹೋಗಿಬಿಡಿ.

ರಾಜು ಹೇಳಿದ : ಇಲ್ಲ. ನಾನು ಅಂಥವನಲ್ಲ. ನಡೆದುಕೊಂಡೇ ಹೋಗುತ್ತೇನೆ.

ಆತ : ನಿಮ್ಮಿಷ್ಟ.

ರಾಜು ಮನಸ್ಸಿನಲ್ಲೇ ಅಂದುಕೊಂಡ: 'ಇಂಥವರಿಂದಲೇ ಕಾಲ ಕೆಟ್ಟದ್ದು'.

ರಾಜುವಿನ ಮನಸ್ಸನ್ನು ಅರ್ಥಮಾಡಿಕೊಳ್ಳುವ ಶಕ್ತಿ ಆ ಸಹಪ್ರಯಾಣಿಕನಿಗೆ ಇರಲಿಲ್ಲ. 'ಅಂಥವರಿಗೆ ಇನ್ನಾದರೂ ಬುದ್ಧಿ ಬರಲಿ' ಎಂದು ಮನಸಾರೆ ಪ್ರಾರ್ಥಿಸುತ್ತ ರಾಜು ಆಸೀಪುರದಲ್ಲಿ ಬಸ್ಸಿನಿಂದಿಳಿದು ನಡೆದೇ ಬಿಟ್ಟ.

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಹೇಳಿರಿ.

೧) ರಾಜು ಎಲ್ಲಿಗೆ ಹೋಗಬೇಕಿತ್ತು?

೨) ರಾಜು ಬಸ್ಸಿನಲ್ಲಿ ಕುಳಿತು ಏನೆಂದು ಯೋಚಿಸತೊಡಗಿದನು? ಏಕೆ?

೩) ರಾಜುವಿನ ಪ್ರಾಮಾಣಿಕತೆಗೆ ಸಹಪ್ರಯಾಣಿಕ ಯಾವ ಸಲಹೆ ಕೊಟ್ಟನು?

೪) 'ಅಂಥವರಿಗೆ ಇನ್ನಾದರೂ ಬುದ್ಧಿ ಬರಲಿ' ಎಂದು ರಾಜು ಏಕೆ ಪ್ರಾರ್ಥಿಸಿದ?



ವಿಮಾನ ನಿಲ್ದಾಣ



(ಸನ್ನಿವೇಶ : ರವಿಯ ಭಾವ ವಿಮಾನ ನಿಲ್ದಾಣದಲ್ಲಿ ಉನ್ನತ ಹುದ್ದೆಯೊಂದರಲ್ಲಿ ಕೆಲಸ ನಿರ್ವಹಿಸುತ್ತಿರುವರು.)

(ರವಿ ಮತ್ತು ಗೆಳೆಯರಾದ ಸನತ್, ಸುಮಿತ್, ಇಮ್ರಾನ್, ಐಶು ಮತ್ತು ಪ್ರಿಯ ಎಲ್ಲರೂ ರವಿಯ ಭಾವನವರೊಂದಿಗೆ ವಿಮಾನ ನಿಲ್ದಾಣ ನೋಡಲು ಬಂದಿರುವರು.)

ರವಿ : ಓಹ್! ಎಷ್ಟು ಚೆನ್ನಾಗಿದೆ ವಿಮಾನ ನಿಲ್ದಾಣ, ಅಲ್ವೇನ್ರೋ ?



ಎಲ್ಲರೂ : ಹೌದೌದು.

ಸುಮಿತ್ : ಆದರೆ ವಿಮಾನ ಹಾರುವ ಜಾಗದಲ್ಲಿ ಇಷ್ಟು ದೊಡ್ಡ ಕಟ್ಟಡ ಯಾಕೆ ?

ರವಿ : ಅದು ನಂಗೂ ಗೊತ್ತಾಗಿಲ್ಲ. ಭಾವನನ್ನೇ ಕೇಳೋಣ. ಭಾವಾ.....

ಭಾವ : ಬನ್ನಿ ಮಕ್ಕಳೆ, ಎಲ್ಲವನ್ನು ಹೇಳುತ್ತೇನೆ. ನೋಡಿ, ವಿಮಾನ ನಿಲ್ದಾಣಗಳಲ್ಲಿ ಎರಡು ವಿಧ. ಒಂದು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ, ಇನ್ನೊಂದು ಅಂತರ್ದೇಶೀಯ ವಿಮಾನ ನಿಲ್ದಾಣ. ಕೆಲವೆಡೆ ಎರಡೂ ಒಂದರಲ್ಲೇ ಇರುವುದುಂಟು. ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವು ದೇಶವಿದೇಶಗಳ ವಿಮಾನಗಳ ನಿಲುಗಡೆಯ ತಾಣ. ಅದೊಂದು ವಿಶಾಲವಾದ ಅದ್ಭುತ ಲೋಕ. ಅದು 'ಪೇಟೆಯೊಳಗಿನ ಪೇಟೆ' ಯಂತೆ ಇರುತ್ತದೆ. ಅಂದರೆ ಆ ವಿಮಾನ ನಿಲ್ದಾಣದ ಒಳಗೆಯೇ ಒಂದು ಪುಟ್ಟ ಪಟ್ಟಣವಿರುತ್ತದೆ. ಒಳಗೆ ಪ್ರವೇಶಿಸುತ್ತಿದ್ದಂತೆಯೇ ಎದುರಿಗೆ ದೇಶ ವಿದೇಶಗಳ ವಿಮಾನ ಕಂಪೆನಿಗಳ ಕೌಂಟರ್‌ಗಳಿರುತ್ತವೆ. ಪ್ರಯಾಣಿಕರು ಯಾವ ವಿಮಾನದಲ್ಲಿ ಪಯಾಣಿಸುತ್ತಾರೋ ಆ ವಿಮಾನದ ಕೌಂಟರಿಗೆ ಹೋಗಿ ತಮ್ಮ ಟಿಕೆಟನ್ನು ಕೊಟ್ಟು ಬೋರ್ಡಿಂಗ್ ಪಾಸನ್ನು ಪಡೆದುಕೊಳ್ಳುತ್ತಾರೆ. ಅಲ್ಲಿಯೇ ಪ್ರಯಾಣಿಕರನ್ನು ಹಾಗೂ ಅವರ ಸಾಮಗ್ರಿಗಳನ್ನು ನಾನಾ ರೀತಿಯ ತಪಾಸಣೆಗೆ ಒಳಪಡಿಸಲಾಗುತ್ತದೆ.

ಸನತ್ : ಅದೇನು ಅಲ್ಲಿ ಕಾಣಿಸ್ತಿರೋದು ಭಾವ ?

ಭಾವ : ಅದು ಪ್ರಯಾಣಿಕರ ತಂಗುದಾಣ. ಅದರ ಬಲಕ್ಕೆ ವಿಶೇಷ ಅತಿಥಿಗಳ ಕೊಠಡಿ, ಅಂಗಡಿಗಳು, ಪಾರ್ಲರ್, ಸ್ಟಾಲ್ ಇತ್ಯಾದಿಗಳಿವೆ. ಮಹಡಿಯಲ್ಲಿ ಸುಂಕರಹಿತ ಸಾಮಗ್ರಿಗಳ ನೂರಾರು ಅಂಗಡಿಗಳು ಇವೆ. ಆದ್ದರಿಂದಲೇ ಅದನ್ನು 'ಪೇಟೆಯೊಳಗಿನ ಪೇಟೆ' ಎಂದಿರುವುದು.

ಸನತ್ : ಭಾವ, ವಿಮಾನ ನಿಲ್ದಾಣವು ಯಾಕೆ ನಗರದಿಂದ ಇಷ್ಟು ದೂರದಲ್ಲಿದೆ ?

ಭಾವ : ವಿಮಾನ ನಿಲ್ದಾಣವು ಸಾಮಾನ್ಯವಾಗಿ ಎತ್ತರದ ಪ್ರದೇಶದಲ್ಲಿರುತ್ತದೆ. ರನ್‌ವೇಗೆ ವಿಶಾಲ ಜಾಗ ಬೇಕಲ್ಲ, ಅದಕ್ಕೇ ಅದು ಸಾಮಾನ್ಯವಾಗಿ ನಗರದ ಹೊರವಲಯದಲ್ಲಿ ಇರುತ್ತದೆ.

ಐಶು : ರನ್‌ವೇ ಎಂದರೇನು ಭಾವ ?

ಭಾವ : ಅಲ್ಲಿ ನೋಡಿ, ಅದೇ ರನ್‌ವೇ. ವಿಮಾನವು ನೆಲದಿಂದ ಆಕಾಶಕ್ಕೆ ಹಾರುವ ಮುನ್ನ ಬಹುದೂರದ ತನಕ ನೆಲದಲ್ಲೇ ಓಡಬೇಕು. ಹಾಗೇನೆ ಆಕಾಶದಿಂದ ಇಳಿದ ಮೇಲೆಯೂ ನೆಲದಲ್ಲಿ ತುಂಬ ದೂರದ ತನಕ ಓಡಿದ ವಿಮಾನ ನಿಧಾನವಾಗಿ





ನಿಲ್ಲಬೇಕು. ಅದಕ್ಕಾಗಿ ಇರುವುದೇ ಈ ರನ್‌ವೇ. ರನ್‌ವೇ ಎಂಬುದು ವಿಮಾನ ನಿಲ್ದಾಣಗಳ ಅತ್ಯಂತ ಪ್ರಮುಖ ಅಂಗಗಳಲ್ಲಿ ಒಂದು. ಸಾಮಾನ್ಯವಾಗಿ ರನ್‌ವೇ ೧೦೦೦ ಮೀಟರ್‌ನಿಂದ ೨೦೦೦ ಮೀಟರ್‌ಗಳಷ್ಟು ಉದ್ದವಿರುತ್ತದೆ. ಕಾಂಕ್ರೀಟ್ ಅಥವಾ ಟಾರ್‌ನಿಂದ ರನ್‌ವೇಗಳನ್ನು ಸಿದ್ಧಪಡಿಸಿರುತ್ತಾರೆ.

ಸುಮಿತ್ : ಭಾವ, ಕರ್ನಾಟಕದ ಎಲ್ಲೆಲ್ಲಿ ವಿಮಾನ ನಿಲ್ದಾಣಗಳಿವೆ?

ಭಾವ : ಬೆಂಗಳೂರು, ಮಂಗಳೂರು, ಬಳ್ಳಾರಿ ಮುಂತಾದ ಕಡೆಗಳಲ್ಲಿ ಇವೆ. ಪ್ರಪಂಚದಾದ್ಯಂತ ೫೦,೦೦೦ಕ್ಕೂ ಮಿಕ್ಕಿ ವಿಮಾನ ನಿಲ್ದಾಣಗಳಿವೆ.

ಪ್ರಿಯ : ಭಾವ, ವಿಮಾನ ನಿಲ್ದಾಣಗಳನ್ನು ಯಾರು ನೋಡಿಕೊಳ್ಳುತ್ತಾರೆ?

ಭಾವ : ಭಾರತದ ಬಹುತೇಕ ವಿಮಾನ ನಿಲ್ದಾಣಗಳು ಸರ್ಕಾರದ ಸ್ವಾಮ್ಯದಲ್ಲಿರುತ್ತವೆ. ಹೆಚ್ಚಿನ ಕಡೆಗಳಲ್ಲಿ ಇವುಗಳ ನಿರ್ವಹಣೆ ಹಾಗೂ ಅಭಿವೃದ್ಧಿಯ ಹೊಣೆಯನ್ನು ಖಾಸಗಿ ಸಂಸ್ಥೆಗಳಿಗೆ ಗುತ್ತಿಗೆ ನೀಡಲಾಗುತ್ತದೆ.



ಇಮ್ರಾನ್ : ಸರಕು ಸಾಗಾಣಿಕೆಗೆ ಬೇರೆ ವ್ಯವಸ್ಥೆ ಇದೆಯೇ?


ಭಾವ : ಹೌದು , ಅದಕ್ಕಾಗಿಯೇ ಪ್ರತ್ಯೇಕ ವಿಮಾನಗಳಿವೆ. ಅವುಗಳನ್ನು 'ಕಾರ್ಗೋ' ಎಂದು ಕರೆಯುತ್ತಾರೆ. ಬನ್ನಿ ಮಕ್ಕಳೇ, ಇನ್ನೊಂದು ಸೋಜಿಗ ತೋರಿಸುತ್ತೇನೆ.

ರವಿ : ಏನು ಭಾವ ?

ಭಾವ : ಕನ್ವೇಯರ್ ಬೆಲ್ಟ್ ಅಂತ ಕೇಳಿದ್ದೀರಾ?

ರವಿ : ಇಲ್ವಲ್ಲ ಭಾವ!

ಭಾವ : ವಿಮಾನದಲ್ಲಿ ಬಂದ ಲಗ್ಗೇಜುಗಳನ್ನು ಒಂದು ಚಪ್ಪಟೆ ಆಕಾರದ ಸುತ್ತುತ್ತಿರುವ ಬೆಲ್ಟಿಗೆ ಹಾಕುತ್ತಾರೆ. ತಮ್ಮ ತಮ್ಮ ಲಗ್ಗೇಜುಗಳನ್ನು ಪ್ರಯಾಣಿಕರು ಆ ಬೆಲ್ಟಿನಿಂದ ಸಂಗ್ರಹಿಸಬೇಕು. ಅಂದರೆ ಸರಕು ಹೊತ್ತು ತಿರುಗುತ್ತಲೇ ಇರುವ ಬೆಲ್ಟಿನ ಮೇಲೆ ಹಾಕಿರುವ ನಮ್ಮನಮ್ಮ ಬ್ಯಾಗುಗಳನ್ನು ನಾವು ಅದರ ಮೇಲಿರುವ ವಿಳಾಸವನ್ನು ಓದಿ ಪತ್ತೆ ಹಚ್ಚಿ, ತೆಗೆದುಕೊಳ್ಳಬೇಕು. ಹೀಗೆ, ಸಾಮಗ್ರಿಗಳನ್ನು ಹೊತ್ತೊಯ್ಯುವ ಬೆಲ್ಟನ್ನು 'ಕನ್ವೇಯರ್ ಬೆಲ್ಟ್' ಎನ್ನುತ್ತಾರೆ. ನೋಡಿ, ಇದೇನೆ ಆ ಕನ್ವೇಯರ್ ಬೆಲ್ಟ್.



ಐಶು : ವಾಹ್! ಇದೆಂತಹ ಸೋಜಿಗ! ನಮ್ಮ ಬ್ಯಾಗು ನಾವಿದ್ದಲ್ಲಿಗೇ ಬರೋದಂದ್ರೇನು!

ಭಾವ : ಬನ್ನಿ ಮಕ್ಕಳೇ, ಈಗ ವಿಮಾನದ ಬಳಿಗೆ ಹೋಗೋಣ.



(ಎಲ್ಲರೂ ವಿಮಾನದ ಬಳಿಗೆ ಹೋಗುವರು.)

ಐಶು : ಕಾರಿನಂತೆ ವಿಮಾನಕ್ಕೂ ಎಂಜಿನ್ನಿನ ಆವಶ್ಯಕತೆ ಇದೆಯೆ?

ಭಾವ : ಇದೆ. ಕಾರಿಗೂ ವಿಮಾನಕ್ಕೂ ಇರುವ ವ್ಯತ್ಯಾಸವೆಂದರೆ, ವಿಮಾನದ ಎಂಜಿನ್ನು ತುಂಬ ದೊಡ್ಡದೂ ಹೆಚ್ಚು ಶಕ್ತಿ ಸಾಮರ್ಥ್ಯವುಳ್ಳದ್ದೂ ಆಗಿರುತ್ತದೆ. ವಿಮಾನದಲ್ಲಿ ಒಂದಕ್ಕಿಂತ ಹೆಚ್ಚು ಎಂಜಿನ್ನುಗಳು ಇರುತ್ತವೆ. ವಿಮಾನದ ಎಂಜಿನ್ನುಗಳು ಇಂಧನದಿಂದ ನಡೆಯುತ್ತದೆ.

ಇಮ್ರಾನ್ : ವಿಮಾನದ ಒಳಗಡೆ ಹೋಗೋಣವೇ ಭಾವ ?

ಭಾವ : ಬನ್ನಿ, ನಿಮಗೊಂದು ವಿಶೇಷ ಅವಕಾಶವಿದು.

(ಎಲ್ಲರೂ ವಿಮಾನದ ಒಳಗೆ ಹೋಗುವರು)

ಸುಮಿತ್ : ಓಹ್! ಒಳಗೆ ತುಂಬಾ ಚೆನ್ನಾಗಿದೆ! ಇದೆಲ್ಲಾ ಕನಸಲ್ಲ, ಅಲ್ವೇನ್ರೋ ?

ರವಿ : ಕನಸಲ್ಲ, ಬನ್ರೋ ಬೇಗ, ಭಾವ ಏನೋ ತೋರಿಸುತ್ತಿದ್ದಾರೆ.

ಪ್ರಿಯ : ಅಯ್ಯೊ! ಚಾಲಕರ ಸೀಟು, ಡ್ರೈವಿಂಗ್ ಚಕ್ರ ಯಾವುದು ಇಲ್ವಲ್ಲಾ ?

ಭಾವ : ಇದೆ, ಅವೆಲ್ಲ ಒಳಗಡೆ ಕಾಕ್‌ಪಿಟ್‌ನಲ್ಲಿದೆ.





ಇಮ್ರಾನ್ : ಕಾಕ್‌ಪಿಟ್ ಎಂದರೆ ?

ಭಾವ : ವಿಮಾನ ಚಾಲನೆ ಮಾಡುವ ಸಲಕರಣೆಗಳ ಸ್ಥಳವನ್ನು ಕಾಕ್‌ಪಿಟ್ ಎನ್ನುತ್ತಾರೆ. ಇಲ್ಲಿ ನೋಡಿ, ಇದು ಏರ್‌ಸ್ಪೀಡ್ ಇಂಡಿಕೇಟರ್. ವಿಮಾನವು ಎಷ್ಟು ವೇಗದಿಂದ ಸಾಗುತ್ತಿದೆ ಎಂಬುದನ್ನು ಇದು ಸೂಚಿಸುತ್ತದೆ. ಈ ಕಂಪಾಸು ವಿಮಾನ ಚಲಿಸುತ್ತಿರುವ ದಿಕ್ಕನ್ನು ತೋರಿಸುತ್ತದೆ. ಇನ್ನು ಇದು ಆಲ್ಟಿಮೀಟರ್, ಇದರಿಂದ ವಿಮಾನವು ಭೂಮಿಯಿಂದ ಎಷ್ಟು ಎತ್ತರದಲ್ಲಿದೆ ಎಂಬುದು ಗೊತ್ತಾಗುತ್ತದೆ. ಇನ್ನೂ ಅನೇಕ ಸಲಕರಣೆಗಳನ್ನು ಕುರಿತು ನಿಮಗೆ ಹೇಳಬಹುದಿತ್ತು. ಆದರೆ ಈಗ ಬೇಡ. ಮುಂದೆ ನೀವು ವಿಮಾನಯಾನ ಮಾಡುವಾಗ ಎಲ್ಲಾ ವಿವರಗಳನ್ನು ತಿಳಿದುಕೊಳ್ಳುವಿರಂತೆ, ಬನ್ನಿ ಹೋಗೋಣ.

ಸನತ್ : ನಾನು ದೊಡ್ಡವನಾಗಿ ಪೈಲೆಟ್ ಆಗುತ್ತೇನೆ, ಆಕಾಶದಲ್ಲಿ ಹಕ್ಕಿ ಥರಾ ಹಾರಾಡುತ್ತೇನೆ.

ಭಾವ : ಆಮೇಲೆ ಹಾರಾಡುವಿಯಂತೆ. ಈಗ ಬನ್ನಿ, ಪಾರ್ಲರ್‌ನಲ್ಲಿ ಐಸ್‌ಕ್ರೀಮ್ ತಿಂದು ಮನೆಗೆ ಹೋಗೋಣ.

[ಎಲ್ಲರೂ ಐಸ್‌ಕ್ರೀಮ್ ತಿಂದು ಸಂತೋಷದಿಂದ ಮನೆಗೆ ಹೋಗುವರು.]

ಕ್ಷೇತ್ರ : ಆಲಿಸುವುದು.
ಸಾಮರ್ಥ್ಯ : ಅಪರಿಚಿತ ಸನ್ನಿವೇಶದಲ್ಲಿ ನಡೆಯುವ ಸಂಭಾಷಣೆ, ಸಂವಾದ ಮತ್ತು ಚರ್ಚೆಗಳನ್ನು ಅರ್ಥ ಮಾಡಿಕೊಳ್ಳುವುದು.

ಆಶಯ

ಮಾನವನು ತನ್ನ ಬುದ್ಧಿಶಕ್ತಿಯಿಂದ ಪ್ರಗತಿಯನ್ನು ಸಾಧಿಸುತ್ತಲೇ ಮುನ್ನಡೆದಿದ್ದಾನೆ. ಹೊಸ-ಹೊಸದನ್ನು ಅರಿಯುತ್ತಲೇ ಇದ್ದಾನೆ. ಅದರಲ್ಲೂ ಹೊಸದನ್ನು ತಿಳಿಯಲು ಮಕ್ಕಳಿಗೆ ಎಲ್ಲಿಲ್ಲದ ಆಸಕ್ತಿ. ಹೆಚ್ಚಿನ ಮಕ್ಕಳಿಗೆ ಸಾಮಾನ್ಯವಾಗಿ ಅಪರಿಚಿತವಿರುವ ಒಂದು ಸನ್ನಿವೇಶದ ಬಗ್ಗೆ ತಿಳಿಸುವುದು ಇಲ್ಲಿನ ಆಶಯವಾಗಿದೆ.

ಅ. ಅರ್ಥ ತಿಳಿಯಿರಿ.

ನಿಲ್ದಾಣ-ವಾಹನಗಳನ್ನು ನಿಲ್ಲಿಸುವ ಸ್ಥಳ. ವಿಶಾಲ-ದೊಡ್ಡದಾದ. ಅದ್ಭುತ-ಅಸಾಮಾನ್ಯವಾದ, ಅತ್ಯಾಶ್ಚರ್ಯಕರ. ಪ್ರಯಾಣಿಕ-ಪ್ರಯಾಣ ಮಾಡುವವನು, ಪಯಣಿಗ. ತಪಾಸಣೆ-ಪರಿಶೀಲನೆ,



ಕೂಲಂಕಷವಾದ ವಿಚಾರಣೆ. ತಂಗುದಾಣ-ತಂಗುವ ಸ್ಥಳ, ಬಿಡಾರ. ಸ್ಟಾಲ್ - ಕಿರು ಮಳಿಗೆ. ಬೋರ್ಡಿಂಗ್ ಪಾಸ್-ಪ್ರವೇಶಾನುಮತಿ. ಪಾರ್ಲರ್-ಅಂಗಣ, ಮಹಡಿ-ಉಪ್ಪರಿಗೆ. ಸುಂಕ-ತೆರಿಗೆ, ಕರ. ಬಹುತೇಕ-ಬಹುಮಟ್ಟಿಗೆ. ಗುತ್ತಿಗೆ-ಕರಾರಿನ ಮೇಲೆ ಕೊಡುವಿಕೆ, ಒಡಂಬಡಿಕೆ. ಸ್ವಾಮ್ಯ-ಒಡೆತನ, ಹಕ್ಕು, ಅಧಿಕಾರ. ನಿರ್ವಹಣೆ-ನೆರವೇರಿಸುವಿಕೆ, ಹೊಣೆಗಾರಿಕೆ ಈಡೇರಿಸುವಿಕೆ. ಟಾರ್-ಡಾಮರು. ಅಭಿವೃದ್ಧಿ-ಮುಂದುವರಿಯುವಿಕೆ, ಪ್ರಗತಿ. ಖಾಸಗಿ-ಸ್ವಂತದ, ಸ್ವಕೀಯವಾದ, ವೈಯಕ್ತಿಕ. ಸರಕು-ಸಾಮಗ್ರಿ, ಸಾಮಾನು. ಸಾಗಾಣಿಕೆ-ಸಾಗಣೆ. ಕೊಂಡೊಯ್ಯುವಿಕೆ. ಪ್ರತ್ಯೇಕ-ಬೇರೆಬೇರೆಯಾದ, ಒಂದೊಂದಾಗಿರುವ. ಸೋಜಿಗ-ವಿಸ್ಮಯ, ಆಶ್ಚರ್ಯ. ಎಂಜಿನ್ನು-ಯಂತ್ರಸಾಧನ, ಪತ್ತೆಹಚ್ಚು-ಕಂಡುಹಿಡಿ, ಶೋಧಿಸು.

ಆ. ವಿವರ ತಿಳಿಯಿರಿ .

ಅಂತರ್ದೇಶೀಯ : ದೇಶದ ಒಳಭಾಗಕ್ಕೆ ಸಂಬಂಧಿಸಿದ; ಒಳಪ್ರದೇಶದ.

ಅಂತಾರಾಷ್ಟ್ರೀಯ : ವಿಶ್ವಕ್ಕೆ ಸಂಬಂಧಿಸಿದ; ಜಗತ್ತಿನ ಎಲ್ಲಾ ರಾಷ್ಟ್ರಗಳಿಗೂ ಸಂಬಂಧಿಸಿದ

ಕಾರ್ಗೋ : ಸರಕು ಸಾಗಿಸುವ ಹಡಗು ಅಥವಾ ವಿಮಾನ.

ಕೌಂಟರ್ : ಅಂಕಣ

ಪೈಲೆಟ್ : ವಿಮಾನ ನಡೆಸುವವ, ಚಾಲಕ.

ಆಲ್ಟಮೀಟರ್ : ಔನ್ನತ್ಯ ಮಾಪಕ ಯಂತ್ರ, ಎತ್ತರ ಅಳೆಯುವ ಸಲಕರಣೆ

ರನ್‌ವೇ : ವಿಮಾನ ನೆಲದಲ್ಲಿ ಚಲಿಸುವ ದಾರಿ, ಚಲನ ಪಥ

ಕಾಕ್‌ಪಿಟ್ : ವಿಮಾನ ಚಾಲನೆ ಮಾಡುವ ಸಲಕರಣೆಗಳ ಸ್ಥಳ

ಇ. ಪರಭಾಷಾ ಪದಗಳನ್ನು ಓದಿ ಗಮನಿಸಿರಿ.

ಕಂಪೆನಿ, ಕೌಂಟರ್, ಟಿಕೆಟ್, ಬೋರ್ಡಿಂಗ್, ಪಾರ್ಲರ್, ಸ್ಟಾಲ್, ಟಾರ್, ಕಾಂಕ್ರೀಟ್, ಪೈಲೆಟ್, ಕಾಕ್‌ಪಿಟ್, ಕನ್ವೇಯರ್ ಬೆಲ್ಟ್.

ಈ. ಕೆಳಗಿನ ಪ್ರಶ್ನೆಗಳಿಗೆ ಉತ್ತರ ಹೇಳಿರಿ.

೧. ರವಿ ಮತ್ತು ಗೆಳೆಯರೆಲ್ಲ ಭಾವನೊಂದಿಗೆ ಎಲ್ಲಿಗೆ ಹೋದರು?

೨. ಸಾಮಾನ್ಯವಾಗಿ ರನ್‌ವೇ ಎಷ್ಟು ಉದ್ದವಿರುತ್ತದೆ?

೩. ಸರಕು ಸಾಗಿಸುವ ಪ್ರತ್ಯೇಕ ವಿಮಾನಗಳಿಗೆ ಏನೆಂದು ಕರೆಯುತ್ತಾರೆ?

೪. 'ಕಾಕ್ ಪಿಟ್' ಎಂದರೇನು?

೫. ಸನತ್ ದೊಡ್ಡವನಾಗಿ ಏನಾಗುತ್ತೇನೆಂದು ಹೇಳಿದ?



ವ್ಯಾಕರಣ ಮಾಹಿತಿ

ಅ. ಗುಣ ವಿಶೇಷಣ.

ನಾಮಪದದ ವಿಶೇಷ ಗುಣವನ್ನು ತಿಳಿಸುವ ಅಥವಾ ಸೂಚಿಸುವ ಪದವೇ ಗುಣವಿಶೇಷಣ.

ಉದಾ : ರಿತೇಶನ ಬಳಿ ಕರಿಯ ಮೊಲವಿದೆ.

ಇಲ್ಲಿ 'ಕರಿಯ' ಎಂಬುದು ಮೊಲದ ಬಣ್ಣವನ್ನು ತಿಳಿಸುತ್ತದೆ.

೧. ಕಾಂಚನಾ ಸುಂದರ ಹುಡುಗಿ.

೨. ದರ್ಶಿನಿ ಕೆಂಪು ಲಂಗವನ್ನು ತೊಟ್ಟಿರುತ್ತಾಳೆ.

೩. ರಾಘುವಿನ ಹತ್ತಿರ ದೊಡ್ಡ ವಿಮಾನವಿದೆ.

ಇಲ್ಲಿ ಅಡಿಗೆರೆ ಎಳೆಯಲಾದ 'ಸುಂದರ', 'ಕೆಂಪು', 'ದೊಡ್ಡ' – ಈ ಪದಗಳನ್ನು ಗಮನಿಸಿರಿ. ಬಣ್ಣ, ಗುಣ, ರೀತಿ, ಸ್ವಭಾವಗಳನ್ನು ತಿಳಿಸುವ ವಿಶೇಷಣಗಳಾಗಿವೆ. ಇವುಗಳನ್ನು 'ಗುಣವಿಶೇಷಣ'ಗಳೆನ್ನುವರು.

ಆ. ಓದಿಗೆ ಮನ್ನಣೆ

೧. ವಿಮಾನ ನಿಲ್ದಾಣದ ಕಾರ್ಯವೈಖರಿ ಬಗ್ಗೆ ತಿಳಿಯಿರಿ.

೨. ನಾ ಕಂಡ ಪಡುವಣ (ದಿನಕರ ದೇಸಾಯಿ), ಅಮೇರಿಕಾದಲ್ಲಿ ನಾನು (ಗೊರೂರು) ಮುಂತಾದ ಪ್ರವಾಸ ಕಥನಗಳನ್ನು ಓದಿರಿ.

೩. ವಿವಿಧ ಬಗೆಯ ನಿಲ್ದಾಣಗಳಿಗೆ ಭೇಟಿ ನೀಡಿರಿ. ಅಲ್ಲಿರುವ ಭಿತ್ತಿ ಚಿತ್ರಗಳನ್ನು ಓದಿ ತಿಳಿಯಿರಿ.

ಇ. ಶುಭನುಡಿ

೧. ಪ್ರಯತ್ನದಿಂದಲೇ ಕಾರ್ಯಸಿದ್ಧಿ.

೨. ಚೆನ್ನಾಗಿ ಓದು, ಚೆನ್ನಾಗಿ ಬಾಳು.

೩. ನೋಡಿ ತಿಳಿಯಬೇಕು, ಮಾಡಿ ಕಲಿಯಬೇಕು.

ಪೂರಕ ಪಾಠ : ನೀವೂ ಹಣ ಉಳಿಸುತ್ತೀರಾ?



(ರಂಗಣ್ಣ ತನ್ನಲ್ಲಿರುವ ಹಣವನ್ನು ಬ್ಯಾಂಕಿನಲ್ಲಿ ಇಡಲು ಹೋದನು. ಬ್ಯಾಂಕಿನ ಸಿಬ್ಬಂದಿಯೊಬ್ಬರಲ್ಲಿ ವಿಚಾರಿಸಿದನು. ಅವರು ಮೊದಲು ಬ್ಯಾಂಕಿನಲ್ಲಿ ಖಾತೆ ತೆರೆಯಬೇಕು, ಅನಂತರ ನಿಮ್ಮ ಖಾತೆಯಲ್ಲಿ ಹಣ ಜಮಾ ಮಾಡಬೇಕು ಎಂದರು. ಆಗ ರಂಗಣ್ಣ ಮ್ಯಾನೇಜರ್ ಬಳಿ ಬಂದನು.)

ರಂಗಣ್ಣ : ನಮಸ್ಕಾರ ಮ್ಯಾನೇಜರ್.

ಮ್ಯಾನೇಜರ್ : ನಮಸ್ಕಾರ. ಕುಳಿತುಕೊಳ್ಳಿ. ಏನು ಬೇಕಾಗಿತ್ತು?

ರಂಗಣ್ಣ : ನನ್ನ ಹೆಸರು ರಂಗಣ್ಣ. ಲಾರಿ ಡ್ರೈವರ್ ಆಗಿ ಕೆಲಸ ಮಾಡ್ತಾ ಇದ್ದೀನಿ. ಬ್ಯಾಂಕಿನಲ್ಲಿ ಉಳಿತಾಯ ಖಾತೆ ತೆರೆಯುವ ಬಗ್ಗೆ ಮಾಹಿತಿ ನೀಡುತ್ತೀರಾ?

ಮ್ಯಾನೇಜರ್ : ಖಂಡಿತ. ನೀವು ಕಷ್ಟಪಟ್ಟು ಗಳಿಸಿದ ಹಣವನ್ನು ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಇಡಲು ನಿರ್ಧರಿಸಿದ್ದಕ್ಕೆ ಅಭಿನಂದನೆಗಳು. ಬ್ಯಾಂಕಿನಲ್ಲಿ ಉಳಿತಾಯ ಖಾತೆ ತೆರೆಯುವುದು ಬಹಳ ಸುಲಭ. ಈ ಅರ್ಜಿಯನ್ನು ತೆಗೆದುಕೊಳ್ಳಿ. ಇದರಲ್ಲಿ ನಿಮ್ಮ ಹೆಸರು, ವಿಳಾಸ, ವಯಸ್ಸು, ಉದ್ಯೋಗ ಮುಂತಾದ ವಿವರಗಳನ್ನು ನಮೂದಿಸಬೇಕು. ಈ ಜಾಗದಲ್ಲಿ ಇತ್ತೀಚಿನ ಭಾವಚಿತ್ರ ಅಂಟಿಸಬೇಕು. ಇಲ್ಲಿ ಸಹಿ ಮಾಡಬೇಕು.

ರಂಗಣ್ಣ : ಅರ್ಜಿಯ ಜೊತೆಗೆ ಯಾವ ದಾಖಲೆಗಳನ್ನು ನೀಡಬೇಕು?

ಮ್ಯಾನೇಜರ್ : ನಿಮ್ಮ ಹೆಸರು ಮತ್ತು ಭಾವಚಿತ್ರ ಇರುವ ಗುರುತು ಚೀಟಿಯ ನಕಲು ಮತ್ತು ವಿಳಾಸದ ಪುರಾವೆ ನೀಡಿದರೆ ಸಾಕು. ನಿಮ್ಮನ್ನು ಬ್ಯಾಂಕಿಗೆ ಪರಿಚಯಿಸಲು ನಮ್ಮ ಬ್ಯಾಂಕಿನಲ್ಲಿ ಖಾತೆ ಹೊಂದಿರುವವರು ಅಥವಾ ಬ್ಯಾಂಕಿಗೆ ಗೊತ್ತಿರುವ ವ್ಯಕ್ತಿಗಳು ಈ ಜಾಗದಲ್ಲಿ ಸಹಿ ಮಾಡಬೇಕು.

ರಂಗಣ್ಣ : ಖಾತೆದಾರರಿಗೆ ಯಾವ ಸೌಲಭ್ಯಗಳು ಸಿಗುತ್ತವೆ?

ಮ್ಯಾನೇಜರ್ : ಖಾತೆ ತೆರೆದ ತಕ್ಷಣ ನಿಮಗೆ ಪಾಸ್ ಪುಸ್ತಕ ಕೊಡುತ್ತೇವೆ. ಅದರಲ್ಲಿ ನಿಮ್ಮ ಹೆಸರು, ವಿಳಾಸ, ಖಾತೆಯ ಸಂಖ್ಯೆ ಇರುತ್ತದೆ. ನೀವು ಖಾತೆಗೆ ಜಮಾ ಮಾಡಿದ ಮತ್ತು ಖಾತೆಯಿಂದ ಖರ್ಚು ಮಾಡಿದ ಹಣದ ವಿವರಗಳನ್ನು ಪಾಸ್ ಪುಸ್ತಕದಲ್ಲಿ ನಮೂದಿಸುತ್ತೇವೆ. ಖಾತೆಯಿಂದ ಹಣ ತೆಗೆಯುವುದಕ್ಕೆ ಅಥವಾ ಬೇರೆಯವರಿಗೆ ಹಣಕೊಡುವುದಕ್ಕೆ ಚೆಕ್ ಪುಸ್ತಕ ನೀಡುತ್ತೇವೆ. ಬ್ಯಾಂಕಿನ ಉಳಿತಾಯ ಖಾತೆಯಲ್ಲಿರುವ ನಿಮ್ಮ ಹಣ ಅತ್ಯಂತ ಸುರಕ್ಷಿತ ಮಾತ್ರವಲ್ಲ ಅದು ವಾರ್ಷಿಕ ಶೇಕಡ ೪ರಷ್ಟು ಬಡ್ಡಿಯನ್ನು ಗಳಿಸುತ್ತದೆ.

ರಂಗಣ್ಣ : ಉಳಿತಾಯ ಖಾತೆಯಲ್ಲಿ ಎಷ್ಟು ಹಣ ಇಡಬಹುದು?

ಮ್ಯಾನೇಜರ್ : ಹಣ ಇಡುವುದಕ್ಕೆ ಗರಿಷ್ಠ ಮಿತಿ ಇಲ್ಲ. ಆದರೆ ನಿಮ್ಮ ಬಳಿ ಅಗತ್ಯಕ್ಕಿಂತ ಹೆಚ್ಚು ಹಣ ಇದ್ದರೆ ಅದನ್ನು ಅವಧಿ ಠೇವಣಿ (ಫಿಕ್ಸೆಡ್ ಡಿಪಾಸಿಟ್) ಯಲ್ಲಿ ಇಡಬಹುದು.

ರಂಗಣ್ಣ : ಅವಧಿ ಠೇವಣಿಯಲ್ಲಿ ಹಣ ಇಟ್ಟರೆ ಏನು ಲಾಭ?

ಮ್ಯಾನೇಜರ್ : ಅವಧಿ ಠೇವಣಿಯಲ್ಲಿ ಇಟ್ಟ ಹಣಕ್ಕೆ ಉಳಿತಾಯ ಖಾತೆಗಿಂತ ಹೆಚ್ಚು ಬಡ್ಡಿ ಸಿಗುತ್ತದೆ. ನಿಗದಿತ ಅವಧಿಯ ಕೊನೆಗೆ ಅಸಲು ಮತ್ತು ಬಡ್ಡಿಯನ್ನು ಒಟ್ಟಿಗೆ ಪಡೆಯಬಹುದು ಅಥವಾ ತಿಂಗಳಿಗೊಮ್ಮೆ, ಮೂರು ತಿಂಗಳಿಗೊಮ್ಮೆ ಬಡ್ಡಿಯನ್ನು ಮಾತ್ರ ಪಡೆದು ಕೊಳ್ಳಬಹುದು. ಅವಧಿ ಠೇವಣಿ ಇಟ್ಟಿದ್ದಕ್ಕೆ ಬಾಂಡ್ ನೀಡುತ್ತೇವೆ.

ರಂಗಣ್ಣ : ಅವಧಿ ಠೇವಣಿ ಖಾತೆ ತೆರೆಯುವುದು ಹೇಗೆ?

ಮ್ಯಾನೇಜರ್ : ಬಹಳ ಸುಲಭ. ಉಳಿತಾಯ ಖಾತೆ ಇದ್ದರೆ ಬೇರೆ ಯಾವ ದಾಖಲೆ ಪತ್ರಗಳು ಬೇಕಾಗಿಲ್ಲ. ಈ ಸರಳವಾದ ಅರ್ಜಿಯಲ್ಲಿ ಠೇವಣಿಯ ಮೊತ್ತ ಹಾಗೂ ಅವಧಿಯನ್ನು ನಮೂದಿಸಿದರೆ ಸಾಕು. ಉಳಿತಾಯ ಖಾತೆ ಇಲ್ಲದವರು ಅವಧಿ ಠೇವಣಿ ಇಡಲು ಭಾವಚಿತ್ರ, ಗುರುತಿನ ಚೀಟಿಯ ನಕಲು ಹಾಗೂ ವಿಳಾಸದ ಪುರಾವೆ ನೀಡಬೇಕು.

ರಂಗಣ್ಣ : ಧನ್ಯವಾದಗಳು ಸರ್. ಬ್ಯಾಂಕಿನಲ್ಲಿ ಖಾತೆ ತೆರೆಯುವುದು ಇಷ್ಟು ಸುಲಭ ಎಂಬುದು ನನಗೆ ಗೊತ್ತೇ ಇರಲಿಲ್ಲ. ಇಂದೇ ನಿಮ್ಮ ಬ್ಯಾಂಕಿನಲ್ಲಿ ನಾನು ಉಳಿತಾಯ ಖಾತೆಯನ್ನು ಆರಂಭಿಸುತ್ತೇನೆ.

ಮ್ಯಾನೇಜರ್ : ಹಾಗೇ ಮಾಡಿ. ಶುಭಸ್ಯ ಶೀಘ್ರಂ.

ನಗೆಹನಿ

ಬ್ಯಾಂಕ್ ಜೀವನದ ಏಕತಾನದಿಂದ
ರೋಸಿಹೋಗಿ ಎಲ್ಲ ಮರೆತು ಹಾಯಾಗಿ
ಎಲ್ಲಾದರೂ ಹೋಗಿ ಸುತ್ತಾಡಿ ಬರೋಣ
ಎಂದು, ರೈಲು ಹತ್ತಿದರೆ ಅಲ್ಲೂ ಅದೇ, ಸೊಲ್ಲು
ಚೆಕ್ ಬುಕ್ ಚೆಕ್ ಬುಕ್

– ಹೆಚ್. ಡುಂಡಿರಾಜ್

ಕೆಳಗಿನ ಪ್ರಶ್ನೆಗಳಿಗೆ ಉತ್ತರ ಹೇಳಿರಿ.

೧) ರಂಗಣ್ಣ ಯಾರು? ಆತ ಎಲ್ಲಿಗೆ ಹೋದನು?

೨) ರಂಗಣ್ಣ ಮ್ಯಾನೇಜರ್‌ನನ್ನು ಯಾವುದರ ಬಗ್ಗೆ ಮಾಹಿತಿ ನೀಡಲು ಕೇಳಿದ?


೩) ಅರ್ಜಿಯ ಜೊತೆ ಯಾವ ದಾಖಲೆಗಳನ್ನು ನೀಡಬೇಕು?

೪) ಉಳಿತಾಯ ಖಾತೆಯಲ್ಲಿ ಎಷ್ಟು ಹಣ ಇಡಬಹುದು?

೫) ಅಗತ್ಯಕ್ಕಿಂತ ಹೆಚ್ಚು ಹಣ ಇದ್ದಾಗ ಏನು ಮಾಡಬೇಕು?

೮

ವಚನ ಪಾಲನೆ



ದಶರಥ ರಾಜನು ರಾಮಗೆ ಪಟ್ಟವ
ಕಟ್ಟಲು ನಡೆಸಿದ ಸನ್ನಾಹ
ನಗರದ ಎಲ್ಲೆಡೆ ಪುರಜನರೆಲ್ಲರ
ಸಂತಸ, ಸಂಭ್ರಮ, ಉತ್ಸಾಹ ।೧।

ರಾಮಗೆ ಪಟ್ಟವ ಕಟ್ಟುವ ಸುದ್ದಿಯ
ಸಹಿಸದ ದಾಸಿ ಮಂಥರೆಯು
ಒಳಗಿಂದೊಳಗೆ ಕೆರಳಿದ ಆಕೆಯ
ಮನವನು ತುಂಬಿತು ಕುಟಿಲತೆಯು ।೨।

ಮನದಲೆ ಕುದಿಯುತ ದುಷ್ಟ ಮಂಥರೆಯು
ಕೈಕೇಯಿಯ ಬಳಿ ನಡೆದಿರಲು
ರಾಮಗೆ ಪಟ್ಟವ ಕಟ್ಟುವ ಸುದ್ದಿಯ
ಕೈಕೇಯಿ ಬಳಿಯಲಿ ಅರುಹಿರಲು ।೩।



ರಾಮನು ರಾಜನು ಆಗುವ ಸುದ್ದಿಯು
ಸಂತಸ ತಂದಿತು ಕೈಕೇಯಿಗೆ
ಕೊಟ್ಟಳು ಮುತ್ತಿನ ಹಾರವ ಆಕೆಯು
ಸುದ್ದಿಯ ನೀಡಿದ ಮಂಥರೆಗೆ ।೪।

ಸಂತಸ ಪಡುವುದ ನಿಲ್ಲಿಸು ರಾಣಿಯೆ
ರಾಮನು ನಿನ್ನಯ ಮಗನೇನು
ಎನ್ನುತ ಕೋಪದಿ ದುಷ್ಟ ಮಂಥರೆಯು
ಬಿಸುಟಳು ಮುತ್ತಿನ ಹಾರವನು ।೫।

ಕೈಕೇಯಿ ಮನವನು ಮಥಿಸಿದ ಮಂಥರೆ
ಆಕೆಗೆ ಬೋಧನೆ ಮಾಡಿದಳು
ರಾಮನ ಕಂಡರೆ ಎಂದಿಗು ಇರದಿಹ
ಮಾತ್ಸರ್ಯವನು ತುಂಬಿದಳು ।೬।

ಪ್ರೀತಿಯ ದಾಸಿಯು ಮಾಡಿದ ಬೋಧನೆ
ಸಕ್ಕರೆಯಾಯಿತು ಕೈಕೇಯಿಗೆ
ಭರತನ ರಾಜನ ಮಾಡುವ ಆಶಯ
ತುಂಬಿತು ರಾಣಿಯ ಮನದೊಳಗೆ ।೭।

ಮಗನಿಗೆ ಪಟ್ಟವ ಕಟ್ಟಿಸೊ ದಾರಿಯ
ತಿಳಿಯದೆ ಕೈಕೇಯಿ ಕುಳಿತಿರಲು
ಆಗಲೆ ದಾಸಿಯು ಎಂದೋ ಘಟಿಸಿದ
ಸಂಗತಿ ನೆನಪಿಗೆ ತಂದಿರಲು ।೮।



ಎಂದೋ ಯುದ್ಧದ ರಂಗದಿ ಕೈಕೇಯಿ
ಪತಿಯನು ರಕ್ಷಣೆ ಮಾಡಿದ್ದಳು
ತನ್ನಯ ಸೇವೆಗೆ ದಶರಥನಿಂದಲೆ
ವರಗಳ ಎರಡು ಪಡೆದಿದ್ದಳು ।೯।

ಆ ದಿನ ಪತಿಯೇ ನೀಡಿದ ವರಗಳ
ಪಡೆಯದೆ ಇದ್ದಿಹ ರಾಣಿಯನು
ಜ್ಞಾಪಿಸಿ ಕೊಟ್ಟಳು ದುರುಳೆ ಮಂಥರೆಯು
ಕೇಳಲು ಅಂದಿನ ವರಗಳನು ।೧೦।





ರಾಮಗೆ ಪಟ್ಟವ ಕಟ್ಟುವ ಖುಷಿಯಲಿ
ಬೀಗುತಲಿದ್ದನು ದಶರಥನು
ಆಗಲೆ ಮುದ್ದಿನ ಹೆಂಡತಿ ಕೈಕೇಯಿ
ಕೇಳಿದಳೆರಡು ವರಗಳನು ।೧೧।

ಭರತಗೆ ಪಟ್ಟವ ಕಟ್ಟೆನ್ನರಸನೆ
ಕಾಡಿಗೆ ಕಳಿಸೈ ರಾಮನನು
ಕೈಕೇಯಿ ಪಟ್ಟನು ಹಿಡಿಯುತ ಕೂರಲು
ದುಃಖಿತನಾದನು ದಶರಥನು ।೧೨।

ದಶರಥ ರಾಜನ ಬುದ್ಧಿಯ ಮಾತದು
ಹಿಡಿಸದೆ ಹೋಯಿತು ಕೈಕೇಯಿಗೆ
ತನ್ನಯ ಹಠವನು ಸಾಧಿಸಲೋಸುಗ
ಮಾಡಿದಳಾಜ್ಞೆಯ ದಶರಥಗೆ ।೧೩।

ಬೋಧನೆ ಸೊಲ್ಲೇ ಬೇಕಾಗಿಲ್ಲವು
ನೀಡೈ ರಾಜ್ಯವ ಭರತನಿಗೆ
ಹದಿನಾಲ್ಕು ವರುಷ ವನವಾಸವನು
ಮಾಡಲು ತಿಳಿಸೈ ರಾಮನಿಗೆ ।೧೪।

ಕೈಕೇಯಿ ಪಟ್ಟನು ಹಿಡಿಯುತ ಕೂರಲು
ಮೂರ್ಛೆಯ ಹೋದನು ದಶರಥನು
ನಗರದ ಎಲ್ಲೆಡೆ ವಿಷಯವು ಹರಡಲು
ಅಯೋಧ್ಯೆ ಹೊದೆಯಿತು ದುಃಖವನು ।೧೫।





ರಾಮನ ಕರೆಸಿದ ಕೈಕೇಯಿ ರಾಣಿಯು
ತನ್ನಯ ಆಸೆಯ ಹೇಳಿರಲು
ಚಿಕ್ಕಮ್ಮನಾಸೆ ಕೇಳಿದ ರಾಮನು
ಆಕೆಯ ಮಾತಿಗೆ ಮಣಿದಿರಲು ।೧೬।

ನಾವುಗಳೆಲ್ಲಾ ಇರಬೇಕೇತಕೆ
ನ್ಯಾಯವೆ ಇರದ ನಾಡಿನೊಳು
ನಿನ್ನಯ ಜೊತೆಗೆ ನಾವು ಬರುವೆವು
ಎನ್ನುತ ಪುರಜನ ನುಡಿದಿರಲು ।೧೭।

ಪ್ರಜೆಗಳ ಮಾತಿಗೆ ಒಪ್ಪದ ರಾಮನು
ಅವರನು ಸಾಂತ್ವನ ಗೈದಿರಲು
ಮೃದುಮಾತುಗಳಲಿ ಎಲ್ಲರ ಒಲಿಸುತ
ರಾಮನು ಕಾಡಿಗೆ ನಡೆದಿಹನು. ।೧೮।

ಎಸ್. ಜಿ. ಮಾಲತಿ ಶೆಟ್ಟಿ

ಕ್ಷೇತ್ರ : ಓದುವುದು.
ಸಾಮರ್ಥ್ಯ : ಪಠ್ಯ ಪುಸ್ತಕವನ್ನು ಓದಿದ ಬಳಿಕ ಕೇಳಿದ ಪ್ರಶ್ನೆಗಳಿಗೆ ಉತ್ತರಿಸುವುದು.

ಆಶಯ

ರಾಮಾಯಣ, ಮಹಾಭಾರತ ಹಾಗೂ ಇತರ ಪುರಾಣ ಗ್ರಂಥಗಳು ನಮಗೆ ನೀತಿ, ಮೌಲ್ಯಗಳನ್ನು ತಿಳಿಸುತ್ತವೆ. ಆಧುನಿಕ ಮಾನವನು ಇಂತಹ ಕಾವ್ಯಗಳನ್ನು ಓದುವಲ್ಲಿ ಅಷ್ಟಾಗಿ ಆಸಕ್ತಿಯನ್ನು ತೋರಿಸುತ್ತಿಲ್ಲ. ಇದರಿಂದ ಜೀವನ ಮೌಲ್ಯಗಳು ಕುಸಿದು ಹೋಗುತ್ತಿವೆ ಎನ್ನಲಾಗಿದೆ. ಮಕ್ಕಳಲ್ಲಿ ಅಂತಹ ಕಾವ್ಯಗಳನ್ನು ಓದುವ ಹವ್ಯಾಸವನ್ನು ಬೆಳೆಸುವುದು ಇಲ್ಲಿನ ಆಶಯ.



ಕವಿ ಪರಿಚಯ



ಶ್ರೀಮತಿ ಎಸ್.ಜಿ. ಮಾಲತಿ ಶೆಟ್ಟಿ, ಅವರು ಕನ್ನಡದ ಕತೆಗಾರ್ತಿಯರಲ್ಲಿ ಒಬ್ಬರು. ಮೂಲತಃ ಶೃಂಗೇರಿಯವರಾದ ಇವರು ಬೆಂಗಳೂರಿನಲ್ಲಿ ನೆಲೆಸಿದ್ದು ಸಾಹಿತ್ಯ ಕೃಷಿಯಲ್ಲಿ ತೊಡಗಿದ್ದಾರೆ. ಕರ್ಮಣ್ಯೇ ವಾಧಿಕಾರಸ್ತೆ, ನಿಲ್ಲು ನಿಲ್ಲೆ ಪತಂಗ ಮುಂತಾದ ಹದಿನೇಳಕ್ಕೂ ಹೆಚ್ಚು ಕಾದಂಬರಿಗಳನ್ನು, ನಲವತ್ತಕ್ಕೂ ಹೆಚ್ಚು ಕತೆಗಳನ್ನು, ಹಾಸ್ಯ ಕಾದಂಬರಿ, ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಗಾನ ರಾಮಾಯಣ ಅವರ ಉತ್ತಮ ಕೃತಿಗಳಲ್ಲಿ ಒಂದು. ಈ ಲಾವಣಿಯನ್ನು ಅವರ 'ಗಾನ ರಾಮಾಯಣ' ಎಂಬ ಖಂಡ ಕಾವ್ಯದಿಂದ ಆರಿಸಿಕೊಳ್ಳಲಾಗಿದೆ.

ಅ.ಅರ್ಥ ತಿಳಿಯಿರಿ.

ಪಟ್ಟ–ಸಿಂಹಾಸನ. ಸನ್ನಾಹ–ಸಿದ್ಧತೆ, ತಯಾರಿ. ದಾಸಿ – ಸೇವಕಿ. ಕೆರಳು ರೇಗು, ಸಿಟ್ಟಿಗೇಳು. ಕುಟಿಲತೆ–ವಂಚನೆ, ಮೋಸ, ಕಪಟ. ದುಷ್ಟ–ನೀಚ, ಕೆಟ್ಟ. ಅರುಹು–ಹೇಳಿಕೊಳ್ಳು, ನಿವೇದಿಸು, ತಿಳಿಸು. ಮಾತ್ಸರ್ಯ–ಹೊಟ್ಟೆಕಿಚ್ಚು. ಆಶಯ–ಮನಸ್ಸಿನ ಭಾವ, ಉದ್ದೇಶ. ಘಟಿಸು–ಉಂಟಾಗು, ಸಂಭವಿಸು. ವರ–ಅನುಗ್ರಹ, ಕೊಡುಗೆ. ಜ್ಞಾಪಿಸು–ನೆನಪಿಸು, ಸ್ಮರಿಸು. ದುರುಳೆ–ದುಷ್ಟೆ, ನೀಚಳು. ಬೀಗು–ಗರ್ವಪಡು, ಹೆಮ್ಮೆಪಡು. ಪರಿ–ರೀತಿ, ಕ್ರಮ. ಆಜ್ಞೆ–ಅಪ್ಪಣೆ, ನಿರ್ದೇಶನ. ಸೊಲ್ಲು–ಹೇಳು, ಮಾತನಾಡು. ಸಾಂತ್ವನ–ಸಮಾಧಾನಪಡಿಸುವಿಕೆ.

ಆ. ವಿವರ ತಿಳಿಯಿರಿ.

ದಶರಥ : ಅಯೋಧ್ಯೆಯ ರಾಜ.

ಮಂಥರೆ : ಕೈಕೇಯಿಯ ದಾಸಿ.

ಕೈಕೇಯಿ : ದಶರಥನ ಮೂರನೆಯ ಮಡದಿ. (ಮೊದಲನೆಯ ಮಡದಿ– ಕೌಸಲ್ಯೆ ಎರಡನೆಯ ಮಡದಿ–ಸುಮಿತ್ರೆ)

ರಾಮ : ಕೌಸಲ್ಯೆಯ ಮಗ

ಲಕ್ಷ್ಮಣ : ಸುಮಿತ್ರೆಯ ಮಗ, ಸುಮಿತ್ರೆಗೆ ಅವಳಿ ಮಕ್ಕಳಿದ್ದು ಇನ್ನೊಬ್ಬನ ಹೆಸರು ಶತ್ರುಘ್ನ.

ಭರತ : ಕೈಕೇಯಿಯ ಮಗ.

ವನವಾಸ : ನಗರದ ಸೌಲಭ್ಯಗಳನ್ನು ತ್ಯಜಿಸಿ ಕಾಡಿನಲ್ಲಿ ಸರಳವಾಗಿ ಜೀವನ ನಡೆಸುವುದೇ ವನವಾಸ.

ಮಥಿಸಿ : ಒಂದು ವಿಷಯವನ್ನು ಕುರಿತು ವಿಚಾರ ಮಾಡಿ, ಚಿಂತನೆ ನಡೆಸಿ.



ಇ. ಕೆಳಗಿನ ಪ್ರಶ್ನೆಗಳಿಗೆ ಉತ್ತರ ಹೇಳಿರಿ.

೧. ರಾಮನಿಗೆ ಪಟ್ಟವನ್ನು ಕಟ್ಟುವ ಸುದ್ದಿಯನ್ನು ಯಾರು ಸಹಿಸಿಕೊಳ್ಳಲಿಲ್ಲ?

೨. ಪಟ್ಟಾಭಿಷೇಕದ ಸುದ್ದಿಯನ್ನು ತಿಳಿಸಿದ ಮಂಥರೆಗೆ ಕೈಕೇಯಿ ಏನನ್ನು ಬಹುಮಾನವಾಗಿ ನೀಡಿದಳು?

೩. ಕೈಕೇಯಿಗೆ ಯಾರನ್ನು ರಾಜನನ್ನಾಗಿ ಮಾಡುವ ಆಸೆ ಹುಟ್ಟಿತು?

೪. ದಶರಥನ ಬಳಿ ಕೈಕೇಯಿ ಯಾವ ಎರಡು ವರಗಳನ್ನು ಕೇಳಿದಳು?

೫. ರಾಮನು ಎಷ್ಟು ವರ್ಷಗಳ ಕಾಲ ವನವಾಸಕ್ಕೆ ಹೊರಡಲು ಸಿದ್ಧನಾದನು?

ವ್ಯಾಕರಣ ಮಾಹಿತಿ

ಅ. ಸಂಧಿ ಪರಿಚಯ

ನಾವು ಮಾತನಾಡುವಾಗ ಕೆಲವು ಶಬ್ದಗಳನ್ನು ಬಿಡಿಬಿಡಿಯಾಗಿ ಹೇಳುವುದಿಲ್ಲ. ಅವನು+ಅಲ್ಲಿ ಎಂಬ ಎರಡು ಶಬ್ದಗಳನ್ನು ಕೂಡಿಸಿ 'ಅವನಲ್ಲಿ' ಎಂದು ಹೇಳುತ್ತೇವೆ. ಅಂದರೆ ಅವುಗಳನ್ನು ಕೂಡಿಸಿಯೇ ಹೇಳುತ್ತೇವೆ.

ಉದಾ:– ಆಡು+ಇಸು=ಆಡಿಸು

ಮರ+ಅನ್ನು=ಮರವನ್ನು

ದೇವರು+ಇಗೆ=ದೇವರಿಗೆ

ಮಳೆ+ಕಾಲ=ಮಳೆಗಾಲ

ಹೀಗೆ ಎರಡು ಅಕ್ಷರಗಳು ಯಾವ ಕಾಲ ವಿಳಂಬವೂ ಇಲ್ಲದೆ ಪರಸ್ಪರ ಸೇರುವುದಕ್ಕೆ ಸಂಧಿ ಎನ್ನುವರು.

ಪದ		ಪದ		ಸಂಧಿ ರೂಪ
ಅವನ	+	ಅಂಗಡಿ	=	ಅವನಂಗಡಿ
ಕುಲ	+	ಅನ್ನು	=	ಕುಲವನ್ನು
ಬೆಟ್ಟ	+	ತಾವರೆ	=	ಬೆಟ್ಟದಾವರೆ
ಮಳೆ	+	ಕಾಲ	=	ಮಳೆಗಾಲ

ಹೀಗೆ ಒಂದು ಪದ ಇನ್ನೊಂದು ಪದದೊಡನೆ ಸೇರಿದಾಗ ಪೂರ್ವಪದದ ಅಂತ್ಯದಲ್ಲಿ ಮತ್ತು ಉತ್ತರ ಪದದ ಆದಿಯಲ್ಲಿ ಮೂರು ಬಗೆಯ ಕಾರ್ಯಗಳು ನಡೆಯಬಹುದು. ಅಕ್ಷರವೊಂದು ಲೋಪವಾಗಬಹುದು, ಇನ್ನೊಂದು ಆಗಮಿಸಬಹುದು, ಒಂದು ಅಕ್ಷರ ಹೋಗಿ ಅದರ ಸ್ಥಾನದಲ್ಲಿ ಬೇರೆಯೇ ಅಕ್ಷರ ಬರಬಹುದು. ಇದನ್ನು ಸಂಧಿಕಾರ್ಯ ಎನ್ನುವರು.



ಪೂರ್ವಪದ	+	ಉತ್ತರಪದ	=	ಸಂಧಿಕಾರ್ಯ
ಉದಾ:–ಮಾತು	+	ಅನ್ನು	=	ಮಾತನ್ನು
(ಉ)	+	(ಅ)	=	ಉ(ಲೋಪ)

ಸಂಧಿಯ ವಿವಿಧ ಪ್ರಕಾರಗಳ ಬಗ್ಗೆ ಮುಂದಿನ ಪಾಠದಲ್ಲಿ ತಿಳಿದುಕೊಳ್ಳೋಣ.

ಆ. ಓದಿಗೆ ಮನ್ನಣೆ

೧. ವಾಲ್ಮೀಕಿ ವಿರಚಿತ ರಾಮಾಯಣ ಗ್ರಂಥದ ಸರಳ ಕನ್ನಡ ಅನುವಾದವನ್ನು ಓದಿ ಅರ್ಥೈಸಿಕೊಳ್ಳಿರಿ.

೨. ಮಹಾಭಾರತದಲ್ಲಿ ಬರುವ ಕಥೆಗಳನ್ನು ಕೇಳಿ ತಿಳಿಯಿರಿ.

೩. 'ಗಾನ ರಾಮಾಯಣ' ಪುಸ್ತಕವನ್ನು ಸಂಪಾದಿಸಿ ಓದಿರಿ.

ಇ. ಶುಭ ನುಡಿ

೧. ತಂದೆ, ತಾಯಿ, ತಾತಂದಿರು ನಡೆದ ಸನ್ಮಾರ್ಗದಲ್ಲಿ ನಡೆದರೆ ಅಧರ್ಮಕ್ಕೆ ಅವಕಾಶವಿಲ್ಲ.

೨. ಬರೀ ವಿದ್ಯೆಯಿಂದ ಅಥವಾ ತಪಸ್ಸಿನಿಂದ ಸಜ್ಜನನಾಗುವುದಿಲ್ಲ.

೩. ಯಾರು ಹಿರಿಯರನ್ನು, ತಂದೆ–ತಾಯಿಯರನ್ನು ಗೌರವಿಸುತ್ತಾರೊ ಅವರು ನಿಜವಾದ ಸಜ್ಜನರೆನಿಸಿಕೊಳ್ಳುತ್ತಾರೆ.

ಪೂರಕ ಪಾಠ : ಜೈ ಭುವನೇಶ್ವರಿ



ಭುವನೇಶ್ವರಿ ಪದ ಪೂಜಿಸಿ ಹೇಳುವೆ ಸಿರಿಗನ್ನಡ ವರ ಚರಿತೆಯನು ।
ಕನ್ನಡ ನಾಡಿನ ಹೆಮ್ಮೆಯ ಮಕ್ಕಳೆ ಕೇಳಿರಿ ನಾಡಿನ ಸೊಬಗನ್ನು ॥೧॥

ಗೆದ್ದು ಪಲ್ಲವರ ಕದಂಬಮಯೂರ ಮೆರೆದನು ವರಬನವಾಸಿಯಲಿ ।
ತದನಂತರ ಚಾಲುಕ್ಯರ ಆಳ್ವಿಕೆ ವೀರತಾಣ ಬಾದಾಮಿಯಲಿ ॥೨॥

ನಾಡಿನ ಹೆಮ್ಮೆಯು ಗಂಗ ಮನೆತನ ರಾಷ್ಟ್ರಕೂಟ ಹೊಯ್ಸಳ ಹಿರಿಮೆ ।
ವಿಜಯನಗರಸಿರಿ ಕೆಳದಿಯ ವೈಭವ ಕನ್ನಡಮಾತೆಯ ನಿಜಗರಿಮೆ ॥೩॥

ಹೊಯ್ಸಳ ಪತನದ ನಂತರ ಬೆಳೆಯಿತು ವಿಜಯನಗರವತಿ ಶೀಘ್ರದಲಿ ।
ಲೋಕವೆ ಬೆರಗಾಗುವ ಸಿರಿಸಂಪದ ಮೆರೆಯಿತು ಈ ಸಾಮ್ರಾಜ್ಯದಲಿ ॥೪॥

ಯುದ್ಧದಿ ಆಂಗ್ಲರನೆದುರಿಸಿ ಗೆದ್ದಳು ಚನ್ನಮ್ಮನು ಕಿತ್ತೂರಿನಲಿ ।
ದ್ರೋಹಕೆ ಸೆರೆಯಾಗುತ ದಿನವನು ದೂಡಿದಳವಳು ಜೈಲಿನಲಿ ॥೫॥

ರಾಜರ ಅಂತಃಕಲಹದಿ ಬಿಳಿಯರು ಭಾರತವನ್ನೇ ನುಂಗಿದರು ।
ಮೈಸೂರಿನ ಹುಲಿ ಟೀಪುವ ಸೋಲಿಸಿ ರಂಗಪಟ್ಟಣವನಮರಿದರು ॥೬॥

ಸ್ವತಂತ್ರ ಭಾರತ ಚಳುವಳಿ ದೇಶದಿ ಬೆಳೆಯಿತು ಗಾಂಧೀ ತತ್ವದಲಿ ।
ಸ್ವದೇಶಿ ಚಳುವಳಿ ಅಸಹಕಾರಗಳು ಮೊಳೆತವು ಹಿರಿಯರ ಮಾರ್ಗದಲಿ ॥೭॥

ನಲವತ್ತೇಳರ ಆಗಸ್ಟಿನಲಿ ಹದಿನಾಲ್ಕರ ನಡುರಾತ್ರಿಯಲಿ ।
ಹಾರಿತು ಸ್ವತಂತ್ರ ಭಾರತಬಾವುಟ ಹೆಮ್ಮೆಯ ಭಾರತ ದೇಶದಲಿ ॥೮॥

ಐವತ್ತಾರರ ನವೆಂಬರೊಂದು– ವಿಶಾಲ ಮೈಸೂರಿನ ಉದಯ ।
ಭಾವನೆ ತುಂಬಲು ಎಪ್ಪತ್ಮೂರರಲಿ ಕರ್ನಾಟಕವಾಗಿಹ ಪರಿಯ ॥೯॥

ಹಿಂದೂ ಮುಸ್ಲಿಂ ಕ್ರೈಸ್ತ ಜೈನ ಬಸವೇಶ್ವರರ ಸಿರಿಪಂಥವಿದೆ ।
ಕೊಂಕಣಿ ಉರ್ದು ತುಳುವಿನ ಸಂಸ್ಕೃತಿ ಕನ್ನಡತನಜಲ ಚಿಮ್ಮುತಿದೆ ॥೧೦॥

"ಕನ್ನಡಗೆಲ್ಲಲಿ ಕನ್ನಡಬಾಳಲಿ" ನಮ್ಮೀ ಕನ್ನಡ ನೆಲದಲ್ಲಿ ।
"ಕನ್ನಡ ಕಲಿಯಿರಿ ಕನ್ನಡ ಪೋಷಿಸಿ" ನಮ್ಮಯ ಕನ್ನಡನಾಡಿನಲಿ ॥೧೧॥

– ಬಿ.ವಿ. ಸತ್ಯನಾರಾಯಣರಾವ್.

ಕೆಳಗಿನ ಪ್ರಶ್ನೆಗಳಿಗೆ ಉತ್ತರ ಹೇಳಿರಿ.

೧) ಮೈಸೂರು ರಾಜ್ಯದ ಉದಯ ಯಾವಾಗ ಆಯಿತು?

೨) ಬಾದಾಮಿಯಲ್ಲಿ ಯಾರು ಆಳ್ವಿಕೆ ನಡೆಸಿದರು?

೩) ಕನ್ನಡದ ಜೊತೆಗೆ ಯಾವ ಯಾವ ಸಂಸ್ಕೃತಿಗಳು ಬೆರೆತಿವೆ?

೪) ಚೆನ್ನಮ್ಮ ಯುದ್ಧದಲ್ಲಿ ಯಾರನ್ನು ಎದುರಿಸಿದಳು?

೫) ಪಲ್ಲವರನ್ನು ಸೋಲಿಸಿದ ಕದಂಬರ ರಾಜ ಯಾರು?



ಪದ ಖಜಾನೆ

ಮೊದಲನೆಯ ಸೆಮಿಸ್ಟರ್

ಅ

ಅಗಲು : ಬಿಟ್ಟುಹೋಗು, ತೊರೆಯು
ಅಜಾತ : ಹುಟ್ಟದಿರುವ, ಹುಟ್ಟಿಲ್ಲದ, ಜನಿಸದ
ಅದ್ಭುತ : ಅತ್ಯಾಶ್ಚರ್ಯಕರ, ಸೋಜಿಗ
ಅಧಿಪತಿ : ಒಡೆಯ, ನಾಯಕ
ಅನತಿ : ಸ್ವಲ್ಪ, ಹತ್ತಿರ
ಅನಾಹುತ : ತೊಂದರೆ, ಅಪಾಯ
ಅಭಿವೃದ್ಧಿ : ಮುಂದುವರಿದ, ಪ್ರಗತಿ
ಅಮೂಲ್ಯ : ಬೆಲೆಕಟ್ಟಲಾಗದ, ಶ್ರೇಷ್ಠವಾದ
ಅಯ್ಯ : ತಂದೆ, ವಿದ್ಯಾಗುರು
ಅರವಟ್ಟಿಗೆ : ಉಚಿತವಾಗಿ ನೀರುಕೊಡುವ ತಾಣ.
ಅರಿವು : ತಿಳುವಳಿಕೆ, ಜ್ಞಾನ, ಎಚ್ಚರ
ಅರುಹು : ತಿಳಿಸು, ನಿವೇದಿಸು
ಅವಕಾಶ : ಸಂದರ್ಭ
ಅಶುದ್ಧ : ಮಲಿನವಾದ, ಶುದ್ಧವಲ್ಲದ

ಆ

ಆಕ್ರೋಶ : ಕೋಪ, ಸಿಟ್ಟು
ಆಚರಣೆ : ನಡವಳಿಕೆ, ರೂಢಿ
ಆಚಾರ : ಒಳ್ಳೆಯ ನಡತೆ, ಸಂಪ್ರದಾಯ
ಆಜ್ಞೆ : ಅಪ್ಪಣೆ, ಆದೇಶ
ಆತಂಕ : ಭಯ, ತಳಮಳ
ಆದರ್ಶ : ಧ್ಯೇಯ, ಮಾದರಿ
ಆಧಾರ : ಆಶ್ರಯ, ನೆಲೆಗಟ್ಟು
ಆಶಯ : ಅಭಿಪ್ರಾಯ, ಮನಸ್ಸಿನ ಭಾವ, ಉದ್ದೇಶ
ಆಶೀರ್ವಾದ : ಹಾರೈಕೆ, ಒಳ್ಳೆಯದಾಗಲಿ ಎಂದು ಹರಸುವಿಕೆ

ಇ

ಇನಾಮು : ಬಹುಮಾನ, ಉಡುಗೊರೆ
ಇಮ್ಮಡಿಸು : ಎರಡರಷ್ಟಾಗು, ದ್ವಿಗುಣವಾಗು

ಈ

ಈಸು : ಇಷ್ಟು, ಇನಿತು, ಈಜು

ಉ

ಉಡು : ಧರಿಸು, ತೊಟ್ಟುಕೊಳ್ಳು
ಉದಯಿಸು : ಹುಟ್ಟು, ಮೇಲಕ್ಕೆ ಬರು
ಉಪೇಕ್ಷೆ : ತಿರಸ್ಕಾರ, ಕಡೆಗಣಿಸುವಿಕೆ
ಉಳಿ : ಉಳಿಯು, ಬದುಕು, ಜೀವಿಸು

ಒ

ಒಳಿತು : ಒಳ್ಳೆಯ, ಚೆನ್ನಾದ

ಔ

ಔಷಧಿ : ಚಿಕಿತ್ಸೆ, ಮದ್ದು

ಕ

ಕಟ್ಟಪ್ಪಣೆ : ತಾಕೀತು, ಕಟುವಾದ ಆಜ್ಞೆ
ಕಲಕು : ಕದಡು, ಬೆರೆಸು
ಕಲ್ಮಷ : ಕೊಳೆ, ಕೆಸರು, ಕಷ್ಮಲ
ಕವಿದ : ಆವರಿಸಿದ, ಮರೆಮಾಡಿದ
ಕಳಚು : ಬೇರ್ಪಡಿಸು, ಬಿಚ್ಚು
ಕುಂಭ : ಕೊಡ, ಜಲಪಾತ್ರೆ
ಕುಟಿಲತೆ : ವಂಚನೆ, ಮೋಸ, ಕಪಟ
ಕುರಿತು : ಉದ್ದೇಶಿಸಿ, ಸಂಬಂಧವಾಗಿ
ಕೆಂಬಣ್ಣ : ಕೆಂಪಾದಬಣ್ಣ, ರಕ್ತವರ್ಣ
ಕೆಡಿಸು : ನಾಶಮಾಡು, ಹಾಳುಮಾಡು
ಕೆರಳು : ರೇಗು, ಸಿಟ್ಟಿಗೇಳು



ಕರೆತ : ತುರಿಕೆ, ಕಡಿತ

ಕೇಡು : ಕೆಡುಕುತನ, ಹಾನಿ

ಕ್ಷೇಮ : ಸೌಖ್ಯ, ಕುಶಲ

ಕೊಳೆ : ಕೆಟ್ಟ ನಾರು, ಇದ್ದಲ್ಲೇಇದ್ದು ಕೆಡುವುದು

ಖ

ಖಾರವಾಗು : ಕಟುವಾಗು, ತೀಕ್ಷ್ಣವಾಗು

ಖಾಸಗಿ : ವೈಯಕ್ತಿಕ, ಸ್ವಕೀಯವಾದ

ಗ

ಗಂಭೀರ : ಗಹನವಾದ, ತೀವ್ರವಾದ

ಗಟ್ಟಿ : ಶಕ್ತಿ,ಬಲ

ಗಟ್ಟಿಗ : ಬಲಯುತ, ಧೈರ್ಯಶಾಲಿ

ಗರ್ವ : ಸೊಕ್ಕು, ಅಹಂಕಾರ

ಗಳಿಸು : ಸಂಪಾದಿಸು

ಗಾಬರಿ : ದಿಗಿಲು, ಅಳುಕು

ಗುತ್ತಿಗೆ : ನೋಡಿಕೊಳ್ಳುವ ಜವಾಬ್ದಾರಿ

ಗುಳ್ಳೆ : ಬೊಬ್ಬೆ, ಬೊಕ್ಕೆ

ಗೊಬ್ಬರ : ಸಸ್ಯಕ್ಕೆ ಉಣಿಸುವ ಆಹಾರ, ಸೆಗಣಿ, ಕಸಕಡ್ಡಿಗಳ ಮಿಶ್ರಣ

ಘ

ಘಟಿಸು : ಉಂಟಾಗು, ಸಂಭವಿಸು

ಚ

ಚರ್ಚೆ : ವಾಗ್ವಾದ, ವಾದ-ವಿವಾದ, ತರ್ಕ

ಚಾಚಿ : ಮುಂದೆ ಒಡ್ಡಿ

ಚೀರು : ಅರಚು, ಒದರು

ಜ

ಜಬರಿಸು : ಹೆದರಿಸು, ಗದರಿಸು

ಜಲಚರ : ನೀರಿನಲ್ಲಿ ಸಂಚರಿಸುವ

ಜ್ಞಾಪಿಸು : ನೆನಪಿಸು, ಸ್ಮರಿಸು

ಝ

ಝಳ : ಉರಿ, ಹೊಳಪು

ಟ

ಟಾರ್ : ಡಾಂಬರು, ಟಾರು

ತ

ತಣಿಸು : ತೃಪ್ತಿಗೊಳಿಸು, ಸಮಾಧಾನಪಡಿಸು

ತಪಾಸಣೆ : ಪರಿಶೀಲನೆ, ವಿಚಾರಣೆ

ತವಕ : ಆತುರತೆ, ಕಾತರ, ತ್ವರೆ

ತಾತ್ಸಾರ : ಉದಾಸೀನ, ಅವಗಣನೆ

ತಾಳು : ಸಹಿಸಿಕೊಳ್ಳು

ತ್ಯಾಗಿ : ಉದಾರಿ, ದಾನಿ

ತಿಕ್ಕು : ಉಜ್ಜು, ಹೊಸೆಯು

ತಿಳಿಹೇಳು : ತಿಳುವಳಿಕೆ ಕೊಡು

ತುಕ್ಕು : ಜಂಗು

ತುರ್ತು : ಜರೂರು, ಕೂಡಲೆ

ತೃಪ್ತಿ : ಸಮಾಧಾನ, ಖುಷಿ

ತೋಚು : ಹೊಳೆಯು, ತೋರು

ದ

ದಟ್ಟ : ಸಾಂದ್ರ, ನಿಬಿಡ

ದಣಿವು : ಆಯಾಸ, ಬಳಲಿಕೆ



ದೃಢ : ಸ್ಥಿರ, ಗಟ್ಟಿ
ದ್ರವ್ಯ : ಧನ, ಸಂಪತ್ತು
ದಾಸಿ : ಸೇವಕಿ
ದಾಹ : ಬಾಯಾರಿಕೆ, ನೀರಡಿಕೆ
ದಿಣ್ಣೆ : ದಿಬ್ಬ, ತಿಟ್ಟು
ದುಡಿಸು : ಕೆಲಸಕ್ಕೆ ಹಚ್ಚು
ದುರುಗುಟ್ಟು : ಕೆಕ್ಕರಿಸು, ದಿಟ್ಟಿಸಿನೋಡು
ದುರುಳೆ : ನೀಚಹೆಂಗಸು, ದುಷ್ಟೆ
ದುಷ್ಟ : ನೀಚ, ಕೆಟ್ಟವನು
ದೂತ : ಸೇವಕ, ಆಳು
ದೂರು : ನಿಂದೆ, ಚಾಡಿ
ದೌರ್ಜನ್ಯ : ಅತಿಕ್ರಮಣ, ಕೆಡಕುತನ

ನ

ನಡೆ : ಶೀಲ, ಚಲಿಸು
ನಲಿವು : ಕುಣಿದಾಡು, ಹರ್ಷ
ನಶಿಸು : ನಾಶವಾಗು, ಅವನತಿಗೊಳ್ಳು
ನಾಯಕತ್ವ : ಮುಂದಾಳುತ್ವ, ಹಿರಿತನ
ನಿರ್ವಹಣೆ : ಜವಾಬ್ದಾರಿ ನಿಭಾಯಿಸುವಿಕೆ
ನಿಲ್ದಾಣ : ವಾಹನಗಳು ನಿಲ್ಲುವ ಸ್ಥಳ
ನುಸಿ : ಕಾಳು ಕಡ್ಡಿಗಳನ್ನು ಹಾಳು ಮಾಡುವ ಕ್ರಿಮಿ
ನೆಮ್ಮದಿ : ಸಮಾಧಾನ, ಸಂತೃಪ್ತಿ

ಪ

ಪಟ್ಟ : ಸಿಂಹಾಸನ
ಪತ್ತೆ ಹಚ್ಚು : ಕಂಡುಹಿಡಿ, ಶೋಧಿಸು
ಪರಿ : ರೀತಿ, ಕ್ರಮ
ಪರಿಶೀಲನೆ : ಸೂಕ್ಷ್ಮವಾಗಿ ನೋಡುವಿಕೆ
ಪರಿಹಾರ : ನಿವಾರಣೆ, ನಷ್ಟತುಂಬಿಸು
ಪವಿತ್ರ : ಶುದ್ಧ, ಪಾವನ
ಪಶ್ಚಾತ್ತಾಪ : ವಿಷಾದಿಸುವಿಕೆ, ತಪ್ಪುಮಾಡಿದ್ದಕ್ಕೆ ಮರುಕ
ಪ್ರತ್ಯೇಕ : ಬೇರೆಬೇರೆಯಾದ, ಬಿಡಿಬಿಡಿಯಾದ
ಪ್ರದರ್ಶಿಸು : ತೋರಿಸು, ಬಿಚ್ಚಿಡು
ಪ್ರಯಾಣಿಕ : ಯಾತ್ರೆಮಾಡುವವನು, ಪಯಣಿಗ
ಪ್ರಯೋಜನ : ಉಪಯೋಗ, ಲಾಭ
ಪ್ರಸಿದ್ಧ : ಖ್ಯಾತಿಪಡೆದ, ಹೆಸರಾದ
ಪಾಲ್ಗೊಳ್ಳು : ಸೇರಿಕೊಳ್ಳು, ಭಾಗವಹಿಸು
ಪುರ : ಪಟ್ಟಣ, ನಗರ
ಪೈರು : ಬೆಳೆ, ಫಸಲು
ಪೈಲಟ್ : ವಿಮಾನ ಚಾಲಕ

ಫ

ಫಲವತ್ತತೆ : ಸಾರದಿಂದ ಕೂಡಿದ, ಫಲವುಳ್ಳ
ಫಲಕ : ಬರೆಯುವ ಹಾಳೆ, ಹಲಗೆ

ಬ

ಬತ್ತು : ಇಂಗಿಹೋಗು
ಬಯಲುಸೀಮೆ: ಸಮತಟ್ಟಾದ ಪ್ರದೇಶ
ಬಸವಳಿ : ಶಕ್ತಿಗುಂದು, ಆಯಾಸಗೊಳ್ಳು
ಬಾಯಾರಿಕೆ : ದಾಹ, ನೀರಡಿಕೆ
ಬ್ರಿಟೀಷರು : ಬಿಳಿಜನರು, ಪರಂಗಿಯವರು
ಬೀಗು : ಗರ್ವಪಡು, ಅಹಂಕರಿಸು
ಬೆದರದೆ : ಹೆದರದೆ, ಭಯಪಡದೆ



ಬೆಳೆ ತೆಗೆ : ಫಸಲು ಪಡೆ
ಬೊಜ್ಜು : ಕೊಬ್ಬು, ಅತಿಯಾಗಿ ಬೆಳೆದ ದೇಹ
ಬೋಧಿಸು : ತಿಳುವಳಿಕೆ ನೀಡು

ಭ

ಭಕ್ತಿ : ಆರಾಧನೆ, ಪೂಜ್ಯ ಭಾವನೆ

ಮ

ಮಂಪರು : ಕಣ್ಣು ಕತ್ತಲು ಬರುವುದು, ಜೊಂಪು
ಮಡಿ : ಮರಣಹೊಂದು, ನಿರ್ಮಲವಾಗಿರು
ಮಣಿ : ಹರಳು, ಶರಣಾಗು
ಮಥಿಸು : ಕಡೆಯು, ಚರ್ಚಿಸು
ಮದ : ಅಹಂಕಾರ, ಸೊಕ್ಕು
ಮದ್ದು ಗುಂಡು : ಸ್ಫೋಟಕ ಪುಡಿ, ತುಪಾಕಿಯ ಗುಂಡು
ಮಲಿನ : ಕಲುಷಿತ, ಕೊಳೆಯಾದ
ಮಹಡಿ : ಉಪ್ಪರಿಗೆ, ಮಾಳಿಗೆ
ಮಾತ್ಸರ್ಯ : ಹೊಟ್ಟೆಕಿಚ್ಚು
ಮೀರಿ : ದಾಟಿ, ಮುಂದೆ ಹೋಗಿ
ಮುಂಜಾನೆ : ಬೆಳಗಿನ ಹೊತ್ತು, ನಸುಕು
ಮುಡಿ : ಕೂದಲಿನ ರಾಶಿ, ಧರಿಸು
ಮುದ : ತೃಪ್ತಿ, ಖುಷಿ
ಮೂಕವಿಸ್ಮಿತ : ಆಶ್ಚರ್ಯಚಕಿತ
ಮೂರ್ಛೆ : ಪ್ರಜ್ಞೆ ತಪ್ಪು, ಎಚ್ಚರ ತಪ್ಪು
ಮೊಳೆಯು : ಚಿಗುರು
ಮೋಸ : ಕಪಟ, ವಂಚನೆ

ಯ

ಯುದ್ಧ : ಸಮರ, ಕದನ

ರ

ರಕ್ಷಕ : ಪಾಲಕ, ಕಾಪಾಡುವವನು
ರಣಗುಡು : ಬೇಗೆಯಿಂದ ಕೂಡಿದ, ಭಣಗುಟ್ಟುವ
ರಾಕ್ಷಸ : ಅಸುರ, ದೈತ್ಯ, ರಕ್ಕಸ
ರಾಡಿ : ಕೆಸರು, ಕೊಳೆ
ರಟ್ಟೆ : ತೋಳು
ರೋಷ : ಸಿಟ್ಟು, ಕೋಪ

ವ

ವನವಾಸ : ಕಾಡಿನಲ್ಲಿ ವಾಸಿಸುವುದು
ವರ : ಅನುಗ್ರಹ, ಶ್ರೇಷ್ಠ
ವ್ರತ : ನಿಯಮ, ನೋಂಪಿ
ವಾದಿಸು : ವಾದಮಾಡು, ಚರ್ಚಿಸು
ವಿಧಿವಶ : ಮರಣ, ನಿಧನ
ವಿಪರೀತ : ಅತ್ಯಧಿಕ, ಅತಿಹೆಚ್ಚು
ವಿಶಾಲ : ವಿಸ್ತಾರ, ದೊಡ್ಡದಾದ
ವಿಷ : ನಂಜು, ಕಹಿ

ಶ

ಶಪಥ : ಪ್ರತಿಜ್ಞೆ, ದೃಢ ಸಂಕಲ್ಪ
ಶಸ್ತ್ರ : ಆಯುಧ, ಯುದ್ಧ ಸಲಕರಣೆಗಳು
ಶಾಂತಿ : ನೆಮ್ಮದಿ, ಸಮಾಧಾನ
ಶಾಪ : ಕೆಟ್ಟದ್ದಾಗಲಿ ಎಂದು ಘೋಷಿಸುವಿಕೆ, ಕೆಡುನುಡಿ
ಶೃಂಗಾರ : ಅಲಂಕಾರ, ಸಿಂಗರಿಸುವಿಕೆ
ಶೌರ್ಯ : ಪರಾಕ್ರಮ, ಎದೆಗಾರಿಕೆ



ಸ

ಸಂಚರಿಸು : ಹರಿದಾಡು, ನಡೆಯು

ಸಂಪತ್ತು : ಐಶ್ವರ್ಯ

ಸಕಲ : ಎಲ್ಲ, ಇಡಿಯ

ಸನ್ನಾಹ : ಸಿದ್ಧತೆ, ತಯಾರಿ

ಸಮರ : ಯುದ್ಧ, ಕಾಳಗ

ಸಮಾರಂಭ : ದೊಡ್ಡಮಟ್ಟದ ಕಾರ್ಯಕ್ರಮ, ಸಮಾವೇಶ

ಸರಕು : ಸಾಮಾನು, ಸಾಮಗ್ರಿ

ಸ್ವಯಂಪ್ರೇರಿತ : ತನಗೆ ತಾನೇ ಸ್ಫೂರ್ತಿಗೊಂಡು

ಸಾಂತ್ವನ : ಸಮಾಧಾನ ಪಡಿಸು, ರಮಿಸು

ಸಾಮರ್ಥ್ಯ : ದಕ್ಷತೆ, ಕಸುವು, ಯೋಗ್ಯತೆ

ಸಾಹಸಿ : ಪರಾಕ್ರಮಿ, ಶೂರ

ಸ್ವಾಮ್ಯ : ಒಡೆತನ, ಹಕ್ಕು

ಸುಂಕ : ತೆರಿಗೆ, ಕರ

ಸುಜಲ : ಶುದ್ಧಜಲ, ಒಳ್ಳೆಯ ನೀರು

ಸೇವೆ : ಉಪಚಾರ

ಸೊಲ್ಲು : ಹೇಳು, ಮಾತು, ನುಡಿಗಟ್ಟು

ಸೋಜಿಗ : ವಿಸ್ಮಯ, ಆಶ್ಚರ್ಯಕರ

ಹ

ಹರವಿ : ನೀರಿಡುವ ಮಣ್ಣಿನ ಪಾತ್ರೆ

ಹರಿಯು : ೧) ಪ್ರವಹಿಸು, ೨) ತುಂಡುಮಾಡು

ಹವೆ : ಗಾಳಿ, ವಾತಾವರಣ

ಹಳಿ : ದೂಷಿಸು, ನಿಂದಿಸು



ಛಲ ಮೆರೆದ ಮಕ್ಕಳು



'ಅಯ್ಯಯ್ಯೋ, ನೋವು ನೋವು' ಎನ್ನುತ್ತ ಕುಳಿತು ಬಿಟ್ಟನು ಸುಹಾಸ್. ಆಟ ಆಡುವಾಗ ಆತ ಕಲ್ಲಿಗೆ ಎಡವಿ ಬಿದ್ದಿದ್ದ. ಆತನ ಕಾಲಿನ ಮಂಡಿಯ ಮೇಲಿನ ಚರ್ಮ ಕಿತ್ತುಹೋಗಿತ್ತು. ಒಸರುತ್ತಿದ್ದ ರಕ್ತಕ್ಕೆ ಸೊಪ್ಪಿನ ರಸವನ್ನು ಹಿಂಡಿಕೊಳ್ಳುತ್ತಿದ್ದ. ಅಲ್ಲಿಗೇ ಕುಂಟುತ್ತ ಬಂದನು ಸಿರಾಜ್. 'ಮುಳ್ಳು ತೆಗೆಯೋ ಸ್ವಲ್ಪ'. –ಆತ ಸುಹಾಸನಲ್ಲಿ ಕೋರಿದ. ಗಟ್ಟಿಯಾದ ಮುಳ್ಳು ಚಪ್ಪಲಿಯನ್ನು ತೂರಿ ಸಿರಾಜ್‌ನ ಕಾಲಿಗೆ ಚುಚ್ಚಿತ್ತು. ಮುಳ್ಳನ್ನು ತೆಗೆದನು ಸುಹಾಸ್. ಹಾಂ! ಎಂದು ಚೀರಿದ ಸಿರಾಜ್. 'ನನ್ನ ಅಂಗಿ ಹರಿದು ಹೋಯ್ತು ಕಣೊ' ಎಂದು ಬೇಸರದಿಂದ ಹೇಳುತ್ತ ಅಲ್ಲಿಗೇ ಬಂದನು ಗುಂಡ. ಕಂಟಿಯಲ್ಲಿ ಬಿದ್ದ ಚೆಂಡನ್ನು ತೆಗೆಯಲು ಹೋಗಿ ಆತನ ಅಂಗಿ ಹರಿದು ಹೋಗಿತ್ತು.

'ಅಯ್ಯೋ ಆಟಾನೂ ಬೇಡ, ಏನೂ ಬೇಡ ಅನಿಸ್ತಾ ಇದೆ ಕಣೊ' ಎಂದನು ಸುಹಾಸ್. 'ಹೌದು ಕಣೊ, ಇಲ್ಲಿ ಬರೀ ಕಲ್ಲು, ಮುಳ್ಳು, ಕೊಚ್ಚೆ, ಕಂಟಿ ಇದೇ ತುಂಬ್ಕೊಂಡಿದೆ', ಬೇಸರದಿಂದ ಹೇಳಿದನು ಸಿರಾಜ್. 'ಹೌದು ಕಣ್ರೊ, ಇಲ್ಲಿ ಆಟ ಆಡೋದೇ ಬೇಡ' ಎಂದನು ಗುಂಡ. ಬೇಸರದಿಂದ ಮಾತನಾಡುತ್ತ ಮೂವರು ಅಲ್ಲಿಯೇ ಕುಳಿತುಬಿಟ್ಟರು.



'ಬನ್ರೋ ಫೀಲ್ಡಿಂಗ್ ಮಾಡ್ರಿ' ಇವರನ್ನು ಕರೆದ ಸುಮಂತ್. ಆತ ಬ್ಯಾಟನ್ನು ಹೆಗಲ ಮೇಲಿಟ್ಟುಕೊಂಡು ನಿಂತಿದ್ದ. 'ಮೊದಲು ಬ್ಯಾಟಿಂಗ್ ಮಾಡ್ಲೋ' ಎಂದು ಲೋಯಿ ಚೆಂಡನ್ನು ಎಸೆದೇ ಬಿಟ್ಟ. ಗಡಿಬಿಡಿಯಿಂದ ಬ್ಯಾಟ್‌ನ್ನು ಬೀಸಿಯೇ ಬಿಟ್ಟನು ಸುಮಂತ್. ಹಾರಿಹೋದ ಚೆಂಡು ಕೊಚ್ಚೆಯೊಳಕ್ಕೆ ಬಿದ್ದುಬಿಟ್ಟಿತು. ಅಲ್ಲಿಯೇ ಕುಳಿತು ಕಲ್ಲಾಟ ಆಡುತ್ತಿದ್ದ ಶೈಲ, ಜೆಸಿಂತಾ, ನಿಮ್ಮಿ ಇವರ ಮೇಲೆ ಅದರ ರಾಡಿ ಸಿಡಿಯಿತು. ಅವರ ಬಟ್ಟೆಯೆಲ್ಲ ಕೊಳೆಯಾಯಿತು. ಕೋಪಗೊಂಡ ಅವರು ಸುಮಂತನ ಕಡೆಗೆ ಸರಸರನೆ ಹೊರಟುಬಿಟ್ಟರು.

ಕ್ರಿಕೆಟ್ ಆಡುತ್ತಿದ್ದ ಹಸನ್, ನಾಜಿರ್, ಗಿರೀಶ್, ಸನ್ನಿ ಎಲ್ಲರೂ ಗಾಬರಿಯಿಂದ ಅತ್ತಲೇ ಓಡಿಬಂದರು. ವಿಕೆಟ್‌ಗೆಂದು ನಿಲ್ಲಿಸಿದ್ದ ಕೋಲುಗಳನ್ನು ಕಿತ್ತು ಎಸೆದಳು ಜೆಸಿಂತ. 'ಮೊದಲು ಈ ಜಾಗ ಸ್ವಚ್ಛ ಮಾಡ್ರಿ, ಆಮೇಲೆ ಆಟ ಆಡ್ರಿ' ಎಂದು ಹೇಳಿದಳು ಶೈಲ. 'ನೀವೇ ಬೇರೆ ಕಡೆ ಹೋಗಿ ಆಡಿರಿ' ಎಂದನು ಗಿರೀಶ್. ಮಾತಿಗೆ ಮಾತು ಬೆಳೆದು ಜಗಳ ಪ್ರಾರಂಭವಾಗುವಂತೆ ಕಂಡಿತು. ನಿಮ್ಮಿಯು ಶೈಲ, ಜೆಸಿಂತಾರನ್ನು ಕರೆದುಕೊಂಡು ಜಾಗ ಖಾಲಿಮಾಡಿದಳು.

ಜೆಸಿಂತಾ ವಿಕೆಟ್‌ಗಳನ್ನು ಕಿತ್ತು ಎಸೆದಿದ್ದು ಮತ್ತು ಶೈಲ ಆಡಿದ ಮಾತು ಹುಡುಗರ ಮೇಲೆ ಪರಿಣಾಮ ಬೀರಿತು. ಹುಡುಗರು ತಮ್ಮ ಹರಟೆ ನಿಲ್ಲಿಸಿ ಬಂದು, ಗುಂಪನ್ನು ಸೇರಿಕೊಂಡರು. ಆ ಸ್ಥಳವನ್ನು ಸ್ವಚ್ಛ ಮಾಡುವ ಬಗ್ಗೆ ಮಾತುಗಳು ನಡೆದವು. ಅಲ್ಲಿಯೇ ದನ ಮೇಯಿಸುತ್ತಿದ್ದ ಗಂಗಜ್ಜ ಹುಡುಗರ ಮಾತುಗಳನ್ನು ಕೇಳಿಸಿಕೊಂಡನು. 'ಸುಮ್ನ ಸುಮ್ಮನೆ ಯಾಕೆ ಮಾತಾಡ್ತೀರಿ' ಎಂದು ವ್ಯಂಗ್ಯವಾಗಿ ನುಡಿದನು ಗಂಗಜ್ಜ. ಮಕ್ಕಳೆಲ್ಲ ಅಜ್ಜನ ಕಡೆಗೆ ತಿರುಗಿದರು. 'ನಿಮ್ಮ ಕೈಲಿ ಏನೂ ಆಗೋದಿಲ್ಲ. ಸುಮ್ನೆ ಹೋಗ್ರಿ' ಎಂದು ಗಂಗಜ್ಜ ನಕ್ಕುಬಿಟ್ಟನು.

ಗಂಗಜ್ಜನ ಮಾತಿನಿಂದ ಮಕ್ಕಳಲ್ಲಿ ಛಲಹುಟ್ಟಿತು. ಆ ಜಾಗವನ್ನು ಸ್ವಚ್ಛ ಮಾಡಲು ನಿರ್ಧರಿಸಿಯೇ ಬಿಟ್ಟರು. ಆಗಲೇ ಎಲ್ಲರೂ ಶೈಲಳ ಮನೆಗೆ ಹೋದರು. ಅವಳ ಅಣ್ಣನಾದ ಅರುಣನ ನೆರವು ಕೋರಿದರು. ಕಾಲೇಜಿನಲ್ಲಿ ಓದುತ್ತಿದ್ದ ಅರುಣ. ಆ ಊರಿನ ಯುವಕ ಸಂಘದ ನಾಯಕನಾಗಿದ್ದ. ಹುಡುಗರ ಮಾತುಗಳನ್ನು ಕೇಳಿದ ಅರುಣ ಭಾನುವಾರದ ದಿನವನ್ನು ಗೊತ್ತುಪಡಿಸಿದನು.



ಭಾನುವಾರದ ದಿನ ಮುಂಜಾನೆಯೇ ಎಲ್ಲರೂ ಸೇರಿದರು. ಗುದ್ದಲಿ, ಹಾರೆ, ಸಲಿಕೆ, ಬುಟ್ಟಿ, ಕತ್ತಿ, ಕುಡುಗೋಲು ಹೀಗೆ ತಮಗೆ ಹೇಳಿದ್ದ ವಸ್ತುಗಳನ್ನು ತಂದಿದ್ದರು. ಹುಡುಗರೆಲ್ಲರೂ ಉತ್ಸಾಹದಲ್ಲಿದ್ದರು. ಯುವಕ ಸಂಘದ ಸದಸ್ಯರು ಸಹಾಯ ಮಾಡಲು ಸಿದ್ಧರಾಗಿದ್ದರು. ಅರುಣ ಐದು ಗುಂಪುಗಳನ್ನು ಮಾಡಿದನು. ಒಂದೊಂದು ಗುಂಪಿಗೂ ಒಂದೊಂದು ಜವಾಬ್ದಾರಿಯನ್ನು ವಹಿಸಿದನು.



ಮೊದಲನೆಯ ಗುಂಪಿಗೆ ಮುಳ್ಳು–ಕಂಟಿಗಳನ್ನು ಕಡಿದು ಹಾಕಲು ತಿಳಿಸಿದ. ಎರಡನೆಯ ಗುಂಪಿಗೆ ನೀರು ನಿಂತಿರುವ ಗುಂಡಿಗಳಿಗೆ ಮಣ್ಣು ತುಂಬಿಸಲು ಹೇಳಿದ. ಮೂರನೆಯ ಗುಂಪಿಗೆ ನೀರು ನಿಲ್ಲದಂತೆ ಚರಂಡಿ ತೋಡಲು ಸಲಹೆಯಿತ್ತ. ನಾಲ್ಕನೆಯ ಗುಂಪಿಗೆ ಬಯಲಿನಲ್ಲಿರುವ ಕಲ್ಲುಗಳನ್ನು ಕಿತ್ತುಹಾಕಲು ಹೇಳಿದ. ಐದನೆಯ ಗುಂಪಿಗೆ ಕಲ್ಲು, ಕಸ, ಕಡ್ಡಿ, ಮುಳ್ಳುಗಿಡಗಳನ್ನು ಸಾಗಿಸುವ ಕೆಲಸವನ್ನು ಒಪ್ಪಿಸಿದ.

ಎಲ್ಲರೂ ಉತ್ಸಾಹದಿಂದ ಕೆಲಸ ಆರಂಭಿಸಿದರು. ಅರುಣ ಎಲ್ಲ ಗುಂಪುಗಳಿಗೂ ಹೋಗಿ ಹೋಗಿ ಹುರುಪು ತುಂಬುತ್ತಿದ್ದ. ಕೆಲಸದ ಬಗ್ಗೆ ಸೂಚನೆಗಳನ್ನು ಹೇಳುತ್ತಿದ್ದ. ಎಲ್ಲ ಗುಂಪಿನವರೂ ಸೂಚನೆಗಳನ್ನು ಪಾಲಿಸುತ್ತ, ಚುರುಕಾಗಿ ಕೆಲಸದಲ್ಲಿ ತೊಡಗಿದರು. 'ಈ ಮುಳ್ಳು ಗಿಡ ಪೂರ್ತಿಯಾಗಿ ಕಡಿದು ಹಾಕಿಬಿಡಿ. ಅಲ್ಲಿ ಗುಂಡಿಗೆ ಇನ್ನು ಸ್ವಲ್ಪ ಮಣ್ಣು ಹಾಕಿ. ಇಲ್ಲಿ ಚರಂಡಿ ಇನ್ನೂ ಸ್ವಲ್ಪ ಆಳಕ್ಕೆ ಅಗೀಬೇಕು. ಆ ಬಂಡೆಯನ್ನು ಸನ್ನೆಹಾಕಿ ಮೀಟಿದರೆ ಬರುತ್ತೆ. ಒಣಗಿದ ಮುಳ್ಳು, ಕಸಕಡ್ಡಿಗೆ ಬೆಂಕಿ ಹಾಕಿ.' ಹೀಗೆ ಅರುಣ ಮತ್ತೂ ಮತ್ತೂ ಸೂಚನೆಗಳನ್ನು ನೀಡುತ್ತಲೇ ಇದ್ದನು.

ಬಿಸಿಲು ಮೇಲೇರತೊಡಗಿತು . ಸುಸ್ತು, ಹಸಿವು ಕಂಡರೂ ಹುಡುಗರು ಕೆಲಸ ನಿಲ್ಲಿಸಲಿಲ್ಲ. ದಾರಿಯಲ್ಲಿ ಹೋಗುತ್ತಿದ್ದ ಜನರು ಹುಡುಗರ ಕೆಲಸ ನೋಡಿ ಬೆರಗಾದರು. ಕೆಲವರು ಇವರ ಸಹಾಯಕ್ಕೆ ಬಂದರು. ಕೆಲಸ ಸಾಗಿತು. ಇಡೀ ಬಯಲು ಸ್ವಚ್ಛಗೊಂಡು ಶುಭ್ರವಾಯಿತು. ಸುಂದರವಾಗಿ ಕಾಣುತ್ತಿದ್ದ ಅಂಗಳದಲ್ಲಿ ಸಂಜೆ ಆಟ ಆಡಲು ತವಕ ಹುಡುಗರಿಗೆ. ಗಂಗಜ್ಜ ಮಾತ್ರ 'ಇದೇನಾ ಮೊದಲಿದ್ದ ಬಯಲು' ಎಂದು ಮೂಗಿನ ಮೇಲೆ ಬೆರಳಿಟ್ಟು ನೋಡುತ್ತಿದ್ದನು.



ಕ್ಷೇತ್ರ : ಆಲಿಸುವುದು.
ಸಾಮರ್ಥ್ಯ : ಮೌಖಿಕ ಸೂಚನೆಗಳ ಸರಣಿಯನ್ನು ಅರ್ಥಮಾಡಿಕೊಂಡು ಗುಂಪು ಚಟುವಟಿಕೆಗಳನ್ನು ಮಾಡುವುದು.

ಆಶಯ

ನಮ್ಮ ಕೆಲಸಗಳನ್ನು ನಾವೇ ಮಾಡಿಕೊಳ್ಳಬೇಕು. ಬದಲಿಗೆ ನಮ್ಮ ಕೆಲಸವನ್ನು ಇನ್ನೊಬ್ಬರು ಮಾಡಿಕೊಡಬೇಕು ಎಂದು ಬಯಸುತ್ತೇವೆ. ಅದರಲ್ಲೂ ಸಾಮಾಜಿಕ ಕೆಲಸಕ್ಕೆ ಕೈಹಾಕಲು ಇಷ್ಟಪಡುವುದೇ ಇಲ್ಲ. ಆದರೆ 'ನಮ್ಮದು' ಎಂದು ಒಟ್ಟಾಗಿ ಸೇರಿದರೆ ಯಾವುದೇ ಕೆಲಸವಾದರೂ ಅದು ಆದಂತೆಯೇ ಸರಿ. ನಮ್ಮ ಸುತ್ತಮುತ್ತಲಿನ ವಾತಾವರಣದ ಸ್ವಚ್ಛತೆಯ ಬಗ್ಗೆ ನಾವೇ ಸಾಮೂಹಿಕವಾಗಿ ಕಾರ್ಯಪ್ರವೃತ್ತರಾಗಬೇಕು ಎಂಬುದು ಇಲ್ಲಿನ ಆಶಯವಾಗಿದೆ.

ಅ. ಅರ್ಥ ತಿಳಿ

ಎಡವು–ಮುಗ್ಗರಿಸು. ಒಸರು–ಜಿನುಗು. ಕೋರು – ಬೇಡು, ಕೇಳಿಕೊಳ್ಳು. ತೂರಿ – ಪ್ರವೇಶಿಸಿ, ಒಳಹೋಗಿ. ಕೊಚ್ಚೆ–ಕೆಸರು, ರಾಡಿ. ಗಾಬರಿ – ಹೆದರಿಕೆ, ಅಳುಕು. ಪರಿಣಾಮ–ಕಾರ್ಯದ ಫಲ, ಫಲಿತಾಂಶ. ಹರಟೆ–ವ್ಯರ್ಥಭಾವ, ಸರಸ ಸಲ್ಲಾಪ. ಗುಂಪು–ರಾಶಿ, ಸಮೂಹ. ಛಲ – ಹಟ, ದೃಢ ನಿಶ್ಚಯ. ಸಂಘ – ಸಂಸ್ಥೆ, ಜನಗಳ ಒಕ್ಕೂಟ. ಉತ್ಸಾಹ–ಉಲ್ಲಾಸ. ಹುರುಪು. ಸಿದ್ಧ–ಅಣಿಯಾದ, ತಯಾರಾದ. ಜವಾಬ್ದಾರಿ – ಹೊಣೆಗಾರಿಕೆ. ಚರಂಡಿ–ಗಟಾರ, ಮೋರಿ. ಸೂಚನೆ–ತಿಳಿಸುವಿಕೆ, ಸೂಚಿಸುವಿಕೆ. ಪಾಲಿಸು–ಅನುಸರಿಸು, ನಿಯಮಗಳನ್ನು ನಡೆಸು. ಬೆರಗಾಗು–ಅಚ್ಚರಿಪಡು, ಆಶ್ಚರ್ಯಪಡು. ಶುಭ್ರ – ಸ್ವಚ್ಛವಾದ, ನಿರ್ಮಲವಾದ. ತವಕ–ತಳಮಳ, ಆತುರತೆ.

ಆ. ವಿವರ ತಿಳಿ

ಹಿಂಡಿಕೊಳ್ಳು	: ರಸ ಒಸರುವಂತೆ ಗಟ್ಟಿಯಾಗಿ ಅದುಮು.
ಕಂಟಿ	: ಕುರುಚಲು ಸಸ್ಯಗಳ ಪೊದೆ, ಮುಳ್ಳು.
ಕಲ್ಲಾಟ	: ಸಣ್ಣ, ಸಣ್ಣ ಕಲ್ಲುಗಳನ್ನು ಬಳಸಿ ಆಡುವ ಆಟ. ಆಣೆಕಲ್ಲು ಆಟ.
ಮಾತಿಗೆ ಮಾತುಬೆಳೆಸು	: ಮಾತು ಪ್ರತಿಮಾತುಗಳಿಂದ ಜಗಳವುಂಟಾಗು.
ಜಾಗ ಖಾಲಿಮಾಡು	: ಇರುವ ಸ್ಥಳದಿಂದ ಹೊರಟು ಹೋಗು.



ಸನ್ನೆ : ಸ್ವಲ್ಪ ಶಕ್ತಿಯಿಂದ ಹೆಚ್ಚು ಭಾರವೆತ್ತುವ ಸಾಧನ.

ಬಿಸಿಲು ಮೇಲೇರು : ವೇಳೆ ಹೆಚ್ಚು ಹೆಚ್ಚು ಆಗು, ಸಮಯವಾಗು.

ಮೂಗಿನ ಮೇಲೆ ಬೆರಳಿಡು : ಅತಿಯಾದ ಆಶ್ಚರ್ಯವನ್ನು ವ್ಯಕ್ತಪಡಿಸು

ಇ. ಕೆಳಗಿನ ಪ್ರಶ್ನೆಗಳಿಗೆ ಉತ್ತರ ಹೇಳಿರಿ.

೧. ಗುಂಡನ ಅಂಗಿ ಏಕೆ ಹರಿಯಿತು?

೨. ಯಾರ ಮಾತಿನಿಂದ ಮಕ್ಕಳಲ್ಲಿ ಛಲ ಹುಟ್ಟಿತು?

೩. ಎರಡನೆಯ ಗುಂಪಿಗೆ ಅರುಣ ಯಾವ ಕೆಲಸವನ್ನು ಹೇಳಿದನು?

೪. ಹುಡುಗರ ಕೆಲಸ ನೋಡಿ ಯಾರು ಬೆರಗಾದರು?

೫. ಸ್ವಚ್ಛಗೊಂಡ ಬಯಲು ಹೇಗೆ ಕಾಣುತ್ತಿತ್ತು?

ವ್ಯಾಕರಣ ಮಾಹಿತಿ

ಅ. ಕನ್ನಡ ಸಂಧಿಗಳು.

ಲೋಪಸಂಧಿ:

೧) ಮೇಲೆ + ಇಟ್ಟು = ಮೇಲಿಟ್ಟು

–ಮೇಲಿನ ಸಂಧಿಕಾರ್ಯವನ್ನು ಗಮನಿಸಿರಿ. ಮೇಲೆ ಎಂಬ ಪೂರ್ವಪದದಲ್ಲಿಯ ಕೊನೆಯ ಸ್ವರ 'ಎ' ಎಂಬುದು ಇಲ್ಲಿ ಲೋಪವಾಗಿದೆ.

೨) ಮುಳ್ಳು + ಅನ್ನು = ಮುಳ್ಳನ್ನು

ಇಲ್ಲಿ ಮುಳ್ಳು ಎಂಬ ಪೂರ್ವಪದದಲ್ಲಿಯ ಕೊನೆಯ ಸ್ವರ 'ಉ' ಎಂಬುದು ಲೋಪವಾಗಿದೆ. ಹೀಗೆ ಸ್ವರದ ಮುಂದೆ ಸ್ವರವು ಬಂದು ಸಂಧಿಯಾಗುವಾಗ ಪೂರ್ವಪದದಲ್ಲಿಯ ಕೊನೆಯ ಸ್ವರವು ಲೋಪವಾದರೆ ಇದನ್ನು ಲೋಪಸಂಧಿ ಎನ್ನುವರು.

ಇದರಂತೆ ಇನ್ನು ಕೆಲವು ಉದಾಹರಣೆಗಳನ್ನು ಗಮನಿಸೋಣ :

ಒಸರುತ್ತ	+	ಇದ್ದ	=	ಒಸರುತ್ತಿದ್ದ	: ಅ ಸ್ವರ ಲೋಪವಾಗಿದೆ.
ಹುಡುಗರು	+	ಎಲ್ಲರು	=	ಹುಡುಗರೆಲ್ಲರು	: ಉ ಸ್ವರ ಲೋಪವಾಗಿದೆ.
ಮೇಲೆ	+	ಏರು	=	ಮೇಲೇರು	: ಎ ಸ್ವರ ಲೋಪವಾಗಿದೆ.



ಆಗಮ ಸಂಧಿ

೧)ಹೊಲ + ಅನ್ನು = ಹೊಲವನ್ನು

ಮೇಲಿನ ಸಂಧಿಕಾರ್ಯವನ್ನು ಗಮನಿಸಿರಿ. ಹೊಲವನ್ನು ಎಂಬ ಪದದಲ್ಲಿ 'ವ' ಎಂಬ ಅಕ್ಷರವು ಬಂದು ಸೇರಿಕೊಂಡಿದೆ.

೨) ಹೊಳೆ+ಅಲ್ಲಿ = ಹೊಳೆಯಲ್ಲಿ

ಇಲ್ಲಿ 'ಹೊಳೆಯಲ್ಲಿ' ಎಂಬ ಪದದಲ್ಲಿ 'ಯ'ಎಂಬ ಅಕ್ಷರವು ಬಂದು ಸೇರಿಕೊಂಡಿದೆ.

ಹೀಗೆ ಸ್ವರದ ಮುಂದೆ ಸ್ವರವು ಬಂದು ಸಂಧಿಯಾಗುವಾಗ ಒಂದು ಅಕ್ಷರ ಆಗಮವಾದರೆ ಅದನ್ನು ಆಗಮಸಂಧಿ ಎನ್ನುವರು. ಸಾಮಾನ್ಯವಾಗಿ 'ವ'(ವ್+ಅ) ಇಲ್ಲವೇ 'ಯ' (ಯ್+ಅ) ಅಕ್ಷರಗಳು ಆಗಮವಾಗಿ ಬರುತ್ತವೆ.

ಈ ರೀತಿಯಾದ ಇನ್ನು ಕೆಲವು ಉದಾಹರಣೆಗಳನ್ನು ಗಮನಿಸೋಣ :

ಗಡಿಬಿಡಿ + ಇಂದ = ಗಡಿಬಿಡಿಯಿಂದ : ಯ ಆಗಮವಾಗಿದೆ

ಆರಂಭ + ಆಗು = ಆರಂಭವಾಗು : ವ ಆಗಮವಾಗಿದೆ.

ಆದೇಶ ಸಂಧಿ

೧.ಕೋಪ +ಕೊಂಡು=ಕೋಪಗೊಂಡು

ಮೇಲಿನ ಸಂಧಿ ಕಾರ್ಯವನ್ನು ಗಮನಿಸಿರಿ. ಕೋಪಗೊಂಡು ಎಂಬ ಪದದಲ್ಲಿ ಕ (ಕೊ) ಅಕ್ಷರದ ಬದಲಿಗೆ ಗ (ಗೊ) ಅಕ್ಷರ ಬಂದಿದೆ.

೨. ಮೈ + ತೊಳೆ = ಮೈದೊಳೆ

ಇಲ್ಲಿ ಮೈದೊಳೆ ಎಂಬ ಪದದಲ್ಲಿ 'ತ' (ತೊ) ಅಕ್ಷರದ ಬದಲಿಗೆ 'ದ' (ದೊ) ಅಕ್ಷರ ಬಂದಿದೆ.

ಹೀಗೆ ಸಂಧಿಯಾಗುವಾಗ ಒಂದು ಅಕ್ಷರದ ಸ್ಥಾನದಲ್ಲಿ ಬೇರೊಂದು ಅಕ್ಷರ ಬಂದರೆ ಅದನ್ನು ಆದೇಶ ಸಂಧಿ ಎನ್ನುವರು. ಇಲ್ಲಿ ಉತ್ತರ ಪದದ ಮೊದಲನೆಯ ಅಕ್ಷರವು ಬದಲಾಗುತ್ತದೆ. ಸಾಮಾನ್ಯವಾಗಿ ಕ,ತ,ಪ ಗಳಿಗೆ ಕ್ರಮವಾಗಿ ಗ,ದ,ಬ ಗಳು ಆದೇಶವಾಗಿ ಬರುತ್ತವೆ.

ಈ ರೀತಿಯಾದ ಇನ್ನು ಕೆಲವು ಉದಾಹರಣೆಗಳನ್ನು ಗಮನಿಸೋಣ :

ಕುಡು + ಕೋಲು = ಕುಡುಗೋಲು : 'ಕ'ದ ಬದಲು 'ಗ' ಆದೇಶವಾಗಿದೆ.

ಬೆಟ್ಟ + ತಾವರೆ = ಬೆಟ್ಟದಾವರೆ : 'ತ'ದ ಬದಲು'ದ' ಆದೇಶವಾಗಿದೆ.

ಕಣ್ + ಪನಿ = ಕಂಬನಿ : 'ಪ'ದ ಬದಲು 'ಬ'ಆದೇಶವಾಗಿದೆ.



ಕನ್ನಡ ಪದಗಳು ಪರಸ್ಪರ ಸೇರಿ ಸಂಧಿಕಾರ್ಯ ನಡೆದಿದೆ. ಆದ್ದರಿಂದ ಇವುಗಳನ್ನು 'ಕನ್ನಡ ಸಂಧಿ' ಎಂದು ಕರೆಯುತ್ತೇವೆ.

ಇದುವರೆಗೆ ನಾವು ಮೂರು ರೀತಿಯ ಸಂಧಿಕಾರ್ಯಗಳನ್ನು ಗಮನಿಸಿದ್ದೇವೆ.

ಕನ್ನಡ ಸಂಧಿಗಳು

೧ ಲೋಪಸಂಧಿ

೨ ಆಗಮಸಂಧಿ

೩ ಆದೇಶಸಂಧಿ

ಆ. ಓದಿಗೆ ಮನ್ನಣೆ

೧. ಮಕ್ಕಳ ಸಾಹಸ ಕಥೆಗಳ ಓದಿರಿ.
೨. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಕ್ಕಳ ಕುರಿತು ತಿಳಿಯಿರಿ.
೩. ಉತ್ತಮ ಸಾಧನೆ ಮಾಡಿದ ವ್ಯಕ್ತಿಗಳಿಂದ ಅವರ ಅನುಭವಗಳನ್ನು ಕೇಳಿ ತಿಳಿಯಿರಿ.
೪. ಸಹಕಾರ ಸಂಘಗಳ ಉದ್ದೇಶಗಳನ್ನು ಸಂಗ್ರಹಿಸಿ ಓದಿರಿ.

ಇ. ಶುಭ ನುಡಿ

೧. ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ.
೨. ನೂರಾರು ಕೈಗಳಿಂದ ಮಹತ್ಕಾರ್ಯಗಳಾಗುತ್ತವೆ.
೩. ನಾಯಕತ್ವ ಗುಣಗಳನ್ನು ಪಾಲಿಸು, ನಾಯಕನಾಗಿ ಬೆಳೆಯುವೆ.
೪. ದೃಢ ಸಂಕಲ್ಪದಿಂದ ಕೂಡಿದ ಸಾಧನೆಗೆ ಜಯ ನಿಶ್ಚಿತ.

ಪೂರಕ ಪಾಠ : ರಾಜ, ಮಂತ್ರಿ, ಸೇವಕ

ಹಳೆಯ ದಿನಪತ್ರಿಕೆಯನ್ನು ತೆಗೆದುಕೊಳ್ಳಿರಿ. ಅದನ್ನು ಹರಿದು ಸಣ್ಣ ಸಣ್ಣ ಚೂರುಗಳನ್ನು ಮಾಡಿಕೊಳ್ಳಿರಿ. ಕಾಗದದ ಚೂರುಗಳಿಂದ ಸಣ್ಣ-ಸಣ್ಣ ಚೆಂಡುಗಳನ್ನು ತಯಾರಿಸಿಕೊಳ್ಳಿರಿ. ಒಟ್ಟು ೧೦ ಚೆಂಡುಗಳಿರಲಿ.

ಮೂರು-ಮೂರು ವಿದ್ಯಾರ್ಥಿಗಳ ಗುಂಪನ್ನು ಮಾಡಿಕೊಳ್ಳಿರಿ. ನೆಲದ ಮೇಲೆ ಒಂದು ಅಡಿ ತ್ರಿಜ್ಯದಷ್ಟು ವೃತ್ತವನ್ನು ಎಳೆಯಿರಿ. ಆ ವೃತ್ತದ ಒಂದು ಬದಿಗೆ ಅರ್ಧ ಅಡಿ ತ್ರಿಜ್ಯದಷ್ಟು ಎರಡು ವೃತ್ತಗಳನ್ನು ಹಾಕಿರಿ. ಈ ಎರಡು ವೃತ್ತಗಳು ಒಂದರ ಪಕ್ಕ ಒಂದಿರಲಿ . ಇವುಗಳಲ್ಲಿ ಒಂದರಲ್ಲಿ ಮಂತ್ರಿ, ಇನ್ನೊಂದರಲ್ಲಿ ಸೇವಕ ಎಂದು ಬರೆಯಿರಿ. ಇವೆರಡು ವೃತ್ತಗಳ ಎದುರು ಅಷ್ಟೇ ದೊಡ್ಡದಾದ ಇನ್ನೊಂದು ವೃತ್ತವನ್ನು ಹಾಕಿರಿ. ಅದರಲ್ಲಿ ರಾಜ ಎಂದು ಬರೆಯಿರಿ. ದೊಡ್ಡ ವೃತ್ತದ ಇನ್ನೊಂದು ಬದಿಯಲ್ಲಿ ಅಡ್ಡಗೆರೆ ಹಾಕಿರಿ (ಚಿತ್ರವನ್ನು ಗಮನಿಸಿರಿ.)

ಕಪ್ಪು ಹಲಗೆಯಲ್ಲಿ ಅಥವಾ ನೋಟ್ ಪುಸ್ತಕದಲ್ಲಿ ಅಂಕಗಳ ದಾಖಲೆಯ ವಿವರದ ಕೋಷ್ಟಕವನ್ನು ಬರೆದುಕೊಳ್ಳಿರಿ (ಮಾದರಿ ಕೋಷ್ಟಕವನ್ನು ಗಮನಿಸಿರಿ)

ಕಾಗದದಿಂದ ತಯಾರಿಸಿದ ೧೦ ಚೆಂಡುಗಳನ್ನು ದೊಡ್ಡ ವೃತ್ತದ ಮಧ್ಯಭಾಗದಲ್ಲಿ ಹಾಕಿರಿ. ಮೊದಲನೆಯ ಸ್ಪರ್ಧಿಯು ಅಡ್ಡಗೆರೆಯ ಹಿಂಭಾಗದಲ್ಲಿ ಕುಳಿತುಕೊಳ್ಳಲಿ. ಈಗ ಬಾಯಿಯಿಂದ ಚೆಂಡುಗಳನ್ನು ಊದಬೇಕು. ಊದುತ್ತ ಚೆಂಡುಗಳನ್ನು ಸೇವಕ ಅಥವಾ ಮಂತ್ರಿ ಅಥವಾ ರಾಜ ವೃತ್ತಗಳಿಗೆ ಕಳುಹಿಸಬೇಕು. ಊದುವಾಗ ಉಸಿರನ್ನು ನಿಲ್ಲಿಸಬಾರದು. ಈ ರೀತಿ ಊದಲು ಮೂರು ಬಾರಿ ಅವಕಾಶವಿರುತ್ತದೆ. ಅಡ್ಡಗೆರೆಯ ಮುಂದೆ ಹೋಗಿ ಊದುವಂತಿಲ್ಲ. ಅಡ್ಡಗೆರೆಯ ಹಿಂಭಾಗ ಸ್ಥಳ ಬದಲಾಯಿಸಬಹುದು.

ಸಂಬಂಧಿಸಿದ ವೃತ್ತದಲ್ಲಿರುವ ಚೆಂಡುಗಳನ್ನು ಎಣಿಕೆಮಾಡಿ ಕೋಷ್ಟಕದಲ್ಲಿ ಸೂಕ್ತವಾದ ಸ್ಥಾನದಲ್ಲಿ ದಾಖಲಿಸಿರಿ. ವೃತ್ತಗಳ ಹೊರಗಿರುವ ಮತ್ತು ವೃತ್ತಗಳ ಗೆರೆಗೆ ತಾಗಿರುವ ಚೆಂಡುಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳುವಂತಿಲ್ಲ. ಪ್ರತಿ ಚೆಂಡಿಗೆ ಅಂಕಗಳನ್ನು ದಾಖಲಿಸಬೇಕು. ಸೇವಕ ವೃತ್ತದಲ್ಲಿರುವ ಪ್ರತಿ ಚೆಂಡಿಗೆ ೨ ಅಂಕಗಳು. ಮಂತ್ರಿ ವೃತ್ತದಲ್ಲಿರುವ ಪ್ರತಿ ಚೆಂಡಿಗೆ ೩ ಅಂಕಗಳು. ರಾಜ ವೃತ್ತದಲ್ಲಿರುವ ಪ್ರತಿ ಚೆಂಡಿಗೆ ೫ ಅಂಕಗಳು. ಪ್ರತಿ ವೃತ್ತದ ಚೆಂಡುಗಳಿಗನುಗುಣವಾಗಿ ಲೆಕ್ಕ ಹಾಕಿ ಅಂಕಗಳನ್ನು ಕೋಷ್ಟಕದಲ್ಲಿ ದಾಖಲಿಸಿರಿ.

ಹೀಗೆಯೇ ಎರಡನೆಯ, ಮೂರನೆಯ ಸ್ಪರ್ಧಿಗಳು ಆಟ ಆಡಲಿ. ಅವರ ಅಂಕಗಳನ್ನು ಕೋಷ್ಟಕದಲ್ಲಿ ದಾಖಲಿಸಿರಿ . ಪ್ರತಿಯೊಬ್ಬರೂ ಪಡೆದ ಅಂಕಗಳನ್ನು ಕೂಡಿರಿ. ಎಲ್ಲರ ಅಂಕಗಳನ್ನು ಹೋಲಿಕೆ ಮಾಡಿರಿ. ಕಡಿಮೆ ಅಂಕ ಪಡೆದವನು ಸೇವಕ. ಸೇವಕನಿಗಿಂತ ಹೆಚ್ಚು ಅಂಕ ಪಡೆದವನು ಮಂತ್ರಿ. ಇಬ್ಬರಿಗಿಂತಲೂ ಹೆಚ್ಚು ಅಂಕ ಪಡೆದವನು ರಾಜ. ಎಲ್ಲರೂ 'ರಾಜನಿಗೆ ಜೈ' ಎಂದು ಚಪ್ಪಾಳೆತಟ್ಟಿ ನಲಿಯಿರಿ.

ಗಮನಿಸಿರಿ :

೧. ವಿದ್ಯಾರ್ಥಿನಿಯರು ಆಡುವಾಗ ರಾಣಿ, ಮಂತ್ರಿ, ಸೇವಕಿ ಎಂದು ಬದಲಾಯಿಸಿಕೊಳ್ಳಬಹುದು.

೨. ಕಾಗದದ ಚೆಂಡುಗಳ ಬದಲಿಗೆ ಹಗುರವಾದ ವಸ್ತುಗಳು, ರಬ್ಬರ್‌ಚೆಂಡು ಇಲ್ಲವೆ ಪ್ಲಾಸ್ಟಿಕ್ ಚೆಂಡುಗಳನ್ನು ಬಳಸಬಹುದು.

೩. ತರಗತಿಯಲ್ಲಿ ಹೆಚ್ಚು ವಿದ್ಯಾರ್ಥಿಗಳಿದ್ದರೆ ಹೆಚ್ಚು ಹೆಚ್ಚು ಗುಂಪುಗಳನ್ನು ಮಾಡಿಕೊಳ್ಳಿರಿ.

೪. ಒಬ್ಬರಿಗಿಂತ ಹೆಚ್ಚು ಜನರಿಗೆ ಸಮಾನ ಅಂಕಗಳು ಬಂದರೆ ಮತ್ತೊಮ್ಮೆ ಆಡಿಸಬಹುದು.

೫. ಅಗತ್ಯವಿದ್ದಲ್ಲಿ ಶಿಕ್ಷಕರ ಸಲಹೆ ಪಡೆಯಿರಿ.

ವೃತ್ತಗಳ ನಕ್ಷೆ



ಅಂಕಗಳ ದಾಖಲೆಯ ಮಾದರಿ ಕೋಷ್ಟಕ:– **ರಾಜ, ಮಂತ್ರಿ, ಸೇವಕ**

ವೃತ್ತಗಳು	ಸ್ಪರ್ಧೆ–1		ಸ್ಪರ್ಧೆ–2		ಸ್ಪರ್ಧೆ–3	
	ಚೆಂಡುಗಳು	ಅಂಕಗಳು	ಚೆಂಡುಗಳು	ಅಂಕಗಳು	ಚೆಂಡುಗಳು	ಅಂಕಗಳು
ಸೇವಕ						
ಮಂತ್ರಿ						
ರಾಜ						
ಒಟ್ಟು ಅಂಕಗಳು						

ಪ್ರಶ್ನೆಗಳಿಗೆ ಉತ್ತರ ಹೇಳಿರಿ.

1. ಯಾವ ವೃತ್ತದಲ್ಲಿರುವ ಚೆಂಡಿಗೆ ಕಡಿಮೆ ಅಂಕಗಳು?
2. ಕಾಗದದ ಚೂರುಗಳಿಂದ ಏನನ್ನು ತಯಾರಿಸಬೇಕು?
3. ರಾಜ ಎಂದು ಯಾರನ್ನು ಕರೆಯಬೇಕು?
4. ಬಾಲಕಿಯರು ಆಡುವಾಗ ಆಟದ ಹೆಸರನ್ನು ಏನೆಂದು ಬದಲಾಯಿಸಿಕೊಳ್ಳಬಹುದು?
5. ಕಾಗದದ ಚೆಂಡುಗಳ ಸಂಖ್ಯೆ ಎಷ್ಟಿರಬೇಕು?



೭ ನಾನು ಮತ್ತು ಹುಂಚಿಮರ



ನಾನು ದಾರಿಯಲ್ಲಿ ನಡೆದು ಹೋಗುತ್ತಿದ್ದೆ. ನನ್ನ ಬೂಟುಗಳು ಇದ್ದಕ್ಕಿದ್ದಂತೆ ನಿಂತುಹೋದವು. ಮೆಲ್ಲನೆ ಕೆಳಗೆ ನೋಡಿದರೆ... ಆಹಾ... ಹುಂಚಿಹೂವು! ನೆಲದ ತುಂಬಾ ಹಳದಿಯ ಹುಂಚಿಹೂವುಗಳ ರಾಶಿರಾಶಿ. ಚಿಕ್ಕವನಿದ್ದಾಗ ನನಗೊಂದು ವಿಚಿತ್ರ ಹವ್ಯಾಸವಿತ್ತು. ಅದೆಂದರೆ ಹುಂಚಿಹೂವು ತಿನ್ನುವುದು! ಎಳೆಯ ಹಲ್ಲುಗಳಿಂದ ಹುಂಚಿಹೂವುಗಳನ್ನು ಬಕಬಕ ತಿನ್ನುವ ಬಕಪಕ್ಷಿ ನಾನಾಗಿದ್ದೆ. ಜುಮ್ಮೆಂದಾಗಲೇ ಹಲ್ಲು ಚಳಿತದ್ದು ಗೊತ್ತಾಗುತ್ತಿತ್ತು.

ನನ್ನ ಬಾಯಲ್ಲಿ ನೀರೂರಿತು. ಮೆಲ್ಲನೆ ಬಗ್ಗಿ, ಐದಾರು ಹುಂಚಿಹೂವುಗಳನ್ನು ಆರಿಸಿಕೊಂಡು ತಿನ್ನುವಾಸೆ ಮೂಡಿತು. ಆದರೆ... ನಾನೀಗ ಪುಟ್ಟ ಹುಡುಗನಲ್ಲ... ದೊಡ್ಡವ... ದೊಡ್ಡ ಪಗಾರದವ.... ಪ್ಯಾಂಟು ಬೂಟು... ಇಂಥ ಕಾಲದಲ್ಲಿ... ಅದೂ ರಸ್ತೆಯಲ್ಲಿ ನಿಂತು... ನಾನು ಹುಂಚಿಹೂವು ಆರಿಸಿದರೆ ಜನ ಏನೆಂದಾರು? ಅದನ್ನು ಅಲ್ಲೇ ಬಿಟ್ಟೆ.

ಬೂಟು ಖಟ್ ಖಟ್ ಊರುತ್ತಾ ಮುಂದೆ ಸಾಗಿಬಿಟ್ಟೆ.

ಮುಂದೆ ಒಂದು ವಾರದ ಅನಂತರ ಅದೇ ಹುಣಿಸೆ ಮರದ ಕೆಳಗಿನಿಂದ ಹೋಗುವಾಗ ಸ್ವಲ್ಪ ಬಲಿತ



ಎಳನಾಗರಕಾಯಿಗಳು ಕಂಡವು. ಕೆಲವು ಹುಡುಗರು ಹುಂಚಿಮರಕ್ಕೆ ಕಲ್ಲು ಎಸೆದು, ನಾಗರಕಾಯಿ ಬೀಳಿಸಿ ತಿನ್ನುತ್ತಿದ್ದರು. ನನ್ನ ಬಾಯಲ್ಲಿ ಹಂಡೆ ನೀರು ಛಿಲ್ಲೆಂದು ಚಿಮ್ಮಿತು. ಆ ಹುಡುಗರಿಗೆ ಜಬರಿಸುವ ನೆಪದಲ್ಲಿ ನಿಂತು ಅವರಿಗೆಂದೆ, "ಲೇ.......ಲೇ........ಕಲ್ಲು ಹೊಡೀಬ್ಯಾಡ್ರಿ.....! ಯಾರ ತಲೆ ಒಡೀಬೇಕಂತ ಮಾಡಿದ್ದೀರಿ?"

ನನ್ನ ಗದರಿಕೆಗೆ ಆ ಹುಡುಗರು ಅಂಜಿ ದಿಕ್ಕಾಪಾಲಾಗಿ ಓಡಿಬಿಟ್ಟರು. 'ಅಯ್ಯಯ್ಯೋ' ಅಂದೆ! ಅವರು ತೂರಿದ ಕಲ್ಲು ನೇರವಾಗಿ ನನ್ನ ತಲೆಗೆ ಬಡಿದಿದ್ದರೂ ನಾನು ಬೇಡ ಅನ್ನುತ್ತಿರಲಿಲ್ಲ. ಅಷ್ಟು ಪ್ರೀತಿ ನನಗೆ ಹುಂಚಿಕಾಯಿಯ ಮೇಲೆ.

ಸ್ವಲ್ಪ ದಿನಗಳ ಅನಂತರ ಅದೇ ಮರದ ದಾರಿಗೆ ಬಂದೆ. ಅಬ್ಬಾ......! ಇನ್ನೂ ಒಂದು ವಿಚಿತ್ರ ಕಂಡೆ! ಹುಂಚಿಗಿಡದ ಇಳಿಬಿದ್ದ ಉದ್ದ ಟೊಂಗೆಗಳನ್ನು ಹಿಡಿದು ಕೆಲವು ಹುಡುಗಿಯರು ಜೋಕಾಲಿ ಜೀಕುತ್ತಿದ್ದರು. ಒಂದು ಕ್ಷಣ ನಿಂತೆ, ಹೌದು! ನಾನು ಚಿಕ್ಕವನಿದ್ದಾಗ ಹೀಗೆಯೇ ಜೋಕಾಲಿ ಜೀಕುತ್ತಿದ್ದೆ.

ಎರಡು ಮೂರು ವಾರ ದಾಟಿದವು. ಆ ಹುಂಚಿಮರದ ಬಳಿಗೆ ಬಂದಾಗ ಅಲ್ಲಿ ಹಬ್ಬದ ವಾತಾವರಣ. ಕಾರಣ 'ಡೋರೆ ಹುಣಿಸೆ'. ಅಂದರೆ....... ಇತ್ತ ಕಾಯಿ ಹುಣಿಸೆಯು ಅಲ್ಲ; ಅತ್ತ ಹಣ್ಣು ಹುಣಿಸೆಯು ಅಲ್ಲ ....ಇದರ ಮಧ್ಯದ ಹಂತದ ಹಳದಿ-ಹಸಿರು ಬಣ್ಣದ ಡೋರೆಹುಣಿಸೆ ಹಣ್ಣು. ಒಂದು ವಿಶಿಷ್ಟ ರುಚಿಯ ಹಣ್ಣು. ಈ ಹಣ್ಣಿನ ಅದ್ಭುತ ರುಚಿಯು ಆಪೂಸ್ ಮಾವಿನ ಹಣ್ಣಿನ ರುಚಿಗಿಂತ ಮೇಲು!

ಮತ್ತೊಂದು ವಾರ ಕಳೆಯಿತು. ಆ ಹುಣಿಸೆಮರದ ಹತ್ತಿರ ಒಂದು ದುಂಡಾದ ಬಂಡೆಗಲ್ಲು ಇತ್ತು. ನಾನು ಸಂಜೆ ಗಾಳಿ ಸೇವಿಸುವ ನೆಪಮಾಡಿಕೊಂಡು ಅಲ್ಲಿ ಹೋಗಿ ಕುಳಿತೆ. ಅಲ್ಲಿ ಮರಕುಟಿಗನ ಹಕ್ಕಿ, ಕಾಗೆ, ಗುಬ್ಬಿ, ಮೈನಾ, ಟಿಟ್ಟಿಭ ಮುಂತಾದ ಪಕ್ಷಿಗಳು ಕಾಣಿಸಿಕೊಂಡವು. ಆ ಹಕ್ಕಿಮಿತ್ರರೊಂದಿಗೆ ಮಾತಾಡಿದೆ. ಅವೆಲ್ಲವೂ ಆ ಹುಣಿಸೆಮರದಲ್ಲಿ ಹಾಡಿ ನಲಿಯುತ್ತಿದ್ದವು.

ಕತ್ತಲೆಯಾಗುತ್ತ ಬಂತು. ತಂಗಾಳಿ ಬೀಸಿತು. ಅಲ್ಲಿಂದ ಎದ್ದೆ. ಹುರಿದ ಹುಂಚಿಕಪ್ಪ ಕುಟುಂಕುಟುಂ ಎಂದು ತಿಂದದ್ದು ನೆನಪಾಯಿತು. ಹುಂಚಿಹಣ್ಣಿನ ಜೊತೆಗೆ ಉಪ್ಪು, ಜೀರಿಗೆ-ಬೆಲ್ಲ ಬೆರೆಸಿ ಕುಟ್ಟಿ ಉಂಡೆಮಾಡಿ ಕಡ್ಡಿಗೆ ಸಿಕ್ಕಿಸಿ ಜುರುಜುರು ಸೀಪಿದ ನೆನಪು ಮರುಕಳಿಸಿತು. ಹೀಗೆ ಹುಂಚಿಮರದೊಂದಿಗಿನ ನನ್ನ ಸಂಬಂಧ ಎಂದೆಂದಿಗೂ ಮರೆಯಲಾರದ್ದು.

ಮತ್ತೆ ಹಲವಾರು ವಾರಗಳು ಕಳೆದ ಮೇಲೆ ನಾನು ಅದೇ ದಾರಿಯಲ್ಲಿ ಹೊರಟಿದ್ದೆ. ಆ ದೊಡ್ಡ ಹುಣಿಸೆಮರವಿದ್ದ ಸ್ಥಳಕ್ಕೆ ನಾನು ಬಂದಾಗ... ಸುತ್ತಲೂ ನೋಡಿದೆ... ಆ ಮರವೇ ಕಾಣೆಯಾಗಿತ್ತು! ಆ ಮರದ ಸಾವಿರಾರು ಟೊಂಗೆಗಳ ಜಾಗದಲ್ಲಿ ಬರಿಯ ಬೋಳು ಮುಗಿಲು ಮಾತ್ರ ಕಾಣಿಸುತ್ತಿತ್ತು!

ಎದೆ ಜೋರಾಗಿ ಬಡಿದುಕೊಂಡಿತು. ಅಲ್ಲಿ ಆಟ ಆಡುತ್ತಿದ್ದ ಒಬ್ಬ ಹುಡುಗನನ್ನು ಕರೆದು ಕೇಳಿದೆ: "ಏ ತಮ್ಮ....ಇಲ್ಲಿ ಹುಂಚಿ ಮರ ಇತ್ತಲ್ಲ.. ಏನಾಯ್ತು? ಆತ ಸಪ್ಪೆ ಮುಖ ಮಾಡಿಕೊಂಡು ಹೇಳಿದ-



"ಕಡಿದರು..ಕಡಿದುಬಿಟ್ಟರು..."

"ಆಂ..... ಆಂ....... ಕಡಿದರೆ? ಯಾಕೆ? ಯಾಕೆ?" ಒಂದೇ ಉಸಿರಿನಲ್ಲಿ ಕೇಳಿದೆ.

"ಹುಂಚಿಮರದಲ್ಲಿ ದೆವ್ವಗೋಳು ಇರುತ್ತಾವಂತೆ. ಇದರಲ್ಲಿ ದೆವ್ವ ವಾಸಮಾಡ್ತಿತ್ತಂತೆ, ಅದಕ್ಕೆ ಕಡಿದುಬಿಟ್ರು ಸಾವ್ಕಾರ್ರು....."

ಆ ಹುಡುಗ ಆಕಾಶವನ್ನು ನೋಡುತ್ತ ಕಂಗಾಲಾಗಿ ನಿಂತುಬಿಟ್ಟನು.

ಮೇಲೆ ಬಿಸಿಲು..   ಕೆಳಗೆ ಬೋಳು ನೆಲ..

ಅಷ್ಟು ಕಾಲ ನಾನು ಪ್ರೀತಿಸುತ್ತಿದ್ದ ಹುಣಿಸೆಮರ ಅಂದು ಕಾಣದಾಗಿತ್ತು. ಮೂಢನಂಬಿಕೆಗೆ ಬಲಿಯಾಗಿತ್ತು. ಎಲ್ಲೋ ದೂರದಿಂದ ಅದೇ ಹುಣಿಸೆಮರ ಕೂಗಿಕೊಂಡಂತೆ ಭಾಸವಾಯಿತು.

"ಮನುಷ್ಯರು ಯಾಕೆ ಹೀಗೆ ಮಾಡುತ್ತಾರೆ?"





ಕ್ಷೇತ್ರ : ಬರೆಯುವುದು.
ಸಾಮರ್ಥ್ಯ : ಉಕ್ತಲೇಖನದ ಮೂಲಕ ಸೂಕ್ತ ಲೇಖನ ಚಿಹ್ನೆಗಳನ್ನು ಬಳಸಿ, ವಾಕ್ಯಗಳನ್ನು ಬರೆಯುವುದು.

ಆಶಯ

ಅನೇಕ ಬಗೆಯ ಮೂಢನಂಬಿಕೆಗಳು ನಮ್ಮ ನಡುವೆ ಬೀಡುಬಿಟ್ಟಿವೆ. ಆ ನಿಮಿತ್ತವಾಗಿ ನಾವು ಮಾಡಬಾರದ ಕೆಲಸಗಳನ್ನು ಮಾಡುತ್ತೇವೆ. ಪರಿಸರ ನಾಶ ಮಾಡುತ್ತೇವೆ. ಯಾವುದೇ ವೈಜ್ಞಾನಿಕ ಸತ್ಯವನ್ನು ಕಂಡುಕೊಳ್ಳಲು ಪ್ರಯತ್ನಿಸುವುದಿಲ್ಲ. ಯಾರೋ ಹೇಳಿದ ಯಾವುದೋ ಮಾತಿಗೆ ಏನೋ ಅರ್ಥ ಕಲ್ಪಿಸುವ ಜನರಿಂದ ಎಂಥೆಂಥ ಅನಾಹುತಗಳು ಆಗಿಬಿಡುತ್ತವೆ ಎಂಬುದನ್ನು ಕುರಿತು ಎಚ್ಚರಿಕೆ ನೀಡುವುದು ಪ್ರಸ್ತುತ ಪಾಠದ ಆಶಯ.

ಲೇಖಕರ ಪರಿಚಯ



ಶ್ರೀ ಗುರುಸಿದ್ಧಯ್ಯ ಹುಚ್ಚಯ್ಯ ಹನ್ನೆರಡುಮಠರವರು ೧೯೪೦ ಮಾರ್ಚ್ ೧೩ ರಂದು ಹುಬ್ಬಳ್ಳಿಯಲ್ಲಿ ಜನಿಸಿದರು. ತಂದೆ ಹುಚ್ಚಯ್ಯ, ತಾಯಿ ಅನ್ನಪೂರ್ಣಮ್ಮ. ೧೯೬೩ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಎಮ್.ಎ. ಪದವಿ ಪಡೆದರು. ಇಲಕಲ್ಲಿನ ಶ್ರೀ ವಿಜಯ ಮಹಾಂತೇಶ್ವರ ಕಲೆ, ವಿಜ್ಞಾನ ಹಾಗು ವಾಣಿಜ್ಯ ಮಹಾವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸಿದ್ದರು.

ಕವನ, ಕಥೆ, ನಾಟಕ, ಕಾದಂಬರಿ, ವಿಡಂಬನೆ, ವಿನೋದ, ಸಂಪಾದನೆ, ವ್ಯಕ್ತಿ ಚಿತ್ರಣ ಇತ್ಯಾದಿ ೮೦ ಪುಸ್ತಕಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಸೋಮ ಸಾಕ್ಷಾತ್ಕಾರ, ಪಂಚಾರತಿ, ಮಹಾತಪಸ್ವಿ, ಬಂಡೆದ್ದ ಬಾರಕೋಲು, ಹೋಳಿ, ಮುಂತಾದ ಕೃತಿಗಳು ಸೇರಿವೆ.

ಮಹಾತಪಸ್ವಿ, ಹೋಳಿ ಮುಂತಾದ ಕೃತಿಗಳು ಚಲನಚಿತ್ರಗಳಾಗಿ ಪ್ರಸಿದ್ಧಿ ಪಡೆದಿವೆ. ಪ್ರಸ್ತುತ ಕಥೆಯನ್ನು 'ಕನಕಾಂಬರಿಯೊಂದಿಗೆ ಕಂಪಿನ ಪಯಣ' ಎಂಬ ಸಣ್ಣ ಕಥೆಗಳ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.

ಅ. ಅರ್ಥ ತಿಳಿ

ಹುಂಚಿಮರ–ಹುಣಿಸೆಮರ. ಜಬರಿಸು–ಹೆದರಿಸು, ಗದರಿಸು. ಅದ್ಭುತ–ಅತ್ಯಾಶ್ಚರ್ಯಕರ. ಸಂಭ್ರಮ–ಸಡಗರ, ಅದ್ದೂರಿತನ. ಕಾಣೆಯಾಗು–ಇಲ್ಲದಂತಾಗು, ಕಾಣದೆ ಇರುವುದು. ಕಂಗಾಲಾಗು–ಗಾಬರಿಗೊಳ್ಳು, ಏನೂ ತೋಚದಂತಾಗು. ಭಾಸವಾಗು–ತೋರು, ಅನಿಸು.



ಆ. ವಿವರ ತಿಳಿ

ಎಳನಾಗರಕಾಯಿ : ಹುಣಿಸೆ ಹೂವುಗಳು ಚಿಕ್ಕ ಚಿಕ್ಕ ಹುಣಿಸೆಕಾಯಿಗಳಾಗುವುದು.

ಡೋರೆಹುಣಿಸೆ : ಕಾಯಿ ಹಾಗು ಹಣ್ಣಿನ ಮಧ್ಯದ ಹುಣಿಸೆಕಾಯಿ.

ಚಳಿತದ್ದು : ಹುಣಿಸೆಹುಳಿ ತಿಂದಾಗ ಹಲ್ಲು ಜುಮುಗುಡುವುದು. ವಿಪರೀತ ಚಳಿ ಅನುಭವಕ್ಕೆ ಬರುವುದು.

ಹುಂಚಿಕಪ್ಪ : ಹುಣಿಸೆ ಒಣಗಿದ ಅನಂತರ ಅದರಲ್ಲಿರುವ ಕಪ್ಪು ಬಣ್ಣದ ಬೀಜ. ಹುಂಚಿಕಪ್ಪಗಳನ್ನು ಒಲೆಯಲ್ಲಿ ಹುರಿದು ಮೇಲಿನ ಸಿಪ್ಪೆ ಬಿಚ್ಚಿ ತಿನ್ನುವರು.

ಇ. ಕೆಳಗಿನ ಪ್ರಶ್ನೆಗಳಿಗೆ ಉತ್ತರ ಹೇಳಿರಿ.

೧. ಹುಂಚಿಹೂವು ತಿನ್ನುವುದರಿಂದ ಹಲ್ಲುಗಳು ಏನಾಗುತ್ತವೆ?

೨. ಡೋರೆಹುಣಿಸೆ ಎಂದರೇನು?

೩. ಹುಂಚಿಮರದ ಟೊಂಗೆಗಳನ್ನು ಹಿಡಿದು ಹುಡುಗಿಯರು ಏನು ಮಾಡುತ್ತಿದ್ದರು?

೪. ಹುಂಚಿಮರದ ಬಳಿಯಲ್ಲಿ ಹಬ್ಬದ ವಾತಾವರಣವಿರಲು ಯಾರು ಕಾರಣವಾದರು?

೫. ಮೂಢನಂಬಿಕೆಗೆ ಯಾವುದು ಬಲಿಯಾಗಿತ್ತು?



ವ್ಯಾಕರಣ ಮಾಹಿತಿ

ಅ. ಲೇಖನ ಚಿಹ್ನೆಗಳು

ನಾವು ಬರೆದ ವಿಚಾರಗಳು ಓದುಗರಿಗೆ ಸ್ಪಷ್ಟವಾಗಿ ಅರ್ಥವಾಗಲೆಂದು ಅಲ್ಲಲ್ಲಿ ಉಪಯೋಗಿಸುವ ಚಿಹ್ನೆಗಳಿಗೆ ಲೇಖನ ಚಿಹ್ನೆಗಳೆಂದು ಕರೆಯುವರು.

ಲೇಖನ ಚಿಹ್ನೆಗಳು

೧. ಪೂರ್ಣ ವಿರಾಮ ಚಿಹ್ನೆ	(.)
೨. ಅರ್ಧ ವಿರಾಮ ಚಿಹ್ನೆ	(;)
೩. ಅಲ್ಪ ವಿರಾಮ ಚಿಹ್ನೆ	(,)
೪. ಪ್ರಶ್ನಾರ್ಥಕ ಚಿಹ್ನೆ	(?)
೫. ಭಾವಸೂಚಕ ಚಿಹ್ನೆ	(!)
೬. ಉದ್ಧರಣ ಚಿಹ್ನೆ	(" ") (' ')
೭. ವಿವರಣ ಚಿಹ್ನೆ	(:/:–)
೮. ಆವರಣ ಚಿಹ್ನೆ	( )
೯. ಸಮಾನಾರ್ಥಕ ಚಿಹ್ನೆ	(=)

ಆ. ಓದಿಗೆ ಮನ್ನಣೆ

೧. ಅರಣ್ಯ ಸಂರಕ್ಷಣೆಗೆ ಸಂಬಂಧಪಟ್ಟ ವಿವರಗಳನ್ನು ಸಂಗ್ರಹಿಸಿರಿ.

೨. ಮೂಢನಂಬಿಕೆಗಳೆಂದರೇನು ಎಂಬುದನ್ನು ಹಿರಿಯರಿಂದ ಕೇಳಿ ತಿಳಿಯಿರಿ.

ಇ. ಶುಭ ನುಡಿ

೧. ನಂಬಿಕೆಗಳು ಬೇಕು, ಮೂಢನಂಬಿಕೆಗಳಲ್ಲ.

೨. ಮರಗಳಿಗೂ ಮನುಷ್ಯರಂತೆಯೇ ಜೀವವಿದೆ.

೩. ಗಿಡಮರಗಳು ಬೆಳೆಯಲಿ ಜೀವರಾಶಿ ನಲಿಯಲಿ.

ಪೂರಕ ಪಾಠ : ಜೊತೆಯಲ್ಲಿ ಇರುವವರು



ಅದೊಂದು ಊರು, ಊರಿನಲ್ಲೊಂದು ಮನೆ, ಮನೆಯ ಪಕ್ಕದಲ್ಲೊಂದು ಮಾವಿನಮರ. ಆ ಮರವು ಅನೇಕ ವರ್ಷಗಳಿಂದ ಅಲ್ಲಿ ಇತ್ತು. ಪ್ರತಿವರ್ಷವೂ ಹೂ ಬಿಟ್ಟು ಬೇಕಾದಷ್ಟು ಮಾವಿನಕಾಯಿ, ಹಣ್ಣುಗಳನ್ನು ಕೊಡುತ್ತಿತ್ತು. ಆ ಮನೆಯ ಯಜಮಾನನಾದ ಮಾರಪ್ಪನ ಮೂರು ಜನ ಗಂಡುಮಕ್ಕಳಲ್ಲಿ ಮೊದಲನೆಯವ ಕೀರ್ತಿಪಾಲ, ಎರಡನೆಯವ ಧನಪಾಲ. ಇಬ್ಬರೂ ಕೀರ್ತಿ ಹಾಗೂ ಸಂಪತ್ತನ್ನು ಹುಡುಕಿ ಬೇರೆ ರಾಜ್ಯಗಳಿಗೆ ಹೊರಟು ಹೋದರು.

ಮೂರನೆಯವನಾದ ಗೋಪಾಲನು ಮಾತ್ರ ಎಲ್ಲರೂ ದೂರಹೋದರೆ ಅಪ್ಪ ಅಮ್ಮನನ್ನು ನೋಡಿಕೊಳ್ಳುವವರು ಯಾರು....? ಎಂದುಕೊಂಡು ಊರಲ್ಲೇ ಉಳಿದನು.

ಹತ್ತಾರು ವರ್ಷಗಳು ಕಳೆದ ಮೇಲೆ ಕೀರ್ತಿಪಾಲ ಮತ್ತು ಧನಪಾಲ ಊರಿಗೆ ಬಂದರು. ಕೀರ್ತಿಪಾಲ ತುಂಬಾ ಜ್ಞಾನ ಸಂಪಾದಿಸಿದ್ದ. ಧನಪಾಲ ಪಟ್ಟಣದಲ್ಲಿದ್ದು ಹೇರಳ ಹಣ ಸಂಪಾದಿಸಿದ್ದ. ಇಬ್ಬರೂ ಊರಿಗೆ ಬಂದು ತಮ್ಮನನ್ನು ಕುರಿತು, "ಅಪ್ಪ....ಅಮ್ಮನ ಸೇವೆಯನ್ನು ಕೊನೆಗಾಲದಲ್ಲಿ ಮಾಡಿದ ನೀನೇ ಪುಣ್ಯವಂತ. ನಿನ್ನ ಋಣ ನಾವು ತೀರಿಸಬೇಕಾಗಿದೆ" ಎಂದರು.

ಕೀರ್ತಿಪಾಲ ಮತ್ತೊಮ್ಮೆ ಊರುಬಿಟ್ಟು ಹೋಗುವಾಗ ಗೋಪಾಲನಿಗೆ ಪಕ್ಷಿ, ಪ್ರಾಣಿಗಳ ಭಾಷೆಯಾದ 'ಮೂಭಾಷೆ'ಯನ್ನು ಕಲಿಸಿಕೊಟ್ಟು ಹೋದನು. ಧನಪಾಲನು ಬೇಕಾದಷ್ಟು ಹಣವನ್ನು ತಮ್ಮನಿಗೆ ಕೊಟ್ಟು "ಈ ಹಾಳು ಮಾವಿನ ಮರ ಕಡಿದು ಅಲ್ಲಿ ಉಪ್ಪರಿಗೆ ಮನೆ ಕಟ್ಟಿಸು!" ಎಂದು ಹೇಳಿ ಹೊರಟನು.

ಒಂದು ದಿನ ಗೋಪಾಲನು ಸೆಕೆ ಎಂದು ಅಂಗಳದಲ್ಲಿ ಕುಳಿತಿದ್ದ. ಆಗ ಗೂಡುಗಳಿಗೆ ಹಿಂತಿರುಗುತ್ತಿದ್ದ ಹಕ್ಕಿಗಳ ಗುಂಪಿಗೆ ಮಾವಿನ ಮರ ಹೇಳುತ್ತಿತ್ತು:

"ಬಂದಿರಾ ....ಮುದ್ದು ಪಕ್ಷಿಗಳೇ .... ಬನ್ನಿ, ಇನ್ನು ಎಷ್ಟು ದಿನವೋ ನಮ್ಮ ಸ್ನೇಹ!" ಎಂದಿತು. "ಮಾವಜ್ಜ........! ಅದೇಕೆ ಅಷ್ಟು ಬೇಸರ? ....ಏನು ಸುದ್ದಿ........?" ಎಂದಿತು ಒಂದು ಪುಟ್ಟ ಹಕ್ಕಿ.

"ನನ್ನ ಪುಟ್ಟ ಗೆಳೆಯರೇ! ಈ ವರ್ಷ ಬಹಳ ಬೇಗ ಕಾಯಿಗಳನ್ನು ಹಣ್ಣುಗಳನ್ನು ಕೊಡುತ್ತಿದ್ದೇನೆ. ಏಕೆಂದರೆ........ಮುಂದಿನ ವರ್ಷ ....ನಾನು ಇರುವುದಿಲ್ಲ."

"ಹಾಗೆಂದರೆ?.........ಏನು ಮಾವಜ್ಜ ನಿನ್ನ ಮಾತು?"

"ಹೌದಪ್ಪಾ............ಈ ಮನೆಯ ಮಗ ನನ್ನನ್ನು ಕಡಿದು ಹಾಕ್ತಾನಂತೆ........ದೊಡ್ಡ ಮನೆ ಕಟ್ತಾನಂತೆ........ನಾನು ಇಲ್ಲವಾಗುವ ಮೊದಲು ಎಲ್ಲರೂ ಆದಷ್ಟು ಹಣ್ಣು ತಿನ್ನಿರಿ.........ಸುಖವಾಗಿರಿ ಎಂದೇ ನನ್ನ ಆಸೆ."

ಮಾವಜ್ಜನ ಮಾತು ಕೇಳಿ ಹಕ್ಕಿಗಳು ದುಃಖದಿಂದ ಜೋರು ಜೋರಾಗಿ ಕೂಗ ತೊಡಗಿದವು. ಎಲ್ಲವನ್ನು ಅರ್ಥಮಾಡಿಕೊಂಡ ಗೋಪಾಲ ಗಟ್ಟಿಯಾಗಿ ಹೇಳಿದ. "ಇಲ್ಲ ಮಾವಜ್ಜ! ....ನಾನು ನಿನ್ನನ್ನು ಕಡಿಯುವುದೂ ಇಲ್ಲ, ದೊಡ್ಡ ಮನೆ ಕಟ್ಟಿಸುವುದೂ ಇಲ್ಲ. ಈಗಿನಂತೆ ನಾವೆಲ್ಲ ಪ್ರೀತಿಯಿಂದ ಇರೋಣ......ಬೇರೆಯವರಿಗೆ ಸುಖಕೊಟ್ಟರೆ ನಮಗೆ ಸುಖ ಎಂಬ ಮಾತು ಸುಳ್ಳಲ್ಲ ಮಾವಜ್ಜ! ಹಿರಿಯವನಾದ ನಿನ್ನನ್ನು ದೂರ ಮಾಡುವುದುಂಟೆ?" ಎಂದನು.

ಮಾವಿನ ಮರ ತೃಪ್ತಿಯಿಂದ ಗೆಲ್ಲುಗಳನ್ನು ಅಲುಗಾಡಿಸಿತು.

– **ಇಂದಿರಾ ಹಾಲಂಬಿ**

ಪ್ರಶ್ನೆಗಳಿಗೆ ಉತ್ತರ ಹೇಳಿರಿ.

1. ಕೀರ್ತಿಪಾಲ ಏನನ್ನು ಹುಡುಕಿಕೊಂಡು ಹೊರರಾಜ್ಯಕ್ಕೆ ಹೋದನು?
2. ಅಪ್ಪ ಅಮ್ಮನನ್ನು ನೋಡಿಕೊಂಡವನು ಯಾರು?
3. ಧನಪಾಲನು ಗೋಪಾಲನಿಗೆ ಹಣಕೊಟ್ಟು ಏನು ಹೇಳಿದನು?
4. ಮಾವಜ್ಜ ಪಕ್ಷಿಗಳ ಗುಂಪಿಗೆ ಏನೆಂದು ಹೇಳಿದನು?
5. ಕೀರ್ತಿಪಾಲನು ಗೋಪಾಲನಿಗೆ ಯಾವ ಭಾಷೆ ಕಲಿಸಿಕೊಟ್ಟು ಹೋದನು?



ತಾಳ್ಮೆ



ತಾಳುವಿಕೆಗಿಂತ ತಪವು ಇಲ್ಲ
ಕೇಳಬಲ್ಲವರಿಗೆ ಹೇಳುವೆನು ಸೊಲ್ಲ ॥ಪ॥

ದುಷ್ಟ ಮನುಜರು ಪೇಳ್ವ ನಿಷ್ಠುರದ ನುಡಿ ತಾಳು
ಕಷ್ಟ ಬಂದರೆ ತಾಳು ಕಂಗೆಡದೆ ತಾಳು
ನೆಟ್ಟ ಸಸಿ ಫಲ ಬರುವ ತನಕ ಶಾಂತಿಯ ತಾಳು
ಕಟ್ಟು ಬುತ್ತಿಯ ಮುಂದೆ ಉಣಲುಂಟು ತಾಳು ॥೧॥

ಹಳಿದು ಹಂಗಿಸುವ ಹಗೆಯ ಮಾತನು ತಾಳು
ಸುಳಿನುಡಿ ಕುಹಕ ಕುಮಂತ್ರವನು ತಾಳು
ಅಳುಕದಲೆ ಬಿರುಸು ಬಿಂಕದ ನುಡಿಯ ನೀ ತಾಳು
ಹಲಧರಾನುಜನನ್ನು ಹೃದಯದಲಿ ತಾಳು ॥೨॥

ನಕ್ಕು ನುಡಿವರ ಮುಂದೆ ಮುಕ್ಕರಿಸದೆ ತಾಳು
ಅಕ್ಕಸವ ಮಾಡುವರ ಅಕ್ಕರದಿ ತಾಳು
ಉಕ್ಕೋ ಹಾಲಿಗೆ ನೀರು ಇಕ್ಕಿದಂದದಿ ತಾಳು
ಪಕ್ಷೀಶ ಹಯವದನ ಶರಣೆಂದು ಬಾಳು ॥೩॥

—ವಾದಿರಾಜರು


ಕ್ಷೇತ್ರ : ಓದುವುದು
ಸಾಮರ್ಥ್ಯ : ಪಠ್ಯದ ವಿಷಯಗಳನ್ನು ಓದಿ ತಾರ್ಕಿಕವಾಗಿ ತೀರ್ಮಾನಿಸುವುದು.

ಆಶಯ

ತಾಳ್ಮೆ ಎಂಬುದು ಮನುಷ್ಯನ ಬದುಕಿನ ಗತಿಯನ್ನು ಬದಲಾಯಿಸಬಲ್ಲ ಬಹುದೊಡ್ಡ ಅಸ್ತ್ರ. ತಾಳ್ಮೆ ಕಳೆದುಕೊಂಡ ವ್ಯಕ್ತಿ ಸಹಜ ಮಾನವನಾಗಿ ಬಾಳಲು ಸಾಧ್ಯವಿಲ್ಲ. 'ತಾಳಿದವನು ಬಾಳಿಯಾನು' ಎಂಬುವುದು ಲೋಕೋಕ್ತಿ. ತಾಳ್ಮೆಯಿಂದ ವರ್ತಿಸಿದರೆ ನಮ್ಮ ಬದುಕನ್ನು ಸುಂದರಗೊಳಿಸಿಕೊಳ್ಳಬಹುದು ಎಂಬುದು ಪ್ರಸ್ತುತ ಕೀರ್ತನೆಯ ಆಶಯ.



ಕವಿ ಕೃತಿ ಪರಿಚಯ



ಕನ್ನಡ ಹರಿದಾಸ ಸಾಹಿತ್ಯವನ್ನು ಬೆಳೆಸಿ ಪೋಷಿಸಿದ ಮಹನೀಯರಲ್ಲಿ ಶ್ರೀ ವಾದಿರಾಜರು ಒಬ್ಬರು. ಕುಂದಾಪುರ ತಾಲೂಕಿನ ಕುಂಭಾಸಿಯ ಸಮೀಪದ ಹೂವಿನಕೆರೆ ವಾದಿರಾಜರ ಜನ್ಮಸ್ಥಳ. ಇವರ ಹುಟ್ಟು ಹೆಸರು 'ವರಾಹ'ಎಂದು. ಭೂವರಾಹ ದೇವರ ಭಕ್ತರಾದ ರಾಮಾಚಾರ್ಯ ಮತ್ತು ಸರಸ್ವತಿ ದೇವಿ ಇವರ ತಂದೆ ತಾಯಿಗಳು. ಉಡುಪಿ ಶ್ರೀಕೃಷ್ಣ ಮಠದ ಪೀಠಾಧಿಪತಿಗಳಾದ ಶ್ರೀ ವಾಗೀಶತೀರ್ಥರು ವರಾಹನಿಗೆ ಸನ್ಯಾಸದೀಕ್ಷೆ ನೀಡಿ ವಾದಿರಾಜರೆಂದು ನಾಮಕರಣ ಮಾಡಿದರು.

ಶಾಸ್ತ್ರ, ಸಾಹಿತ್ಯಗಳೆರಡರಲ್ಲಿ ಪರಿಶ್ರಮವಿರುವ ವಾದಿರಾಜರು ಸಂಸ್ಕೃತ, ತುಳು, ಕನ್ನಡ ಭಾಷೆಗಳಲ್ಲಿ ಪಾಂಡಿತ್ಯವುಳ್ಳವರಾಗಿದ್ದರು. ಶ್ರೀ ವಾದಿರಾಜರು 'ಹಯವದನ'ಎಂಬ ಅಂಕಿತವಿರಿಸಿಕೊಂಡು ಕನ್ನಡದಲ್ಲಿ ನೂರಾರು ಕೃತಿಗಳನ್ನು ರಚಿಸಿದ್ದಾರೆ. 'ಯುಕ್ತಿ ಮಲ್ಲಿಕಾ' ಅವರ ಅತ್ಯುತ್ತಮ ಕೃತಿಗಳಲ್ಲಿ ಒಂದು.

ಅ. ಅರ್ಥ ತಿಳಿ

ತಾಳು–ಸಹಿಸಿಕೊಳ್ಳು, ತಾಳ್ಮೆ ವಹಿಸು. ತಪ–ತಪಸ್ಸು, ಸೊಲ್ಲು– ಮಾತು. ಹಾಡಿನ ಒಂದು ನುಡಿ. ದುಷ್ಟ–ನೀಚ, ಕೆಟ್ಟವನು. ನಿಷ್ಠುರದ ನುಡಿ–ಬಿರುನುಡಿ, ಖಡಾಖಂಡಿತ ಮಾತು. ಕಂಗೆಡು–ಗಾಬರಿಯಾಗು, ಉದ್ವೇಗಗೊಳ್ಳು. ಶಾಂತಿ–ನೀರವತೆ, ನೆಮ್ಮದಿ. ಉಣ್ಣು–ಊಟ ಮಾಡು. ಹಳಿದು–ದೂಷಿಸಿ, ನಿಂದಿಸಿ. ಹಂಗಿಸು– ಮೂದಲಿಸು, ಹೀಯಾಳಿಸು. ಹಗೆ–ದ್ವೇಷ, ವೈರಿ, ಶತ್ರು. ಕುಹಕ–ಮೋಸ, ವಂಚನೆ. ಕುಮಂತ್ರ–ದುರ್ಬೋಧನೆ, ಕುತಂತ್ರ. ಅಳುಕು–ಹೆದರು, ನಡುಗು, ಹಿಂಜರಿ. ಬಿರುಸು–ತೀಕ್ಷ್ಣ, ಜೋರು, ರಭಸ. ಮುಕ್ಕರಿಸು–ಎಡವು, ಮುಗ್ಗರಿಸು. ಅಕ್ಕಸ–ರೋಷ, ರೊಚ್ಚು, ಈರ್ಷೆ. ಅಕ್ಕರ–ಪ್ರೀತಿ, ಅಕ್ಕರೆ. ಇಕ್ಕು.–ಇಡು, ಸುರಿ, ಹಾಕು. ಪೇಳ್ವ–ಹೇಳುವ

ಆ ವಿವರ ತಿಳಿ.

ಹಲ	: ನೇಗಿಲು. ಹಲಧರ–ನೇಗಿಲನ್ನು ಹಿಡಿದವನು (ಬಲರಾಮ)
ಅನುಜ	: ತಮ್ಮ. ಹಲಧರಾನುಜ–ಬಲರಾಮನ ತಮ್ಮ ಶ್ರೀಕೃಷ್ಣ.
ಪಕ್ಷೀಶ	: ಪಕ್ಷಿಗಳ ರಾಜ–ಗರುಡ.
ಹಯವದನ	: ಕುದುರೆ ಮುಖ.
ಪಕ್ಷೀಶ ಹಯವದನ	: ವಿಷ್ಣುವಿನ ಹೆಸರುಗಳಲ್ಲಿ ಒಂದು, ವಾದಿರಾಜರ ಅಂಕಿತನಾಮ.
ಬುತ್ತಿ	: ದೂರದ ಪ್ರಯಾಣಕ್ಕೆ ಹೋಗುವಾಗ ಕಟ್ಟಿಕೊಂಡು ಹೋಗುವ ಆಹಾರದ ಗಂಟು.
ಸುಳಿನುಡಿ	: ಸುತ್ತಿ ಬಳಸಿ ಆಡುವ ಮಾತು, ಬಳಸು ಮಾತು.



ಇ. ಕೆಳಗಿನ ಪ್ರಶ್ನೆಗಳಿಗೆ ಉತ್ತರ ಹೇಳಿರಿ.

೧. ದುಷ್ಟ ಮನುಜರು ಹೇಳುವ ಯಾವ ಮಾತನ್ನು ತಾಳಬೇಕು ಎಂದು ಕವಿ ಹೇಳುತ್ತಾರೆ?
೨. ಯಾರನ್ನು ಹೃದಯದಲ್ಲಿ ನೆಲೆಗೊಳಿಸಬೇಕು ಎಂದು ಕವಿ ಹೇಳುತ್ತಾರೆ?
೩. ವಾದಿರಾಜರ ಅಂಕಿತ ನಾಮ ಯಾವುದು?
೪. ಹಯವದನ ಎಂದರೇನು?
೫. ನೀನು ನಿನ್ನ ಜೀವನದಲ್ಲಿ ತಾಳ್ಮೆಯಿಂದ ವರ್ತಿಸಿದ ಒಂದು ಘಟನೆಯನ್ನು ಹೇಳು?

ವ್ಯಾಕರಣ ಮಾಹಿತಿ

ಅ. ಪ್ರತ್ಯಯಗಳ ಪರಿಚಯ

ಪ್ರತ್ಯಯಗಳು ನಾಮಪ್ರಕೃತಿಗೆ (ಮೂಲ ಪದಕ್ಕೆ) ನಿರ್ದಿಷ್ಟ ಅರ್ಥ ಬರುವಂತೆ ಮಾಡುತ್ತವೆ. ಪ್ರತ್ಯಯಗಳನ್ನು ಸ್ವತಂತ್ರವಾಗಿ ಬಳಸಲು ಬರುವುದಿಲ್ಲ. ಹಾಗೆ ಬಳಸಿದರೆ ಅರ್ಥವೂ ಬರುವುದಿಲ್ಲ. ವಾಕ್ಯರಚನೆಯ ಸಂದರ್ಭದಲ್ಲಿ ನಾಮಪ್ರಕೃತಿಗಳು ಪಡೆಯಬೇಕಾದ ಅರ್ಥವಿಶೇಷಗಳನ್ನು ತಂದು ಕೊಡಲು ಸಹಾಯ ಮಾಡುವ ಕಾರಕಗಳೇ ಪ್ರತ್ಯಯಗಳು. ಇವುಗಳನ್ನು ವಿಭಕ್ತಿ ಪ್ರತ್ಯಯವೆಂದೂ ಕರೆಯುತ್ತಾರೆ.

ಉ, ಅನ್ನು, ಇಂದ, ಕ್ಕೆ, ಅ, ಅಲ್ಲಿ – ಇವುಗಳನ್ನು ಪ್ರತ್ಯಯಗಳು ಎನ್ನುವರು.
'ಮನೆ' ಎಂಬುದು ಮೂಲರೂಪ ನಾಮಪದ. ಇದನ್ನು ನಾಮಪ್ರಕೃತಿ ಎನ್ನುವರು. ನಾಮಪ್ರಕೃತಿಗೆ ಮೇಲೆ ಹೇಳಿದ ಯಾವುದೇ ಪ್ರತ್ಯಯವನ್ನು ಹಚ್ಚಬಹುದು.

ಉದಾ : ಮನೆ+ಉ=ಮನೆಯು, ಮನೆ+ಅಲ್ಲಿ=ಮನೆಯಲ್ಲಿ.

ಮುಂದಿನ ಪಾಠದಲ್ಲಿ ವಿಭಕ್ತಿ ಪ್ರತ್ಯಯಗಳ ಬಗ್ಗೆ ಇನ್ನಷ್ಟು ವಿವರಗಳನ್ನು ತಿಳಿಯೋಣ.

ಆ. ಓದಿಗೆ ಮನ್ನಣೆ

೧. ವಾದಿರಾಜರ ಜೀವನ ಚರಿತ್ರೆಯನ್ನು ಓದಿರಿ.
೨. ವಾದಿರಾಜರ ಇತರ ಕೀರ್ತನೆಗಳನ್ನು ಓದಿ ಅರ್ಥೈಸಿಕೊಳ್ಳಿ.
೩. ದಾಸರ ಕೀರ್ತನೆಗಳನ್ನು ಹಾಗೂ ಅವರ ಜೀವನ ಚರಿತ್ರೆಯನ್ನು ಓದಿರಿ.

ಇ. ಶುಭ ನುಡಿ

೧. ಆತ್ಮವಿಶ್ವಾಸವನ್ನು ಕಳೆದುಕೊಂಡವನು ಎಲ್ಲವನ್ನೂ ಕಳೆದುಕೊಂಡಂತೆಯೇ ಸರಿ.
೨. ತಾಳ್ಮೆಗಿಂತಲೂ ಉತ್ತಮವಾದ ಸಾಧನ ಬೇರೆಯಿಲ್ಲ.
೩. ತಾಳ್ಮೆ ಯಾರ ಕೈಯಲ್ಲಿರುವುದೋ ಅವರನ್ನು ದುರ್ಜನರು ಏನು ಮಾಡಲೂ ಸಾಧ್ಯವಿಲ್ಲ.

ಪೂರಕ ಪಾಠ : ಬೇವು ಬೆಲ್ಲದೊಳಿಡಲೇನು ಫಲ

ಬೇವು ಬೆಲ್ಲದೊಳಿಡಲೇನು ಫಲ
ಹಾವಿಗೆ ಹಾಲೆರೆದೇನು ಫಲ॥

ಕುಟಿಲವ ಬಿಡದಿಹ ಮನುಜರು ಮಂತ್ರವ
ಪಠನೆಯ ಮಾಡಿದರೇನು ಫಲ
ಸಟೆಯನ್ನಾಡುವ ಮನುಜರು ಸಂತತ
ನಟನೆಯ ಮಾಡಿದರೇನು ಫಲ॥

ಕಪಟತನದಲಿ ಕಾಡುತ ಜನರನು
ಜಪವನು ಮಾಡಿದರೇನು ಫಲ
ಕುಪಿತ ತನುವನು ಬಿಡದೆ ನಿರಂತರ
ಗೀತೆಯನೋದಿದರೇನು ಫಲ॥

ಹೀನ ಗುಣಗಳ ಹಿಂಗದೆ ಗಂಗೆಯ
ಸ್ನಾನವ ಮಾಡಿದರೇನು ಫಲ
ಶ್ರೀನಿಧಿ ಪುರಂದರ ವಿಠಲನ ನೆನೆಯದೆ
ಮೌನವ ಮಾಡಿದರೇನು ಫಲ.॥

–ಪುರಂದರದಾಸರು



ಈ ಪ್ರಶ್ನೆಗಳಿಗೆ ಉತ್ತರ ಹೇಳಿರಿ.

೧) ಕೀರ್ತನಕಾರರು 'ಹಾವಿಗೆ ಹಾಲೆರೆದೇನು ಫಲ' ಎಂದು ಏಕೆ ಹೇಳಿದ್ದಾರೆ?
೨) ಮಂತ್ರ ಪಠನೆಯ ಫಲ ಸಿಗಬೇಕೆಂದರೆ ಮನುಜ ಏನನ್ನು ಬಿಡಬೇಕು ?
೩) ಈ ಕೆಳಗಿನ ಪದಗಳ ಅರ್ಥ ಹೇಳಿರಿ.
   ೧) ಸಟೆ   ೨) ಕುಟಿಲತೆ   ೩) ಕಪಟತನ   ೪) ಕುಪಿತ   ೫) ಹಿಂಗು
೪) "ಹೀನ ಗುಣಗಳ ಹಿಂಗದೆ ಗಂಗೆಯ ಸ್ನಾನವ ಮಾಡಿದರೇನು ಫಲ" ಇದರ ಭಾವಸಾರವನ್ನು ಹೇಳಿರಿ.
೫) 'ಜಪದ ಫಲ' ನಮಗೆ ಸಿಗಬೇಕಾದರೆ ನಾವು ಹೇಗಿರಬೇಕು?
೬) ಪುರಂದರ ದಾಸರ ಅಂಕಿತನಾಮ ಯಾವುದು?



ರಾಹುಲನ ನಿರೀಕ್ಷೆ



[ಅರಮನೆಯ ಅಂಗಳ. ಮಕ್ಕಳೆಲ್ಲರೂ ಹಣ್ಣುಗಳನ್ನು ಹಿಡಿದುಕೊಂಡು ಹಾಡುತ್ತ ಕುಣಿದಾಡುತ್ತಿದ್ದಾರೆ.]

ಮಕ್ಕಳ ಗುಂಪು : ಆಡುವ ನಾವಾಡುವ
ನಲಿಯುತ ಕುಣಿದಾಡುವ
ಹಾರುತ ನಾವಾಡುವ
ತೇಲುತ ನಲಿದಾಡುವ
ನೋಡುತ ನಾವ್ ತಿಳಿಯುವ
ಕೇಳುತ ನಾವ್ ಕಲಿಯುವ ॥ಆಡುವ॥

ಚಂದ್ರಸೇನ : ಹಣ್ಣು, ಬಣ್ಣ ನೋಡುವ




ಬಾಯಲಿಟ್ಟು ಸವಿಯುವ ॥ಆಡುವ॥
ಕೋಮಲೆ : ರಾಮು, ಭೀಮು, ಕರಿಯ, ಕೆಂಚ
ಎಲ್ಲರೊಡನೆ ಕುಣಿಯುವ ॥
ಕೆಂಚ : ಗುಬ್ಬಿ ಗಿಳಿ ಗಿಡುಗ ಕಾಗೆ
ಎಲ್ಲಾ ಹಾಡ ಕೇಳುವ ॥
ಕರಿಯ : ತಿನ್ನುವ ನಾವ್ ತಿನ್ನುವ
ಎಲ್ಲಾ ಹಣ್ಣ ತಿನ್ನುವ ॥ಆಡುವ॥
ಗುಂಪು : ಅಪ್ಪ ತಂದ ಹಣ್ಣನು
ಎಲ್ಲರೊಡನೆ ತಿನ್ನುವ....
ತಿನ್ನುವ ನಾವ್ ತಿನ್ನುವ
ನಮ್ಮಪ್ಪ ತಂದ ಹಣ್ಣನು
ಎಲ್ಲರೊಡನೆ ತಿನ್ನುವ....
ರಾಹುಲ : ನಿಲ್ಲಿಸಿ!....
ಕೋಮಲೆ : ಯಾಕೆ? ರಾಹುಲ ಏನಾಯಿತು?
ಕರಿಯ : ಹಾಡು ಚೆನ್ನಾಗಿಲ್ಲವೆ ? ಅಥವಾ ಹಣ್ಣು ಚೆನ್ನಾಗಿಲ್ಲವೆ ?
ರಾಹುಲ : ಇಲ್ಲ, ಯಾವುದೂ ಚೆನ್ನಾಗಿಲ್ಲ.
ಕೆಂಚ : ಯಾಕೆ ಚೆನ್ನಾಗಿಲ್ಲ?
ರಾಹುಲ : ಯಾರು ತಂದ ಹಣ್ಣು ಎಂದಿರಿ ನೀವು? ನಿಮ್ಮ ಹಣ್ಣುಗಳನ್ನು
ನೀವೇ ತಿಂದುಕೊಳ್ಳಿ.
(ಇದ್ದಕ್ಕಿದ್ದಂತೆಯೇ ರಾಹುಲ ಮನೆಗೆ ಓಡಿಹೋಗುತ್ತಾನೆ.)
ಮಕ್ಕಳ ಗುಂಪು : ರಾಹುಲ.... ರಾಹುಲ.... ರಾಹುಲ...,?

[ಆ ಹೊತ್ತಿಗೆ ಯಶೋಧರೆ ಪ್ರವೇಶಿಸುತ್ತಾಳೆ.]
ಯಶೋಧರೆ : ಯಾರು...., ಯಾರದು.... ಏನಾಯಿತು? ಈ ಮಕ್ಕಳು ಯಾಕೆ
ಇಷ್ಟು ಗದ್ದಲ ಮಾಡುತ್ತಿದ್ದಾರೆ?..... ರಾಹುಲ, ಮಗು ರಾಹುಲ....
ಎಲ್ಲಿರುವೆ ? ಅರೇ, ಇದೇನು, ಏನಾಯಿತು ಮಗೂ? ಯಾಕೆ ಹೀಗೆ
ಕುಳಿತಿರುವೆ?... ನಿನ್ನ ಸ್ನೇಹಿತರೊಂದಿಗೆ ಆಟವಾಡುತ್ತಿದ್ದೆಯಲ್ಲ, ಏನಾಯಿತು,
ಜಗಳವಾಡಿದಿರಾ.... ಏನಾಯಿತು? ಹೇಳು ಮಗು ?

[ರಾಹುಲ, ಸುಮ್ಮನೆ ಗಲ್ಲಕ್ಕೆ ಕೈಕೊಟ್ಟು ಬೇಸರದಿಂದ ಕುಳಿತಿರುತ್ತಾನೆ. ಯಶೋಧರೆ ಅವನ ಪಕ್ಕದಲ್ಲಿ ಕುಳಿತು ತಲೆ ನೇವರಿಸುತ್ತಾ ಮಾತನಾಡಿಸುತ್ತಾಳೆ.]

ಯಶೋಧರೆ : ನಿನ್ನ ಗೆಳೆಯರು ಕರೆಯುತ್ತಿದ್ದಾರಲ್ಲ ಮಗೂ, ನೀನು ಏನೂ ಕೇಳಿಸದವನಂತೆ



ಕುಳಿತಿರುವುದು ಸರಿಯೇ.... ಏನಾಯಿತು ಹೇಳು ಕಂದಾ...?

[ರಾಹುಲ ತಲೆಯೆತ್ತಿ ಯಶೋಧರೆಯ ಮುಖ ನೋಡಿ ಹೇಳುತ್ತಾನೆ.]


ರಾಹುಲ : ಅಮ್ಮಾ....?

ಯಶೋಧರೆ : ಹೇಳು ಮಗೂ, ಹೇಳು....!

ರಾಹುಲ : ನೀನು ಮೊದಲು ಹೇಳು, ಅಪ್ಪ ಎಂದು ಬರುತ್ತಾರೆ.....?

ಯಶೋಧರೆ : ಯಾಕೆ ಮಗೂ, ಯಾಕೆ ಹೀಗೆ ಹಠ ಮಾಡುತ್ತಿದ್ದೀಯ......?

ರಾಹುಲ : ಹೇಳು ಈಗ, ಅವರು ಎಲ್ಲಿ ಹೋಗಿದ್ದಾರೆ?.... ಯಾಕೆ ಹೋಗಿದ್ದಾರೆ?... ಎಂದು ಬರುತ್ತಾರೆ?



ಯಶೋಧರೆ : (ತನಗೆ ತಾನೇ) ಏನು ಹೇಳಲಿ, ಹೇಗೆ ಹೇಳಲಿ?

[ಎಂದು ದುಃಖಿಸುತ್ತಾ, ರಾಹುಲನನ್ನು ತಬ್ಬಿ ಸಮಾಧಾನ ಮಾಡುತ್ತಾ ನಿಧಾನವಾಗಿ ಮಾತು ಮರೆಸಿ ಕೇಳುತ್ತಾಳೆ.]



ಯಶೋಧರೆ : ಏನಾಯಿತು ಮಗು ನಿನಗೆ? ನಿನ್ನ ಗೆಳೆಯ ಚಂದ್ರಸೇನ ಬಂದಿದ್ದಾನೆ..... ನಿನ್ನನ್ನೇನಾದರೂ ಅಂದನೇ...?

ಚಂದ್ರಸೇನ : [ಓಡಿ ಬಂದು] ಇಲ್ಲಮ್ಮಾ, ನಾನೇನೂ ಹೇಳಿಲ್ಲ, ಅಪ್ಪ ತಂದುಕೊಟ್ಟ ಹಣ್ಣನ್ನು ಹಂಚಿ ತಿನ್ನೋಣ ಅಂದೆವು ಅಷ್ಟೇ, ಅಲ್ವೇನ್ರೋ...?

ಮಕ್ಕಳಗುಂಪು : ಹೌದು.... ಹೌದು...

[ಈ ಎಲ್ಲಾ ಮಾತಿಗೆ ನಿರುತ್ತರನಾದ ರಾಹುಲನನ್ನು ತಬ್ಬಿ ಅಳುವ ಅಮ್ಮನನ್ನು ಕುರಿತು ರಾಹುಲ ಹೇಳುತ್ತಾನೆ...]

ರಾಹುಲ : ನೀನು ಅಳಬೇಡಮ್ಮ, ನೀನು ಅತ್ತರೆ ನನಗೂ ಅಳು ಬರುತ್ತದೆ.

[ಎಂದು ಎದ್ದುನಿಂತು ಅಮ್ಮನ ಕಣ್ಣೊರೆಸುತ್ತಾನೆ, ಆಗ ಅವಳು ದುಗುಡಗೊಂಡು–]

ಯಶೋಧರೆ : ಈಗ ಹೇಳು...., ಏಕೆ ಆಟ ಬಿಟ್ಟು ಬಂದೆ...?

ರಾಹುಲ : ಮತ್ತೆ.... ಮತ್ತೇ... ಚಂದ್ರಸೇನನೊಡನೆ ಸೇರಿ ಎಲ್ಲರೂ ಆಡುತ್ತಿದ್ದೆವಲ್ಲಾ, ಆಗ..

[ಹಿಂದಿನಿಂದ ಗುಂಪು: ಅದೇ ಹಾಡನ್ನು ಸರಳವಾಗಿ ಹಾಡುತ್ತಾ ಕೊನೆಯ ಸಾಲಿಗೆ ಬಂದಾಗ ರಾಹುಲ]

ರಾಹುಲ : ಅಪ್ಪ ತಂದ ಹಣ್ಣನು ಎಲ್ಲರೊಡನೆ ತಿ..ನ್ನು...ವ

[ಎಂದು ಹಾಡುತ್ತಾ ನಿಧಾನವಾಗಿ ನಿಲ್ಲಿಸುತ್ತಾನೆ... ಅನಂತರ ಅಮ್ಮನ ಮುಖ ನೋಡುತ್ತಾ ನಿಂತು ಬಿಡುತ್ತಾನೆ. ಯಶೋಧರೆಗೆ ವಾಸ್ತವದ ಅರಿವಾಗಿ ಏನೂ ಅರಿಯದವಳಂತೆ...]

ಯಶೋಧರೆ : ಅರಮನೆಯಲ್ಲಿರುವ ಹಣ್ಣುಗಳನ್ನು ಕೊಂಡೊಯ್ದು ಎಲ್ಲರೊಡನೆ ಹಂಚಿ ತಿನ್ನಬಾರದೇ ಮಗೂ...

[ರಾಹುಲನಿಗೆ ಒಂದು ಕ್ಷಣ ಸಿಟ್ಟುಬಂದು, ಮೆಲ್ಲಗೆ ಅಮ್ಮನನ್ನು ದೂಡಿ ಹೇಳುತ್ತಾನೆ.]

ರಾಹುಲ : ಅಲ್ಲ... ಚಂದ್ರಸೇನ ಹೇಳಿದ್ದೂ... ಅಪ್ಪ ತಂದ ಹಣ್ಣುಗಳನ್ನು... ಎಲ್ಲಾ ಸೇರಿ ತಿನ್ನುವ... ಎಂದು. ಎಲ್ಲರೂ ಅಪ್ಪ ತಂದ ಹಣ್ಣುಗಳನ್ನು ತಿನ್ನುತ್ತಾರೆ..., ನನಗೆ ನನ್ನ ಅಪ್ಪ ತಂದ ಹಣ್ಣುಗಳೇ ಬೇಕು. ಈಗ ಹೇಳು, ಅಪ್ಪ ಯಾವಾಗ ಬರುತ್ತಾರೆ... ಹಣ್ಣುಗಳನ್ನು ಯಾವಾಗ ತರುತ್ತಾರೆ? ನಾನು ಎಲ್ಲರಿಗೂ ಹೇಳಬೇಕು...

[ಯಶೋಧರೆಗೆ ಎಲ್ಲವೂ ಅರಿವಾಗುತ್ತದೆ. ಜಾಣತನದಿಂದ ರಾಹುಲನನ್ನು ರಮಿಸುತ್ತಾ...]

ಯಶೋಧರೆ : ಮಗೂ, ನಿನ್ನ ತಂದೆ ಬಂದೇ ಬರುತ್ತಾರೆ, ನಿನಗೆ ಹಣ್ಣುಗಳನ್ನು ತಂದೇ ತರುತ್ತಾರೆ.

[ಆ ಮಾತನ್ನು ಅಲ್ಲೇ ತಡೆದು, ರಾಹುಲ ಹಠ ಮಾಡುತ್ತಾನೆ...]

ರಾಹುಲ : ಎಂದು ಬರುತ್ತಾರೆ ಹೇಳು? ಇಷ್ಟು ದಿನ ಯಾಕೆ ಬರಲಿಲ್ಲ ಹೇಳು?

ಯಶೋಧರೆ : ನಾನು ಹೇಳಿದೆನಲ್ಲಾ ಮಗೂ...

ರಾಹುಲ : ಅಂದೂ ಹೀಗೇ ಹೇಳಿದ್ದೆ..., ಅಪ್ಪ ಬರಲೇ ಇಲ್ಲ...!



ಯಶೋಧರೆ : ಈಗ ಹೇಳುತ್ತೇನೆ ಮಗೂ, ಕೇಳಿಸಿಕೊ – ನಿನ್ನ ತಂದೆ ದೂರ ಹೋಗಿದ್ದಾರೆ. ಎಲ್ಲರಿಗೂ ಹಣ್ಣು ಕೊಟ್ಟು ಬರಲು...

[ಅಷ್ಟು ಹೇಳಿ ಮೌನವಾಗಿ ನಿಂತ ಅಮ್ಮನನ್ನು ಕುತೂಹಲದಿಂದ ರಾಹುಲ ನೋಡುತ್ತಾನೆ.]

ರಾಹುಲ : ಹಣ್ಣೂ...! ಯಾರಿಗೆ ಕೊಡಲು...?

ಯಶೋಧರೆ : ಕೇಳು ಮಗೂ, ನಾವು ಅರಮನೆಯಲ್ಲಿದ್ದೇವೆ ನಮಗೆ ಯಥೇಚ್ಛವಾಗಿ ಹಣ್ಣುಗಳು ಸಿಗುತ್ತವೆ ಅಲ್ಲವೆ? ಆದರೆ... ಎಲ್ಲರಿಗೂ ಅವು ಸುಲಭದಲ್ಲಿ ಸಿಗುವುದಿಲ್ಲ. ಎಲ್ಲರೂ ನಮ್ಮಂತೆ ಇರುವುದೂ ಇಲ್ಲ...

ರಾಹುಲ : ಹಾಗೆಂದರೇನು..? ಯಾರವರು...? ಅವರಿಗೇಕೆ ಅಪ್ಪ ಹಣ್ಣುಗಳನ್ನು ಕೊಡಬೇಕು?

ಯಶೋಧರೆ : ಅವರಿವರಂತಲ್ಲ..., ನಿನ್ನ ಅಪ್ಪ ಎಲ್ಲರನ್ನು ತುಂಬಾ ಪ್ರೀತಿ ಮಾಡುವವರು. ಎಲ್ಲರನ್ನು ಸಂತೈಸುವ ಮನಸ್ಸು ಅವರದು. ನಿನಗೆ ಸಿಗುವಂತೆ ಎಲ್ಲರಿಗೂ ಹಣ್ಣುಗಳನ್ನು ಸಿಗುವಂತೆ ಮಾಡಿ, ನೀನು ಆಡುವಂತೆಯೇ ಎಲ್ಲಾ ಮಕ್ಕಳು ಸಂತೋಷದಿಂದ ಆಟವಾಡಲು ಸಹಾಯ ಮಾಡಲು ಹೋಗಿದ್ದಾರೆ. ಎಲ್ಲರಿಗೂ ಹಣ್ಣುಗಳನ್ನು ಕೊಟ್ಟು ನಿನಗೂ ತರುತ್ತಾರೆ ಮಗೂ....

ರಾಹುಲ : ಹಾಗಾದರೆ ನನಗೂ ಹಣ್ಣು ತರುತ್ತಾರೋ...!? ಮೊದಲೇ ತಿಳಿದಿದ್ದರೆ ನಾನು ಅಪ್ಪನೊಂದಿಗೆ ಹೋಗಿ ಆ ಮಕ್ಕಳಿಗೆಲ್ಲಾ ಹಣ್ಣು ಕೊಟ್ಟು ಆಟವಾಡಿ ಬರುತ್ತಿದ್ದೆ.

[ಯಶೋಧರೆಗೆ ತುಂಬಾ ದುಃಖವಾಗಿ ರಾಹುಲನನ್ನು ತಬ್ಬಿ ಅಳುತ್ತ ಹೇಳುತ್ತಾಳೆ...]

ಯಶೋಧರೆ : ಮಗೂ, ನೀನು ಜಾಣ. ಅಪ್ಪನೊಂದಿಗೆ ನೀನೂ ಹೋಗಿ ಹಣ್ಣು, ಹಂಚುವೆಯಂತೆ ಕಂದಾ.

ರಾಹುಲ : ಆಗ, ಚಂದ್ರಸೇನ ಮತ್ತು ನನ್ನ ಗೆಳೆಯರನ್ನೆಲ್ಲಾ ಕರೆದುಕೊಂಡು ಹೋಗಬಹುದಲ್ಲವೇ....?

ಯಶೋಧರೆ : ಹೌದು, ಹೋಗಬಹುದು ಮಗೂ.

[ರಾಹುಲನಿಗೆ ಸಂತೋಷವಾಗಿ ಕುಣಿದಾಡುತ್ತಾನೆ.]

ರಾಹುಲ : ಹೋ..., ಅಪ್ಪ ಬರುತ್ತಾರೆ..., ನನಗೂ ಹಣ್ಣು ತರುತ್ತಾರೆ. ನಾವೆಲ್ಲ ಸೇರಿ ಹಣ್ಣು ಹಂಚುವ..., ಹಣ್ಣು ಹಂಚಿ ಎಲ್ಲರೊಡನೆ ಸವಿಯುವ....,

[ಎಂದು ಹಾಡುತ್ತಾ, ಹೊರಗೆ ಓಡಿಹೋಗಿ ಗೆಳೆಯರೊಡನೆ ಸೇರಿ ಗದ್ದಲ ಮಾಡುತ್ತಾ ಮಕ್ಕಳೊಂದಿಗೆ ಕೂಡಿ ನಲಿಯುತ್ತಾನೆ.]



ಕ್ಷೇತ್ರ : ಮಾತನಾಡುವುದು
ಸಾಮರ್ಥ್ಯ : ನಾಟಕ ಮತ್ತು ಚರ್ಚಾಸ್ಪರ್ಧೆಗಳಲ್ಲಿ ಭಾಗವಹಿಸುವುದು.

ಆಶಯ

ಮಕ್ಕಳ ಮನಸ್ಸು ಬಲು ಸೂಕ್ಷ್ಮವಾದುದು. ಎಷ್ಟೋ ಬಾರಿ ಸಣ್ಣಸಣ್ಣ ವಿಷಯಗಳಿಗೆ ಅವರು ಬಹಳವಾಗಿ ನೊಂದುಕೊಳ್ಳುತ್ತಾರೆ. ತಮ್ಮ ಹತ್ತಿರ ಇಲ್ಲದಿರುವುದನ್ನು ಬೇಗ ಪಡೆಯಲು ಆಶಿಸುತ್ತಾರೆ. ಸಿಗುವ ಭರವಸೆ ಸಿಕ್ಕರೂ ಅವರ ಮನಸ್ಸು ಸಮಾಧಾನಗೊಳ್ಳುವುದಿಲ್ಲ. ಅಂತಹ ನಿರೀಕ್ಷೆಯ ಮನಸ್ಸುಗಳಿಗೆ ಒಲವಿನ ಹರ್ಷ ತುಂಬುವುದು ಇಲ್ಲಿನ ಆಶಯವಾಗಿದೆ.

ಲೇಖಕರ ಪರಿಚಯ



ಕೃಷಿಕ ಮನೆತನದಲ್ಲಿ ೧೯೬೦ರಲ್ಲಿ ಹುಟ್ಟಿದ ಡಾ.ಎಂ.ಎಸ್.ಮೂರ್ತಿ ಅವರು ಬೆಂಗಳೂರಿನಲ್ಲಿ ವಾಸವಾಗಿದ್ದಾರೆ. ೧೯೮೨ರಲ್ಲಿ ೫ ವರ್ಷಗಳ ಚಿತ್ರಕಲೆ ಹಾಗೂ ಶಿಲ್ಪಕಲೆಯ ಡಿಪ್ಲೋಮೊ ಪಡೆದವರು. ಕಾಲೇಜು ಶಿಕ್ಷಣದಲ್ಲಿ ಮನ:ಶಾಸ್ತ್ರ ಅಭ್ಯಾಸ ಮಾಡಿ, ಪತ್ರಿಕೋದ್ಯಮದಲ್ಲಿ ವಿನ್ಯಾಸಕಾರ ಹಾಗೂ ಕಲಾನಿರ್ದೇಶಕರಾಗಿ ದುಡಿದವರು. ಇರಾನ್ ದೇಶದ ಕಲಾಪ್ರದರ್ಶನದಲ್ಲಿ ಭಾರತವನ್ನು ಪ್ರತಿನಿಧಿಸಿದ ಶ್ರೀಯುತರ 'ಬುದ್ಧ ದಿ ಲೈಟ್' ಚಿತ್ರಕ್ಕೆ ಅಂತಾರಾಷ್ಟ್ರೀಯ 'ಬಿನಾಲ್ ಪ್ರಶಸ್ತಿ' ದೊರತಿದೆ. 'ಮಕ್ಕಳ ಮನಸ್ಸಿನ ಚಿತ್ರಗಳು' ಎಂಬ ಅವರ ಮಹಾಪ್ರಬಂಧಕ್ಕೆ ಹಂಪಿ ಕನ್ನಡ ವಿಶ್ವವಿದ್ಯಾಲಯವು ಡಿ.ಲಿಟ್. ಪದವಿಯನ್ನು ನೀಡಿ ಗೌರವಿಸಿದೆ. 'ದೇಸಿನಗು' ಎಂಬ ಪ್ರಬಂಧ ಸಂಕಲನಕ್ಕೆ ೨೦೦೬ರ ಕರ್ನಾಟಕ ಸಾಹಿತ್ಯ ಅಕಾಡೆಮಿ ಪುರಸ್ಕಾರ ಲಭಿಸಿದೆ. 'ಯಶೋಧರೆ ಮಲಗಿರಲಿಲ್ಲ' ಎಂಬ ಅವರ ನಾಟಕ ಬೆಂಗಳೂರು ಆಕಾಶವಾಣಿಯ ಉತ್ತಮ ಪ್ರಾದೇಶಿಕ ನಾಟಕ ಪ್ರಶಸ್ತಿ ಪಡೆದಿದೆ. ಇವರು ಜಗತ್ತಿನ ಮೊದಲ 'ದೃಶ್ಯ ಕಾದಂಬರಿ'ಯನ್ನು ಪ್ರಕಟಿಸಿದ್ದು ಇದಕ್ಕೆ ಕರ್ನಾಟಕ ಪುಸ್ತಕ ಪ್ರಾಧಿಕಾರದ 'ಪುಸ್ತಕ ಸೊಗಸು' ಪ್ರಶಸ್ತಿಯನ್ನು ಗಳಿಸಿದ್ದಾರೆ.

ಅ. ಅರ್ಥ ತಿಳಿಯಿರಿ.

ಸವಿಯುವ – ಆಸ್ವಾದಿಸುವ, ರುಚಿನೋಡುವ. ಗದ್ದಲ – ಗೊಂದಲ, ಗಲಾಟೆ. ಹೊತ್ತು – ಸಮಯ, ಕಾಲ. ಟೀಕಿಸು – ಆಕ್ಷೇಪಿಸು. ನಿರುತ್ತರ – ಉತ್ತರವಿಲ್ಲದಿರುವಿಕೆ, ಮೌನ. ದುಗುಡ – ದು:ಖ, ಉಮ್ಮಳ, ಚಿಂತೆ. ವಾಸ್ತವ – ನೈಜವಾದ, ಸಹಜವಾದ. ಕೊಂಡೊಯ್ದು–ತೆಗೆದುಕೊಂಡು ಹೋಗಿ. ಜಾಣತನ – ಚಾತುರ್ಯ, ಬುದ್ಧಿವಂತಿಕೆ.



ರಮಿಸು – ಪ್ರೀತಿಯಿಂದ ಸಮಾಧಾನಪಡಿಸು, ಖುಷಿಪಡಿಸು. ಹಠ – ಛಲ, ಆಗ್ರಹ, ಒತ್ತಾಯ. ಕುತೂಹಲ – ಅಚ್ಚರಿ, ವಿಸ್ಮಯ. ಯಥೇಚ್ಛ – ಮನಸ್ಸಿಗೆ ಬಂದಷ್ಟು, ಅಧಿಕ ಪ್ರಮಾಣ. ಹಂಚು – ವಿತರಿಸು, ವಿಭಾಗಿಸು, ಪಾಲುಮಾಡು. ಸಂತೈಸು – ಉಪಚಾರಮಾಡು, ಆಧರಿಸು, ಸಾಂತ್ವನಗೊಳಿಸು.

ಅ. ವಿವರ ತಿಳಿಯಿರಿ.

ಯಶೋಧರೆಯ–

ತಳಮಳದ ಹಿನ್ನೆಲೆ : ಅರಮನೆ ಬಿಟ್ಟುಹೋದ ಸಿದ್ಧಾರ್ಥನು ಬುದ್ಧನಾಗಿ, ಪ್ರಬುದ್ಧನಾದರೂ ಪುತ್ರನಾದ ರಾಹುಲನಿಗಾಗಲೀ ಪತ್ನಿಯಾದ ತನಗಾಗಲೀ ಆತನ ಪ್ರೀತಿ ಸಿಗಲಿಲ್ಲ ಎಂಬ ತಳಮಳ ಆಕೆಯನ್ನು ಬಾಧಿಸುತ್ತಿರುವುದು ಒಂದು ಕಡೆಯಾದರೆ ಆತ ತಮಗೆ ಮಾತ್ರ ಸೇರಿದವನಲ್ಲ ಎಂಬ ಭಾವನೆ ಇನ್ನೊಂದು ಕಡೆ.

ರಾಹುಲನ ಅಪ್ಪ : ಗೌತಮ ಬುದ್ಧ. ಪ್ರೀತಿಯನ್ನು ಲೋಕಕ್ಕೆ ಹಂಚಲೆಂದು ಅರಮನೆ ಬಿಟ್ಟು ಹೊರಟು ಹೋಗಿರುವಾತ.

ಅಪ್ಪ ತಂದ ಹಣ್ಣು : ಇದಕ್ಕೆ ತಂದೆ ತಂದುಕೊಡುವ ಹಣ್ಣು ಎಂದೂ ತಂದೆಯ ಪ್ರೀತಿ ಎಂದೂ ಅರ್ಥ ಕಂಡುಕೊಳ್ಳಬಹುದು.

ಇ. ಕೆಳಗಿನ ಪ್ರಶ್ನೆಗಳಿಗೆ ಉತ್ತರ ಹೇಳಿರಿ.

೧. ರಾಹುಲ ಮತ್ತು ಸ್ನೇಹಿತರು ಏನು ಮಾಡುತ್ತಿದ್ದರು?

೨. ರಾಹುಲ ಗುಂಪಿನಿಂದ ಏಕೆ ಓಡಿ ಹೋಗುತ್ತಾನೆ?

೩. ಯಶೋಧರ ಯಾರು?

೪. ಚಂದ್ರಸೇನ ಯಾರು?

೫. ರಾಹುಲನು ಏಕೆ ಸಂತೋಷದಿಂದ ಕುಣಿದಾಡುತ್ತಾನೆ?.



ವ್ಯಾಕರಣಾಂಶ

ಅ. ವಿಭಕ್ತಿ ಪ್ರತ್ಯಯಗಳು

ವಿಭಕ್ತಿ	ವಿಭಕ್ತಿ ಪ್ರತ್ಯಯ
೧. ಪ್ರಥಮ	ಉ
೨. ದ್ವಿತೀಯ	ಅನ್ನು
೩. ತೃತೀಯ	ಇಂದ
೪. ಚತುರ್ಥಿ	ಗೆ, ಇಗೆ, ಕ್ಕೆ
೫. ಪಂಚಮೀ	ದೆಸೆಯಿಂದ
೬. ಷಷ್ಠೀ	ಅ
೭. ಸಪ್ತಮೀ	ಅಲ್ಲಿ

ನಾಮಪದಗಳಿಗೆ ವಿಭಕ್ತಿ ಪ್ರತ್ಯಯಗಳನ್ನು ಸೇರಿಸಿದಾಗ ಏನಾಗುವುದು ಎಂಬುದನ್ನು ಗಮನಿಸೋಣ:

ರಾಹುಲ	ಉ	ರಾಹುಲನು
ರಾಹುಲ	ಅನ್ನು	ರಾಹುಲನನ್ನು
ರಾಹುಲ	ಇಂದ	ರಾಹುಲನಿಂದ
ರಾಹುಲ	ಇಗೆ	ರಾಹುಲನಿಗೆ
ರಾಹುಲ	ದೆಸೆಯಿಂದ	ರಾಹುಲನ ದೆಸೆಯಿಂದ
ರಾಹುಲ	ಅ	ರಾಹುಲನ
ರಾಹುಲ	ಅಲ್ಲಿ	ರಾಹುಲನಲ್ಲಿ

ಆ. ಓದಿಗೆ ಮನ್ನಣೆ

೧. 'ರಾಹುಲನ ನಿರೀಕ್ಷೆ' ಪಾಠವನ್ನು ಧ್ವನಿಯ ಏರಿಳಿತದೊಂದಿಗೆ ಓದಿರಿ.

೨. ಬುದ್ಧನ ಕುರಿತಾದ ವಿವರಗಳನ್ನೊಳಗೊಂಡ ಇತರ ಕಥೆಗಳನ್ನು ಓದಿರಿ.
ಉದಾ: (ಅಂಗುಲಿಮಾಲ, ಕಿಸಾಗೋತಮಿ)

ಇ. ಶುಭನುಡಿ

೧. ಎಲ್ಲರೂ ಕುಣಿಯೋಣ, ಎಲ್ಲರೂ ನಲಿಯೋಣ.

೨. ಕೂಡಿ ಬಾಳಿದರೆ ಸ್ವರ್ಗಸುಖ.

೩. ಒಳ್ಳೆಯ ಮನಸ್ಸಿರುವವರಿಗೆ, ಒಳ್ಳೆಯ ಗುಣವಿರುತ್ತದೆ.

೪. ಒಟ್ಟು ಸೇರಿರಿ, ಹಂಚಿ ತಿನ್ನಿರಿ.

ಪೂರಕ ಪಾಠ :

ಅವರೆಯ ಜಾದೂ

[ಶ್ವೇತಾಪುರದ ಊರಿನಲ್ಲಿ ಒಬ್ಬ ಹೆಂಗಸಿದ್ದಳು. ಅವಳಿಗೆ ಅಪ್ಪು ಎಂಬ ಸೋಮಾರಿ ಮಗನಿದ್ದನು. ಮನೆಯಲ್ಲಿ ಬಿಡಿಕಾಸೂ ಇರಲಿಲ್ಲ. ಇದ್ದುದು ಒಂದು ದನ ಮಾತ್ರ]

ಅಮ್ಮ : ಅಪ್ಪು, ಬಾ ಇಲ್ಲಿ! ಅಡುಗೆ ಮಾಡಲು ಸಾಮಾನುಗಳಿಲ್ಲ. ತರಲು ಹಣವಿಲ್ಲ. ಈಗ ಉಳಿದಿರುವುದು ಈ ದನ ಮಾತ್ರ. ನೀನಿದನ್ನು ಮಾರಿ ಹಣ ತೆಗೆದುಕೊಂಡು ಬಾ.

ಅಪ್ಪು : ಆಗಲಿ, ಅಮ್ಮ [ಅಪ್ಪು ದನವನ್ನು ಹೊಡೆದುಕೊಂಡು ಸಂತೆಯ ಕಡೆಗೆ ಹೊರಟನು. ದಾರಿಯಲ್ಲಿ ಒಬ್ಬ ಮುದುಕ ಎದುರಾದನು.]

ಮುದುಕ : ದನವನ್ನು ಎಲ್ಲಿಗೆ ಕೊಂಡು ಹೋಗುತ್ತಿರುವಿ?

ಅಪ್ಪು : ಅದನ್ನು ಸಂತೆಯಲ್ಲಿ ಮಾರಲಿಕ್ಕೆ.
[ಮುದುಕ ತನ್ನ ಟೋಪಿ ತೆಗೆದು ಗಲಗಲ ಅಲ್ಲಾಡಿಸಿದನು. ಅದರಲ್ಲಿ ಬಣ್ಣ ಬಣ್ಣದ ಅವರೆಕಾಳುಗಳು ಕಂಗೊಳಿಸಿದವು. ಅವುಗಳನ್ನು ಕಂಡು ಅಪ್ಪುವಿಗೆ ಆಸೆ ಹುಟ್ಟಿತು.]



ಅಪ್ಪು : ಅಜ್ಜ, ಅವರೆ ಕಾಳುಗಳನ್ನು ನನಗೆ ಕೊಡಿ.

ಮುದುಕ : "ಇಷ್ಟೂ ಅವರೆಗಳನ್ನು ನಿನಗೆ ಕೊಟ್ಟು ಬಿಡುತ್ತೇನೆ. ದನವನ್ನು ನನಗೆ ಕೊಡುತ್ತೀಯಾ?" [ಅಪ್ಪು ಸಂತೋಷದಿಂದ ಒಪ್ಪಿ ದನವನ್ನು ಕೊಟ್ಟು ಅವರೆಕಾಳುಗಳನ್ನು ತೆಗೆದುಕೊಂಡು ಮನೆಗೆ ಬಂದು ಭಾರೀ ಬುದ್ಧಿವಂತನಂತೆ ತಾಯಿಗೆ ತೋರಿಸಿದನು.]

ತಾಯಿ : ಹಣ ತರದೆ, ಅವರೆ ತಂದಿರುವೆಯಾ?
[ಅಪ್ಪು ಅವರೆ ಹಿಡಿದುಕೊಂಡಿರುವ ಕೈಗೆ ಟಪ್ಪೆಂದು ಬಡಿದಳು. ಅವರೆ ಕಾಳುಗಳು ಮನೆಯ ಹಿತ್ತಲಲ್ಲೆಲ್ಲ ಚದುರಿ ಬಿದ್ದವು. ಅಪ್ಪುವಿಗೆ ತುಂಬ ದುಃಖವಾಗಿ ಮಲಗಿ ನಿದ್ದೆ ಹೋದನು. ಬೆಳಗ್ಗೆ ಎದ್ದು ಕಿಟಕಿಯಲ್ಲಿ ನೋಡಿ......]

ಅಪ್ಪು : ಅಮ್ಮಾ,ಅಮ್ಮಾ ಅಲ್ಲಿ ನೋಡಿ.

ತಾಯಿ : ಆಶ್ಚರ್ಯವಾಗುತ್ತಿದೆ. ದಟ್ಟವಾಗಿ ಬೆಳೆದ ಅವರೆ ಗಿಡ. ನೋಡೋಣ ಬಾ.

ಅಪ್ಪು : ನಾನು ತಂದ ಅವರೆ ಕಾಳು ಕೆಳಗೆ ಬಿದ್ದು ಗಿಡವಾಗಿದೆ ಅಮ್ಮ.

ತಾಯಿ : ಅದರ ತುದಿ ಕಾಣುತ್ತಿಲ್ಲವಲ್ಲ.

[ಆತ ಆಕಾಶಕ್ಕೆ ಬೆಳೆದುನಿಂತಿದ್ದ ಅವರೆ ಗಿಡವನ್ನು ಏರತೊಡಗಿದನು]

ತಾಯಿ : ಅಪ್ಪು......ಕೆಳಗೆ ಇಳಿ. ಮೇಲೇರಬೇಡ.

[ಅಪ್ಪು ಮೇಲೇರುತ್ತ ಒಂದು ಲೋಕಕ್ಕೆ ಹೋಗಿ ಮುಟ್ಟಿದನು. ಅಲ್ಲಿ ಒಬ್ಬಳು ದೊಡ್ಡ ಆಕಾರದ ಹೆಂಗಸು ಕಾಣಸಿಕ್ಕಿದಳು.]

ಅಪ್ಪು : ಅಮ್ಮಾ, ನನಗೆ ಈ ರಾತ್ರಿ ಊಟ ನೀಡಿ ಇಲ್ಲಿ ಮಲಗಲು ಜಾಗ ಕೊಡುತ್ತೀರಾ?

ಹೆಂಗಸು : ಅಯ್ಯೋ, ನೀನು ಈ ಕಡೆ ಯಾಕೆ ಬಂದಿಯಪ್ಪ? ನನ್ನ ಗಂಡ ನೋಡಿದರೆ ನಿನ್ನನ್ನು ತಿನ್ನುವನು.

(ಅಷ್ಟರಲ್ಲಿ ರಾಕ್ಷಸಗಂಡ ಬರುವ ಸೂಚನೆ ಕಂಡಿತು. ತಕ್ಷಣ ಹೆಂಗಸು ಅಪ್ಪುವನ್ನು ಒಲೆಯೊಳಗೆ ಅಡಗಿಸಿಬಿಟ್ಟಳು. ಅಪ್ಪು ಮುಚ್ಚಳದ ತೂತಿನಿಂದ ನೋಡುತ್ತಿದ್ದನು.]



ರಾಕ್ಷಸ : 'ಮನುಷ್ಯ ರಕ್ತ ಪರಿಮಳಂ'

ಹೆಂಗಸು : ಅದು ನೀವು ಈಗಾಗಲೇ ತಂದು ಸೆರೆಯಲ್ಲಿಟ್ಟ ಜನರ ಪರಿಮಳವೆ.
[ರಾಕ್ಷಸ ಹೆಂಡತಿ ತಂದಿಟ್ಟ ಮಾಂಸದಡುಗೆಯನ್ನು ತಿಂದನು.....ಅನಂತರ ಹೆಂಡತಿಗೆ] ಬಂಗಾರದ ಮೊಟ್ಟೆಯಿಡುವ ಕೋಳಿಯನ್ನು ತರಲು ಹೇಳಿದನು.]

ಹೆಂಗಸು : ತೆಗೆದುಕೊಳ್ಳಿ........ [ಕೋಳಿಯನ್ನು ತಂದು ಮೇಜಿನ ಮೇಲೆ ಇರಿಸಿದಳು.]

ರಾಕ್ಷಸನು "ಇಡು" ಎಂದನು. ಕೋಳಿ ಬಂಗಾರದ ಮೊಟ್ಟೆ ಇಟ್ಟಿತು. ಈ ರೀತಿ ಮೂರು ನಾಲ್ಕು ಮೊಟ್ಟೆ ಇಡಿಸಿ ಮನರಂಜನೆ ಅನುಭವಿಸಿ ಮಲಗಿದನು. ಅವನು ಮಲಗಿದ ಕೂಡಲೆ ಹೆಂಗಸು ಅಪ್ಪುವನ್ನು ಮೆಲ್ಲಗೆ ಕರೆದು ಕೋಳಿಯನ್ನು ಕೊಟ್ಟು ಈ ಕ್ಷಣ ಇಲ್ಲಿಂದ ಹೊರಟು ಹೋಗು. ನಿಮ್ಮ ಬಡತನ ನೀಗಲಿ ಎಂದಳು.

ಅಪ್ಪು ಕೋಳಿಯನ್ನು ಹಿಡಿದು ಕೆಳಕ್ಕಿಳಿಯುವಾಗ ಹೆಂಗಸು 'ಕೆಳಗಿಳಿದ ಕೂಡಲೆ ಅವರೆ ಗಿಡವನ್ನು ಬಗ್ಗಿಸಿ ಮನೆ ಮುಂದೆ ಚಪ್ಪರ ಮಾಡಿಕೊ' ಎಂದಳು.

ಅಪ್ಪು : ಆಯಿತು.[ಅಪ್ಪು ಕೆಳಗಿಳಿದು, ಅವರೆಗಿಡವನ್ನು ಎಳೆದು ಚಪ್ಪರ ಮಾಡಿದನು. ಅಮ್ಮನಿಗೆ ಚಿನ್ನದ ಮೊಟ್ಟೆಯಿಡುವ ಕೋಳಿಯನ್ನು ತೋರಿಸಿದನು.]

ಅಪ್ಪು : ಅಮ್ಮ, ಇದು ಚಿನ್ನದ ಮೊಟ್ಟೆಯಿಡುವ ಕೋಳಿ, ನೋಡಿಲ್ಲಿ, ಹೇ ಕೋಳಿ 'ಇಡು' [ಅದು ಬಂಗಾರದ ಮೊಟ್ಟೆ ಇಟ್ಟಿತು.]

ತಾಯಿ : ಬಂಗಾರದ ಮೊಟ್ಟೆ! ಚೆನ್ನಾಗಿದೆ. ನಮ್ಮ ಕಷ್ಟ ತೀರಿತು ಮಗು ಅದನ್ನು ಮುಚ್ಚಿಡು.
[ಅಂದಿನಿಂದ ತಾಯಿ ಮಗು ಬಂಗಾರದ ಮೊಟ್ಟೆ ಮಾರಿ ಶ್ರೀಮಂತರಾಗಿ ಸುಖವಾಗಿದ್ದರು.]

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.

1. ಅಮ್ಮ ಅಪ್ಪುವಿಗೆ ಏನನ್ನು ಮಾರಿ ಬರಲು ತಿಳಿಸಿದಳು?
2. ಅಪ್ಪುವಿಗೆ ದಾರಿಯಲ್ಲಿ ಎದುರಾದವರು ಯಾರು?
3. ಮುದುಕನು ಅಪ್ಪುವಿಗೆ ಏನನ್ನು ಕೊಟ್ಟನು?
4. ರಾಕ್ಷಸ ಹೆಂಡತಿಗೆ ಏನನ್ನು ತರಲು ಹೇಳಿದನು?
5. ಹೆಂಗಸು ಅಪ್ಪುವಿಗೆ ಕೆಳಗಿಳಿದ ಕೂಡಲೇ ಏನು ಮಾಡಲು ತಿಳಿಸಿದಳು?
6. ತಾಯಿ ಏನನ್ನು ಕಂಡು ಖುಷಿಪಟ್ಟಳು?

೫

ಮಲ್ಲಜ್ಜನ ಮಳಿಗೆ



ಕನಕನ ಹಳ್ಳಿ,
ದಿ. ೧೪-೦೬-೨೦೧೧

ಪ್ರೀತಿಯ ಸಹೋದರಿ ಸೌಜನ್ಯಳಿಗೆ,

ನಿನ್ನ ಅಣ್ಣನು ಮಾಡುವ ಆಶೀರ್ವಾದಗಳು. ನಾವು ಮನೆಯಲ್ಲಿ ಎಲ್ಲರೂ ಕ್ಷೇಮವಾಗಿದ್ದೇವೆ. ನೀನು, ಚಿಕ್ಕಮ್ಮ, ಚಿಕ್ಕಪ್ಪ ಎಲ್ಲರೂ ಕ್ಷೇಮವಾಗಿರುವಿರಿ ಎಂದು ಆಶಿಸುತ್ತೇನೆ. ನಿನ್ನ ಪತ್ರ ತಲುಪಿತು. ನೀನು ಬರೆದ ಮಾಲ್‌ಗಳ ವಿಷಯ ವಿಶೇಷವಾಗಿತ್ತು. ನಮ್ಮೂರಿನಲ್ಲೂ ಒಂದು ಮಳಿಗೆ ಇದೆ. ಅದು ನೀನು ತಿಳಿಸಿದ ಮಾಲ್‌ಗಿಂತ ವಿಶೇಷವಾಗಿದೆ. ಅದುವೇ 'ಮಲ್ಲಜ್ಜನ ಮಳಿಗೆ.' ಏನು ಅದರ ವಿಶೇಷ ಅಂತಿಯಾ? ಮುಂದೆ ಓದು, ಗೊತ್ತಾಗುತ್ತದೆ.



ಮಿಠಾಯಿ ಎಂದರೆ ಎಲ್ಲರಿಗೂ ಇಷ್ಟ. ಅದರಲ್ಲೂ ಮಕ್ಕಳಿಗಂತೂ ಬಲು ಇಷ್ಟ. ಹಾಗೆಯೇ ಮಲ್ಲಜ್ಜ. ಆತ ನಮ್ಮೂರಿನ ಎಲ್ಲರಿಗೂ ಗೊತ್ತು. ಸುತ್ತ ಮುತ್ತಲಿನ ಊರಿನವರಿಗೂ ಚಿರಪರಿಚಿತ. ಮಲ್ಲಜ್ಜನಿಂದ ಮಿಠಾಯಿ ಪ್ರಸಿದ್ಧವೋ, ಮಿಠಾಯಿಯಿಂದ ಮಲ್ಲಜ್ಜ ಪ್ರಸಿದ್ಧನೋ ಗೊತ್ತಿಲ್ಲ. ಮಲ್ಲಜ್ಜ ಮತ್ತು ಮಿಠಾಯಿ ಎರಡೂ ಇರುವ 'ಮಳಿಗೆ' ಎಲ್ಲರಿಗೂ ಒಂದು ರೀತಿಯ 'ತಂಗುದಾಣ'ವೇ ಸರಿ.

ಮಲ್ಲಜ್ಜನ ಮಳಿಗೆ ನೋಡಲು ಚಿಕ್ಕದಾದರೂ ಅಲ್ಲಿ ಎಲ್ಲವೂ ದೊರಕುತ್ತವೆ. ಕಡಲೆ, ಪುರಿ, ಕೊಬ್ಬರಿ ಮಿಠಾಯಿಗಳಿಂದ ಹಿಡಿದು ಇತ್ತೀಚಿನ ತಿನಿಸುಗಳೂ ಸಿಗುತ್ತವೆ. ಯಲ್ಲಜ್ಜಿಗೆ ಬೇಕಾದ ಎಲೆ-ಅಡಿಕೆ, ಸಿಂಗಾರಪ್ಪನಿಗೆ ಸಕ್ಕರೆ-ಚಹಾಪುಡಿ, ಪೂಜಾರಪ್ಪನಿಗೆ ಊದುಕಡ್ಡಿ-ಕರ್ಪೂರ, ಬೀಗರಿಗೆ ಬಿಸ್ಕೀಟು-ಖಾರ, ಹೆಣ್ಣುಮಕ್ಕಳಿಗೆ ಸ್ನೋ-ಪೌಡರ್, ಚಿಕ್ಕಮಕ್ಕಳಿಗೆ ಚಾಕಲೇಟು-ಪೆಪ್ಪರಮೆಂಟು-ಹೀಗೆ ಎಲ್ಲರಿಗೂ ಬೇಕಾಗುವ ವಸ್ತುಗಳು ಇಲ್ಲಿ ಲಭ್ಯ. ಆದ್ದರಿಂದ ಜನರು ಪ್ರತಿದಿನ ಒಂದಿಲ್ಲೊಂದು ಬಾರಿ ಈ ತಂಗುದಾಣವನ್ನು ದರ್ಶನ ಮಾಡುತ್ತಾರೆ.

ಮಕ್ಕಳ ಕೈಗೆ ದುಡ್ಡು ಸಿಕ್ಕಿದರೆ ಸಾಕು. ಮಲ್ಲಜ್ಜನ ಅಂಗಡಿಗೆ ಓಟ. ಅಳುತ್ತ ಬಂದ ಪುಟಾಣಿ ಮಕ್ಕಳೂ ಅಲ್ಲಿ ಸುಮ್ಮನಾಗಿಬಿಡುತ್ತಾರೆ. ದುಡ್ಡಿಲ್ಲದೆ ಬಂದ ಪುಟ್ಟ ಮಕ್ಕಳಿಗೂ ಮಲ್ಲಜ್ಜ ನಗುತ್ತ ಪ್ರೀತಿಯಿಂದ ಮಿಠಾಯಿ ಕೊಡುತ್ತಾನೆ. ನಾನು ಪುಟಾಣಿಯಾಗಿದ್ದಾಗ ಹೀಗೆಯೇ ಮಿಠಾಯಿ ಪಡೆದಿದ್ದೆನಂತೆ! 'ಈಗ ದುಡ್ಡಿಲ್ಲಜ್ಜ' ಎಂದು ದೊಡ್ಡವರೂ ವಸ್ತುಗಳನ್ನು ತೆಗೆದುಕೊಂಡು ಹೋಗುತ್ತಾರೆ. ಹಣವಿದ್ದಾಗ ತಪ್ಪದೇ ತಂದುಕೊಡುತ್ತಾರೆ. ತುರ್ತಾಗಿ ಬೇಕಾದಾಗ ಸಾಲವಾಗಿ ಹಣವನ್ನೂ ಪಡೆದುಕೊಂಡು ಹೋಗುತ್ತಾರೆ. ಹೀಗಾಗಿ ಮಲ್ಲಜ್ಜನ ಮಳಿಗೆ ಒಂದು ಪ್ರೀತಿಯ 'ಸಹಕಾರಿ ಬ್ಯಾಂಕ್' ಇದ್ದಂತೆ!.

ನಮ್ಮೂರಿಗೆ ಯಾರು ಹೊಸಬರು ಬಂದರೂ, ಮೊದಲು ಮಾತನಾಡಿಸುವುದು ಮಲ್ಲಜ್ಜನನ್ನೇ. ಯಾರ ಮನೆ ಬೇಕು ತೋರಿಸುತ್ತಾನೆ. ಯಾರ ವಿಷಯ ಬೇಕು-ತಿಳಿಸುತ್ತಾನೆ. ಇಲ್ಲಿಯ ಎಲ್ಲ ಕುಟುಂಬಗಳು, ಜನರು, ಮಕ್ಕಳು ಮಲ್ಲಜ್ಜನಿಗೆ ಗೊತ್ತು! ಮದುವೆಯಾಗುವ ಹುಡುಗ-ಹುಡುಗಿಯರ ಬಗ್ಗೆ ಕೇಳಿದರೆ ಸಾಕು, ಅವರ ಜಾತಕ ಸಮೇತ ವಿವರಿಸಿ ಬಿಡುತ್ತಾನೆ. ಯಾರಾದರೂ ಯಾರಿಗಾದರೂ, ಯಾವ ವಿಷಯವನ್ನಾದರೂ ತಿಳಿಸಲು ಹೇಳಿದ್ದರೆ, ಅವರಿಗೆ ಆ ವಿಷಯವನ್ನು ಯಥಾವತ್ತಾಗಿ ತಿಳಿಸಿಬಿಡುತ್ತಾನೆ ಮಲ್ಲಜ್ಜ. ಪತ್ರಿಕೆ, ಪತ್ರಗಳನ್ನು ಸಂಬಂಧಿಸಿದವರಿಗೆ ತಪ್ಪದೇ ತಲುಪಿಸುತ್ತಾನೆ. ಯಾರು ಎಲ್ಲಿಗೆ ಏಕೆ ಹೋಗಿದ್ದಾರೆ? ಯಾವಾಗ ಬರುತ್ತಾರೆ? ಎಲ್ಲವೂ ತಿಳಿದಿರುತ್ತದೆ ಮಲ್ಲಜ್ಜನಿಗೆ! ಟೆಂಪೋ, ಜೀಪು, ಬಸ್ಸುಗಳು ಬಂದು ಹೋಗುವ ಸಮಯದ ವಿವರವೂ ಇಲ್ಲಿ ಲಭ್ಯ. ಹಾಗಾಗಿ ಮಲ್ಲಜ್ಜನ ಮಳಿಗೆ ಒಂದು ಉಚಿತ 'ಸಂಪರ್ಕ ಕೇಂದ್ರ' ಇದ್ದಂತೆ.



ಮಲ್ಲಜ್ಜ ಯಾರ ಮೇಲೂ ಸಿಟ್ಟು ಮಾಡಿಕೊಳ್ಳುವುದಿಲ್ಲ. ಎಲ್ಲರೊಂದಿಗೂ ನಗುನಗುತ್ತಾ ಮಾತನಾಡುತ್ತಾನೆ. ಜನರ ಸಮಸ್ಯೆಗಳನ್ನೂ ಸುಲಭವಾಗಿ ಪರಿಹರಿಸಿಬಿಡುತ್ತಾನೆ. ಮಕ್ಕಳಿಂದ ಹಿಡಿದು ಮುದುಕರವರೆಗಿನ ದೂರುಗಳನ್ನು ದೂರಮಾಡಿಬಿಡುತ್ತಾನೆ. ಮಳಿಗೆಯ ಮುಂದಿರುವ ಚಪ್ಪಡಿಕಲ್ಲುಗಳೇ ಇಲ್ಲಿ ಕಟಕಟೆ. ಮಲ್ಲಜ್ಜನ ಕೋರ್ಟ್‌ನಲ್ಲಿ ಯಾವ ವಕೀಲರೂ, ಸಾಕ್ಷಿಗಳೂ ಬೇಕಿಲ್ಲ. ಎಷ್ಟೋ ಬಾರಿ ದೂರು ಏನೆಂದು ಜನರು ಹೇಳುವ ಮೊದಲೇ ತೀರ್ಪು ನೀಡಿಬಿಡುತ್ತಾನೆ. ಇಷ್ಟು ಶೀಘ್ರವಾಗಿ ಪ್ರಕರಣಗಳು ಯಾವ ನ್ಯಾಯಾಲಯದಲ್ಲಿಯೂ ಬಗೆಹರಿಯುವುದಿಲ್ಲ. ಕೋರ್ಟು ಶುಲ್ಕ, ವಕೀಲರ ಫೀಜು ಯಾವುದೂ ಇಲ್ಲಿಲ್ಲ. ಮಲ್ಲಜ್ಜ ನೀಡುವ ತೀರ್ಪು ಯಾವ ನ್ಯಾಯಾಧೀಶರ ತೀರ್ಪಿಗೂ ಕಡಿಮೆಯಿಲ್ಲ. ಆದ್ದರಿಂದ ಮಲ್ಲಜ್ಜನ ಮಳಿಗೆ ಒಂದು ಜನಪ್ರಿಯ 'ಜನತಾ ನ್ಯಾಯಾಲಯ' ಇದ್ದಂತೆ!.

ನನಗಂತೂ ಈ ಮಳಿಗೆ ಆಶ್ಚರ್ಯದಾಯಕವಾಗಿದೆ. ಇದರ ಬಾಗಿಲು ಸದಾ ತೆರೆದೇ ಇರುತ್ತದೆ. ಮಲ್ಲಜ್ಜ ಅಂಗಡಿಯಲ್ಲೇ ಇರುತ್ತಾನೆ. ಯಾವ ಹೊಸ ಹೊಸ ಬಗೆಯ ಮಿಠಾಯಿ ಚಾಕಲೇಟ್ ಕೇಳಿದರೂ



ಕೊಟ್ಟುಬಿಡುತ್ತಾನೆ. ಯಾವಾಗ ವ್ಯಾಪಾರ ಮಾಡುತ್ತಾನೋ ವಸ್ತುಗಳನ್ನು ಯಾವಾಗ ತರುತ್ತಾನೋ ನನಗೆ ಬಲು ಸೋಜಿಗವಾಗಿದೆ. ಹೀಗಾಗಿ ಮಲ್ಲಜ್ಜನ ಮಳಿಗೆ ನನಗೆ ಒಂದು 'ಜಾದೂಲೋಕವಿದ್ದಂತೆ.'

ಮಲ್ಲಜ್ಜನ ಮಳಿಗೆ ಈಗ ಸ್ವಲ್ಪ ದೊಡ್ಡದಾಗಿದೆ. ಹೊಸ ಹೊಸದಾದ ಪುಸ್ತಕ, ಪೆನ್ನು ಇನ್ನೂ ತುಂಬಾ ವಸ್ತುಗಳು ಬಂದಿವೆ. ಮಲ್ಲಜ್ಜನ ಮಳಿಗೆಯ ಬಗ್ಗೆ ಎಷ್ಟು ಹೇಳಿದರೂ ಸಾಲದೆನಿಸುತ್ತದೆ. ಈಗ ಇಷ್ಟಕ್ಕೆ ಸಾಕುಮಾಡುತ್ತೇನೆ. ಮುಂದಿನ ಪತ್ರದಲ್ಲಿ ಮತ್ತಷ್ಟು ವಿವರ ಬರೆಯುತ್ತೇನೆ. ಇದನ್ನು ಓದಿ ಹಂಗಿಸಬೇಡ. ನನ್ನ ಊರಿಗೆ ಬಂದಾಗ ನಿನಗೆ ಈ ತಂಗುದಾಣದ ದರ್ಶನ ಮಾಡಿಸುತ್ತೇನೆ. ನಿನಗಿಷ್ಟವಾದ ಮಿಠಾಯಿಯನ್ನೂ ಕೊಡಿಸುತ್ತೇನೆ.

ಅಣ್ಣನು ಮಾಡುವ ಆಶೀರ್ವಾದಗಳು–

ನಿನ್ನ ಪ್ರೀತಿಯ ಸಹೋದರ,
ಸೃಜನ್

ಇವರಿಗೆ

ಕುಮಾರಿ ಸೌಜನ್ಯ,
೫ನೆಯ ತರಗತಿ,
ಹಿರಿಯ ಪ್ರಾಥಮಿಕ ಶಾಲೆ,
ನಂ.೧೦ ವಿದ್ಯಾನಗರ,
ಉತ್ತರಕನ್ನಡ.

ಕ್ಷೇತ್ರ	:	ಬರೆಯುವುದು
ಸಾಮರ್ಥ್ಯ	:	ಅನೌಪಚಾರಿಕ ಪತ್ರ ಮತ್ತು ಚಿಕ್ಕ ಪ್ರಬಂಧಗಳನ್ನು ಸ್ವತಂತ್ರವಾಗಿ ರಚಿಸುವುದು.

ಆಶಯ

ಸಮಾಜದಲ್ಲಿ ಕೆಲವರ ಜೀವನ ಆದರ್ಶಪ್ರಾಯ. ಅಂಥವರು ಇತರರ ಸಹಾಯಕ್ಕಾಗಿಯೇ ತಾವು ಇರುವುದು ಎಂಬಂತೆ ಜೀವನ ಸಾಗಿಸುತ್ತಾರೆ. ಅವರು ಸಾಮಾನ್ಯ ಜನರ ನಡುವೆ ಸಾಮಾನ್ಯರಂತೆ ಬಾಳುತ್ತಾರೆ. ಆದರೆ ದಾರ್ಶನಿಕರ ಗುಣಗಳನ್ನು ಮೈಗೂಡಿಸಿಕೊಂಡಿರುತ್ತಾರೆ. ಅಂಥ ವ್ಯಕ್ತಿಗಳನ್ನು ಗುರುತಿಸಿ, ಮೆಚ್ಚಿ, ಪ್ರಶಂಸಿಸಬೇಕೆಂಬುದು ಇಲ್ಲಿನ ಆಶಯವಾಗಿದೆ.



ಅ. ಅರ್ಥ ತಿಳಿ

ಆಶೀರ್ವಾದ–ಹಾರೈಕೆ. ಪತ್ರ–ಓಲೆ, ಕಾಗದ. ತಲುಪು–ಮುಟ್ಟು, ಸೇರು. ವಿಶೇಷ – ಹೆಚ್ಚಿನ ಗುಣ, ಹೆಚ್ಚುಗಾರಿಕೆ. ಗೊತ್ತು – ಪರಿಚಯ, ತಿಳಿದಿರುವುದು. ಪ್ರಸಿದ್ಧ – ಹೆಸರಾದ, ಕೀರ್ತಿಪಡೆದ. ಮಾಲ್ – ಮಳಿಗೆ, ಅಂಗಡಿ. ದರ್ಶನ – ಭೇಟಿ, ಕಾಣುವಿಕೆ. ದುಡ್ಡು – ರೊಕ್ಕ, ಹಣ. ಪುಟಾಣಿ – ಹುರಿಗಡಲೆ, ಸಣ್ಣವನು. ಪಡೆ – ಗಳಿಸು, ದೊರಕಿಸು. ತುರ್ತು – ಜರೂರು, ಕೂಡಲೆ. ಹೊಸಬರು – ಅಪರಿಚಿತರು, ಗುರುತಿಲ್ಲದವರು. ಕುಟುಂಬ – ಮನೆತನ, ಒಕ್ಕಲು. ಸಮೇತ – ಕೂಡಿದ, ಸಹಿತವಾದ. ಯಥಾವತ್ತಾಗಿ – ಸರಿಯಾಗಿ, ಇದ್ದಹಾಗೆ. ಪತ್ರಿಕೆ – ನಿಯತಕಾಲಿಕ, ಬರೆದ ಕಾಗದ. ಉಚಿತ – ಪುಕ್ಕಟೆ, ಧರ್ಮಾರ್ಥ. ಸಮಸ್ಯೆ – ತೊಡಕಾದ ವಿಷಯ, ಜಟಿಲಪ್ರಶ್ನೆ. ಪರಿಹರಿಸು – ಪರಿಹಾರ ಮಾಡು, ನಿವಾರಿಸು. ದೂರಮಾಡು–ತೆಗೆದು ಹಾಕು, ದೂರಸರಿಸು. ಚಪ್ಪಡಿಕಲ್ಲು – ಚಪ್ಪಡಿ, ಹಾಸುಗಲ್ಲು. ಸಾಕ್ಷಿ– ಕಣ್ಣಾರೆ ಕಂಡವ, ಪುರಾವೆ. ತೀರ್ಪು – ನಿರ್ಣಯ, ತೀರ್ಮಾನ. ಶೀಘ್ರ–ವೇಗ, ತ್ವರೆ. ಪ್ರಕರಣ – ಸಂಗತಿ, ಪ್ರಸಂಗ. ಬಗೆಹರಿ – ನೆರವೇರು, ಕೈಗೂಡು. ಶುಲ್ಕ – ಸುಂಕ, ದಂಡ. ಸೋಜಿಗ–ಆಶ್ಚರ್ಯ, ಕುತೂಹಲ. ಹಂಗಿಸು–ಕೆಣಕು, ಮೂದಲಿಸು .

ಆ. ವಿವರ ತಿಳಿ

ಸಹೋದರಿ : ಅಕ್ಕ ಅಥವಾ ತಂಗಿ, ಒಡಹುಟ್ಟಿದವಳು.

ಚಿರಪರಿಚಿತ : ದೀರ್ಘಕಾಲದ ಪರಿಚಯವುಳ್ಳವನು, ಎಲ್ಲರಿಗೂ ಗೊತ್ತಿರುವಾತ.

ತಂಗುದಾಣ : ತಾತ್ಕಾಲಿಕವಾಗಿ ಉಳಿದುಕೊಳ್ಳುವ ಜಾಗ.

ಸಹಕಾರ : ಪರಸ್ಪರ ಸಹಾಯ, ಒಗ್ಗಟ್ಟಿನಿಂದ ಕೆಲಸಮಾಡುವಿಕೆ.

ಜಾತಕ ಸಮೇತ : ಸವಿವರವಾದ ಮಾಹಿತಿಯಿಂದ ಕೂಡಿದ, ಜನ್ಮಕುಂಡಲಿ ವಿವರಗಳಿಂದ ಕೂಡಿದ.

ಸಂಪರ್ಕ ಕೇಂದ್ರ : ಸಂಬಂಧ ಕಲ್ಪಿಸುವ ಸ್ಥಳ, ಸೇರುವ ಮುಖ್ಯಸ್ಥಳ.

ಕೋರ್ಟ್ : ನ್ಯಾಯಕ್ಕಾಗಿ ವಿಚಾರಣೆ ನಡೆಸುವ ಸ್ಥಳ, ನ್ಯಾಯಾಲಯ.

ಜನಪ್ರಿಯ : ಜನರ ಮೆಚ್ಚುಗೆಗೆ ಪಾತ್ರವಾದ.

ಜಾದೂಲೋಕ : ಇಂದ್ರಜಾಲ ನಡೆಯುವ ಸ್ಥಳ, ಮಾಯಾವಿದ್ಯೆಯ ಪ್ರಪಂಚ.



ಇ. ಕೆಳಗಿನ ಪ್ರಶ್ನೆಗಳಿಗೆ ಉತ್ತರ ಹೇಳಿರಿ.

೧. ಸೃಜನ್ ಯಾರಿಗೆ ಪತ್ರವನ್ನು ಬರೆದನು ?
೨. ಯಾರಿಗೆ ಮಿಠಾಯಿ ಎಂದರೆ ಇಷ್ಟ?
೩. ಮಲ್ಲಜ್ಜ ಎಲ್ಲರೊಂದಿಗೆ ಹೇಗೆ ಮಾತನಾಡುತ್ತಾನೆ?
೪. ಮಲ್ಲಜ್ಜನ ಕೋರ್ಟಿನಲ್ಲಿ ವಕೀಲರ ಶುಲ್ಕ ಎಷ್ಟು?
೫. ಸೃಜನ್‌ಗೆ ಮಲ್ಲಜ್ಜನ ಮಳಿಗೆ ಯಾವ ಲೋಕದಂತೆ ತೋರಿದೆ?

ವ್ಯಾಕರಣ ಮಾಹಿತಿ

ಅ. ಪತ್ರಲೇಖನ

ನಾವು ಸಾಮಾನ್ಯವಾಗಿ ಇನ್ನೊಬ್ಬರ ಜೊತೆ ಮಾತಿನ ಮೂಲಕ ವಿಷಯ, ಅಭಿಪ್ರಾಯಗಳನ್ನು ಹಂಚಿಕೊಳ್ಳುತ್ತೇವೆ. ಅವರು ನೇರವಾಗಿ ಸಂಪರ್ಕಕ್ಕೆ ಸಿಗದಿದ್ದಾಗ ಅಂತಹ ಸಂದರ್ಭಗಳಲ್ಲಿ ಬರವಣಿಗೆಯ ಮೂಲಕ ಅವರಿಗೆ ವಿಷಯಗಳನ್ನು ತಿಳಿಸುತ್ತೇವೆ.

ಹೀಗೆ ಸಂಗತಿ, ವಿಚಾರ, ವಿಷಯಗಳನ್ನು ಇನ್ನೊಬ್ಬರ ಜೊತೆ ಬರವಣಿಗೆಯ ಮೂಲಕ ಹಂಚಿಕೊಳ್ಳುವುದು ಇಲ್ಲವೇ ತಿಳಿಸುವುದನ್ನು 'ಪತ್ರಲೇಖನ' ಎನ್ನುತ್ತೇವೆ. ಪತ್ರ ಎಂದರೆ ಕಾಗದ, ಓಲೆ, ಬರೆದ ಕಾಗದ ಎಂಬ ಅರ್ಥಗಳಿವೆ.

೧. ಪತ್ರಗಳ ಕೆಲವು ವಿಧಗಳು:

೧. ವೈಯಕ್ತಿಕ ಪತ್ರಗಳು.
೨. ಮನವಿ ಪತ್ರಗಳು.
೩. ಆಡಳಿತ ವಿಷಯಗಳಿಗೆ ಸಂಬಂಧಿಸಿದ ಪತ್ರಗಳು.
೪. ಜಾಹಿರಾತು ಮತ್ತು ಪ್ರಕಟಣೆ ಪತ್ರಗಳು.
೫. ವಿವಿಧ ಸಂಗ್ರಹಣೆ ಹಾಗೂ ಪತ್ರಿಕಾವರದಿ ಪತ್ರಗಳು.

೨. ಪತ್ರ ಬರೆಯುವಾಗ ಅನುಸರಿಸಬೇಕಾದ ಸಾಮಾನ್ಯ ನಿಯಮಗಳು:

೧. ಪತ್ರದ ಮೇಲ್ಭಾಗದಲ್ಲಿ ದಿನಾಂಕ, ಹೆಸರು, ವಿಳಾಸವಿರಬೇಕು.

೨. ಸೂಕ್ತವಾದ ಸಂಬೋಧನೆ ಬರೆಯುವುದು.

೩. ವಿಷಯಗಳನ್ನು ಅರ್ಥವತ್ತಾಗಿ ಸರಳ ಶೈಲಿಯಲ್ಲಿ ಬರೆಯಬೇಕು.



೪. ಔಚಿತ್ಯಪೂರ್ಣವಾದ ಕೋರಿಕೆ, ಹಾರೈಕೆ ಇರಬೇಕು. ಉದಾ: ಇತಿ ನಮಸ್ಕಾರ, ಇತಿ ಆಶೀರ್ವಾದ.

೫. ಪತ್ರದ ಕೊನೆಯಲ್ಲಿ ಸಹಿ ಹಾಕಬೇಕು.

೬. ಕವರು ಅಥವಾ ಕಾರ್ಡಿನ ಮೇಲ್ಭಾಗದಲ್ಲಿ ಪತ್ರ ತಲುಪಬೇಕಾದ ವಿಳಾಸವನ್ನು ಬರೆಯಬೇಕು.

೭. ಕವರಿನ ಇನ್ನೊಂದು ಬದಿಯಲ್ಲಿ ಕಳುಹಿಸುವವರ ವಿಳಾಸವನ್ನು ಚಿಕ್ಕದಾಗಿ ಬರೆಯಬೇಕು.

೮. ಬರವಣಿಗೆ ಅಂದವಾದ ಶೈಲಿಯಲ್ಲಿ, ಆಕರ್ಷಕವಾಗಿ ಇರಬೇಕು.

೩. ಸಂಬೋಧನೆಗಳು:

ತಂದೆಗೆ	–	ತೀರ್ಥರೂಪ
ತಾಯಿಗೆ	–	ಮಾತೃಶ್ರೀ
ಗುರುಗಳಿಗೆ	–	ಪೂಜ್ಯ
ಗೆಳೆಯ/ಗೆಳತಿಗೆ	–	ಆತ್ಮೀಯ, ನಲ್ಮೆಯ, ಪ್ರೀತಿಯ
ಚಿಕ್ಕಪ್ಪ/ದೊಡ್ಡಪ್ಪನಿಗೆ	–	ತೀರ್ಥರೂಪ ಸಮಾನ
ಚಿಕ್ಕಮ್ಮ/ದೊಡ್ಡಮ್ಮನಿಗೆ	–	ಮಾತೃಶ್ರೀ ಸಮಾನ
ಕಿರಿಯರಿಗೆ	–	ಚಿರಂಜೀವಿ

ಹೀಗೆ ವೈಯಕ್ತಿಕ ಪತ್ರಗಳನ್ನು ಬರೆಯುವಾಗ ಬೇರೆ ಬೇರೆ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಸೂಕ್ತವಾದ ಸಂಬೋಧನೆಗಳನ್ನು ಬಳಸುತ್ತೇವೆ. ಇದು ನಾವು ಅವರಿಗೆ ತೋರಿಸುವ ಗೌರವವನ್ನು ಸೂಚಿಸುತ್ತದೆ.

ಆ. ಓದಿಗೆ ಮನ್ನಣೆ.

೧. ಸಮಾಜ ಸುಧಾರಕರ ಸಾಧನೆಗಳ ಕುರಿತು ಓದಿರಿ.

೨. ನಿಮ್ಮ ಊರಿನ ಸಮಾಜ ಸೇವಕರ ಕಾರ್ಯಗಳ ಬಗ್ಗೆ ತಿಳಿಯಿರಿ.

೩. ವಿವಿಧ ಪುಸ್ತಕ ಮಳಿಗೆಗಳ ಪರಿಚಯ ಮಾಡಿಕೊಳ್ಳಿರಿ.

೪. ಮಾಲ್‌ಗಳಲ್ಲಿ ದೊರಕುವ ವಸ್ತುಗಳ ಬಗ್ಗೆ ಅರಿತುಕೊಳ್ಳಿರಿ.

ಇ. ಶುಭ ನುಡಿ.

೧. ಜನಸೇವೆಯಿಂದ ಜನಮನ್ನಣೆ ದೊರಕುತ್ತದೆ.

೨. ವೃತ್ತಿಯೊಂದಿಗೆ ಸೇವೆಯೂ ಉತ್ತಮವಾದ ಪ್ರವೃತ್ತಿ.

೩. ಎಲ್ಲರೊಳಗೊಂದಾಗುವ ಬಾಳು ಆದರ್ಶದ ಬಾಳು.

೪. ಅನುಭವದ ನುಡಿಗಳು ಬದುಕಿಗೆ ದಾರಿದೀಪ.

ಮೆಚ್ಚಿನ ಗೊಂಬೆ

ಅಮ್ಮ ನಂಗೆ ಪುಟ್ಟದೊಂದು ಗೊಂಬೆ ತಂದ್ಕೊಡೆ
ಗೊಂಬೆ ಜೊತೆ ಆಡುವೆ, ಆಡಿ ಪಾಡಿ ನಲಿಯುವೆ



ಗೊಂಬೆಯೆಂದರೆ ಮಕ್ಕಳಿಗೆ ಬಲು ಪ್ರೀತಿ. ಚಿಕ್ಕಮಕ್ಕಳಿಗೆ ಪ್ರಮುಖ ಆಸ್ತಿ. ದೊಡ್ಡವರೂ ಸಹ ಗೊಂಬೆಗಳನ್ನು ಆಡಿಸಿ ನಲಿಯುತ್ತಾರೆ. ಹಠ ಮಾಡಿ ಅಳುತ್ತಿದ್ದ ಮಕ್ಕಳಿಗೆ ಗೊಂಬೆ ಕೊಟ್ಟರೆ ಸಾಕು ಗಪ್‌ಚುಪ್. ಗೊಂಬೆಗಳು ಮಕ್ಕಳ ಕೈಯಲ್ಲಿ ಮಕ್ಕಳಾಗಿಬಿಡುತ್ತವೆ.

ಗೊಂಬೆ ಕಂಡರೆ ಸಾಕು, ಮಕ್ಕಳ ಮುಖದಲ್ಲಿ ನಗು. ಚಿಕ್ಕ ಮಕ್ಕಳು ಎತ್ತಿ, ಬಿಸಾಡಿ, ನೂಕಿ, ಎಳೆದು, ಜಗ್ಗಿ ನಲಿಯುತ್ತಾರೆ. ಸ್ವಲ್ಪ ಸ್ವಲ್ಪ ದೊಡ್ಡವರಾದಂತೆ ಗೊಂಬೆಗಳನ್ನು ಮುದ್ದಿಸುತ್ತಾರೆ. ತಾಯಿ ತಮ್ಮನ್ನೆಲ್ಲ ಹೇಗೆ ಪೋಷಣೆ ಮಾಡುತ್ತಾಳೋ ಹಾಗೆಯೇ ಮಕ್ಕಳು ಗೊಂಬೆಗಳನ್ನು ನೋಡಿಕೊಳ್ಳುತ್ತಾರೆ. ಅವುಗಳಿಗೆ ತಿಂಡಿ ತಿನ್ನಿಸುವುದು, ಸ್ನಾನ ಮಾಡಿಸುವುದು, ಮಲಗಿಸಿ ಲಾಲಿ ಹಾಡುವುದು, ಬಟ್ಟೆ ತೊಡಿಸುವುದು, ಶೃಂಗಾರ ಮಾಡುವುದು–ಹೀಗೆ ಎಲ್ಲವನ್ನೂ ಪ್ರೀತಿಯಿಂದ ಮಾಡುತ್ತಾರೆ.

ಮಕ್ಕಳ ಕೈಯಲ್ಲಿ ಗೊಂಬೆಗಳಿಗೆ ಜೀವ ಬರುತ್ತದೆ. ಯಾರಾದರೂ ತಮ್ಮ ಗೊಂಬೆಗಳಿಗೆ ಕೀಟಲೆ ಮಾಡಿದರೆ ಮಕ್ಕಳು ಸುಮ್ಮನಿರುವುದಿಲ್ಲ. ಗೊಂಬೆಗೆ ನೋವಾಯಿತೆಂದು ಎತ್ತಿ ಮುದ್ದಾಡಿ ಸಮಾಧಾನ ಮಾಡುತ್ತಾರೆ. ಕೈಜಾರಿದ ಗೊಂಬೆ ಕೆಳಕ್ಕೆ ಬಿದ್ದರಂತೂ ಮಕ್ಕಳು ಅತ್ತೇ ಬಿಡುತ್ತಾರೆ! ಅದನ್ನು ಎತ್ತಿಕೊಂಡು ಹಾಡು ಹೇಳಿ ಸಮಾಧಾನ ಮಾಡುತ್ತಾರೆ.

ಅಳಬೇಡ ಅಳಬೇಡ ಗೊಂಬವ್ವ ನೀನು
ಜರತಾರಿ ಲಂಗ ಕೊಡಿಸುವೆನು ನಾನು

ಗೊಂಬೆಗಳನ್ನು ವಿವಿಧ ವಸ್ತುಗಳಿಂದ ತಯಾರಿಸುತ್ತಾರೆ. ಮರ, ಮಣ್ಣು, ಪ್ಲಾಸ್ಟಿಕ್, ರಬ್ಬರ್, ಪಿಂಗಾಣಿ, ಬಟ್ಟೆ, ಹತ್ತಿ, ಬಿದಿರು, ಕಾಗದಗಳಿಂದ ಗೊಂಬೆಗಳು ಸಿದ್ಧವಾಗುತ್ತವೆ. ಇತ್ತೀಚೆಗೆ ಗೊಂಬೆಗಳು ವಿವಿಧ ರೂಪಗಳನ್ನು ಪಡೆದಿವೆ. ಮನುಷ್ಯ, ಪ್ರಾಣಿ, ಪಕ್ಷಿ, ಕೀಟ ಎಲ್ಲ ರೂಪಗಳಲ್ಲೂ ಜನ್ಮತಾಳಿವೆ. ವಿವಿಧ ವಸ್ತುಗಳಲ್ಲೂ ಗೊಂಬೆಯ ರೂಪ! ಗೊಂಬೆಯ ಪೆನ್ಸಿಲ್, ಗೊಂಬೆಯ ಪೆನ್ನು, ಗೊಂಬೆಯ ತಿಂಡಿತಿನಿಸುಗಳು ಹೀಗೆ ಎಲ್ಲದರಲ್ಲೂ ಗೊಂಬೆ ಕಾಣಸಿಗುತ್ತದೆ.



ಜಾತ್ರೆ ಉತ್ಸವಗಳಲ್ಲಿ ಗೊಂಬೆಗಳದ್ದೇ ಆಕರ್ಷಣೆ. ವೈವಿಧ್ಯಮಯ ಗೊಂಬೆಗಳು ಅಂಗಡಿಗಳಲ್ಲಿ ಕೈ ಬೀಸಿ ಕರೆಯುತ್ತವೆ. ಉತ್ಸವಗಳಲ್ಲಿ ಕುಣಿಯುವ ಗೊಂಬೆಗಳನ್ನು ನೋಡುವುದು ಎಲ್ಲಿಲ್ಲದ ಆನಂದ! ಅವುಗಳನ್ನು ನೋಡಿದರೆ ಹರ್ಷ -ನಗು ಒಟ್ಟಿಗೇ ಬರುತ್ತವೆ. ಜೋಕರ್ ಗೊಂಬೆಗಳಂತೂ ತಾನೂ ನಗುತ್ತ ಎಲ್ಲರನ್ನೂ ನಗಿಸುತ್ತವೆ.

ನಮ್ಮ ನಾಡಹಬ್ಬ ದಸರಾದಲ್ಲಿ ಮನೆ-ಮನೆಗಳಲ್ಲೂ ಗೊಂಬೆಗಳನ್ನು ಅಲಂಕರಿಸುತ್ತಾರೆ. ಅಲಂಕರಿಸಿದ ನೂರಾರು ಗೊಂಬೆಗಳನ್ನು ಒಟ್ಟಿಗೆ ನೋಡುವುದೇ ಒಂದು ಹಬ್ಬ! ಅವುಗಳ ಶೃಂಗಾರ, ಜೋಡಣೆ ಅಲಂಕಾರ ಬಲು ಸುಂದರ. ಸ್ಪ್ರಿಂಗ್ ಗೊಂಬೆಗಳು, ಕೀಗೊಂಬೆಗಳು, ಕೀಲು ಗೊಂಬೆಗಳು, ಯಂತ್ರಗೊಂಬೆಗಳು, ಸಣ್ಣ ದೊಡ್ಡ ವಿವಿಧ ರಂಗಿನ ಗೊಂಬೆಗಳು ವಿವಿಧ ಆಟಗಳ ಮೂಲಕ ಸಂತೋಷಕೊಡುತ್ತವೆ. ನಿಜವಾಗಿ ಜೀವವಿದ್ದವುಗಳಂತೆ ವರ್ತಿಸುತ್ತವೆ.

ಎಲ್ಲರ ಮನೆಗಳಲ್ಲೂ ಗೊಂಬೆಗಳು ಸ್ಥಾನಪಡೆದಿವೆ. ಗೊಂಬೆಗಳು ಮನುಷ್ಯನಿಗೆ ಅನೇಕ ರೀತಿಯಲ್ಲಿ ಜೀವನ ಪಾಠವನ್ನೂ ಹೇಳುತ್ತವೆ! ಗೊಂಬೆಗಳು ಯಾರ ಹೊಗಳಿಕೆಗೂ ತೆಗಳಿಕೆಗೂ ಜಗ್ಗುವುದಿಲ್ಲ!

ಆಡಿಸಿ ನೋಡು ಬೀಳಿಸಿ ನೋಡು ಉರುಳಿಹೋಗದು
ಏನೇ ಬರಲಿ ಯಾರಿಗೆ ಸೋತು ತಲೆಯಬಾಗದು

ಪ್ರಶ್ನೆಗಳಿಗೆ ಉತ್ತರ ಹೇಳಿರಿ

1. ಗೊಂಬೆಗಳನ್ನು ಯಾವ ಯಾವ ವಸ್ತುಗಳಿಂದ ತಯಾರಿಸುತ್ತಾರೆ ?
2. ಗೊಂಬೆಗೆ ನೋವಾದರೆ ಮಕ್ಕಳು ಏನು ಮಾಡುತ್ತಾರೆ?
3. ಅಳುವ ಗೊಂಬೆಗೆ ಮಕ್ಕಳು ಏನೆಂದು ಹಾಡಿ ಸಮಾಧಾನ ಮಾಡುತ್ತಾರೆ?
4. ಯಾವ ಹಬ್ಬದಂದು ಮನೆಗಳಲ್ಲಿ ಗೊಂಬೆಗಳನ್ನು ಅಲಂಕರಿಸುತ್ತಾರೆ?
5. ಗೊಂಬೆಗಳು ಯಾವ ಯಾವ ರೂಪಗಳಲ್ಲಿ ಜನ್ಮ ತಾಳಿವೆ?



ನೇಗಿಲ ಯೋಗಿ



ಭೂಮಿಗಿಳಿದು ಬಂದನೊಬ್ಬ ದೇವದೂತ
ಕಾಯಕದ ಮಂತ್ರವನ್ನು ನಿತ್ಯ ಪಠಿಸುತ
ಸ್ವರ್ಗಬೇರೆ ಉಂಟೆ ಮರುಳೆ ಎಂದು ಕೇಳುತ
ಬಂದನದೊ ಬಂದನದೊ ನಮ್ಮ ರೈತ ॥೧॥

ಕೋಟಿ ಕೋಟಿ ಕೈಯ ಪಿಡಿದ ಯೋಗಿ ಈತ
ರೈತ ಬೆನ್ನಮೂಳೆ ಎಂದ ಗಾಂಧಿತಾತ
ಸಕಲ ಜೀವರಾಶಿಗಳಿಗೆ ಅನ್ನ ನೀಡುತ
ಬಂದನದೊ ಬಂದನದೊ ನಮ್ಮ ರೈತ ॥೨॥

ಹರ ಗುರು ಮುನಿದರೂ ಕಾಯ್ವನೀತ
ಏರಿಗೆಳೆವ ಎತ್ತ ಹಂತಿ ಕಟ್ಟಿ ಹಾಡುತ
ನೀತಿ ರಾಗೋಲಿನಿಂದ ಕಂಕಿ ತೆಗೆಯುತ
ಬಂದನದೊ ಬಂದನದೊ ನಮ್ಮ ರೈತ ॥೩॥





ಮೂರುಮಳ ಮೆಟ್ಟನೇರಿ ಮದವ ತೂರುತ
ಸುಂಕ ಕಳೆದು ನಗೆಯ ಬೀರಿ ಸೆಳ್ಳು ಹೊಡೆಯುತ
ರಾಶಿ ಹಸನ ಮಾಡಿ ತುಂಬಿ ಚೀಲ ಹೊಲಿಯುತ
ಬಂದನದೊ ಬಂದನದೊ ನಮ್ಮ ರೈತ ॥೪॥

ರೈತ ಬಂದರೇ ದೇಶಕೆಚ್ಚರಾ
ನಿತ್ಯಹಸಿರು ನೋಡು ನಮ್ಮ ಈ ಭೂಶಿರ
ಜಗದ ತುಂಬ ಸುಖವ ಬೆಳೆವ ದಿವ್ಯರೂಪ
ಬಂದನದೊ ಬಂದನದೊ ನಮ್ಮ ರೈತ ॥೫॥

ಬಿ.ಆರ್. ಪೋಲೀಸ ಪಾಟೀಲ

ಕ್ಷೇತ್ರ : ಆಲಿಸುವುದು.
ಸಾಮರ್ಥ್ಯ : ಆಲಿಸಿದ ವಿಷಯವನ್ನು ಗ್ರಹಿಸಿ, ಹಾಗಾದರೆ? ಹಾಗಾಗದಿದ್ದರೆ? ಪ್ರಶ್ನೆಗಳಿಗೆ ಉತ್ತರಿಸುವುದು.

ಆಶಯ

ನೇಗಿಲಯೋಗಿ, ಕಾಯಕಯೋಗಿ, ದೇಶದ ಬೆನ್ನೆಲುಬು ಎಂದು ಎಲ್ಲರಿಂದ ಪ್ರಶಂಸೆಗೊಳಗಾಗಿರುವಾತನೇ ರೈತ. ಈತನು ಕಾಯಕದಲ್ಲೆ ಕೈಲಾಸ ಕಂಡುಕೊಳ್ಳುತ್ತಾನೆ. ತನ್ನ ಕಾಯಕದ ಪರಿಧಿಯಲ್ಲಿ ಎಷ್ಟು ಒಳ್ಳೆಯದು ಮಾಡಲು ಸಾಧ್ಯವೊ ಅಷ್ಟೆಲ್ಲವನ್ನು ಮಾಡುವ ಈತ ನಿರಹಂಕಾರಿ. ಈತನು ಸಕಲ ಮಾನವರಿಗೆ ಅನ್ನದಾತನಾಗಿದ್ದಾನೆ. ರೈತನ ಜೀವನ ಹಾಗೂ ಆತನ ದುಡಿಮೆಯ ಮೇಲೆ ಬೆಳಕು ಚೆಲ್ಲುವುದು ಇಲ್ಲಿನ ಆಶಯವಾಗಿದೆ.

ಕವಿ ಪರಿಚಯ



ಬಿ.ಆರ್. ಪೋಲೀಸಪಾಟೀಲರು ೧೯೫೦ ಜೂನ್ ೧೧ರಂದು ವಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ 'ಹಿರೂರು' ಗ್ರಾಮದಲ್ಲಿ ಜನಿಸಿದರು. ಉಪನ್ಯಾಸ ವೃತ್ತಿಯನ್ನು ಬಾಗಲಕೋಟ ಜಿಲ್ಲೆಯ ಜಮಖಂಡಿ ತಾಲೂಕಿನ ಬನಹಟ್ಟಿಯ ಎಸ್.ಆರ್.ಎ. ಪದವಿಪೂರ್ವ ಕಾಲೇಜಿನಲ್ಲಿ ೧೯೭೩ ರಲ್ಲಿ ಪ್ರಾರಂಭಿಸಿದರು. ೨೦೦೪ ರಿಂದ ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿ ೨೦೦೮ರಲ್ಲಿ ನಿವೃತ್ತಿಯಾದರು.

ಕನ್ನಡದಲ್ಲಿ ಸುಮಾರು ೨೦ ನಾಟಕಗಳ ರಚನೆ ಮಾಡಿದ್ದಾರೆ. ಇವರು ರಚಿಸಿದ ಲಾವಣಿ ಕೃತಿಗಳು 'ಸತ್ಯದ ಗುಡಿಯ ಸುತ್ತ,' 'ಹೂಗಳಿವೆ ನಿಧಾನ' ಇತ್ಯಾದಿ. ೧೯೯೩ ರ ಕರ್ನಾಟಕ ಜಾನಪದ ಅಕಾಡಮಿಯ ವಿಶೇಷ ಪುರಸ್ಕಾರ, ೨೦೧೧ರ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಡಾ. ಸಿಂಪಿ ಲಿಂಗಣ್ಣ ಪ್ರಶಸ್ತಿ ಮುಂತಾದ ಹಲವು ಪ್ರಶಸ್ತಿಗಳು ಇವರಿಗೆ ಸಂದಿವೆ. 'ಹೆಂತಾ ಚಂದಿತ್ತ ಹಿಂದುಸ್ತಾನ' ಕೃತಿಯಿಂದ ಈ ಹಾಡನ್ನು ಆರಿಸಲಾಗಿದೆ.

ಅ. ಅರ್ಥ ತಿಳಿಯಿರಿ.

ಮರುಳೆ– ಹುಚ್ಚನೆ. ಪಠಿಸು–ಮತ್ತೆ ಮತ್ತೆ ಹೇಳು. ಕಾಯ್ವನ್–ರಕ್ಷಿಸುವವನು, ಕಾಯಕ–ಕೆಲಸ,ದುಡಿಮೆ. ಏರಿಗೆಳೆ–ಅಡ್ಡದಾರಿಗೆ ಎಳೆ. ಮಳ–ಮೊಳ, ಒಂದು ಅಳತೆ. ಹಸನು–ಸ್ವಚ್ಛ. ಭೂಶಿರ–ಭೂಭಾಗ.

ಆ. ವಿವರ ತಿಳಿಯಿರಿ.

ರಾಗೋಲು : ಕಟ್ಟಿಗೆಯ ಹಲ್ಲುಗಳಿರುವ ಉದ್ದಕೋಲಿನ ಒಂದು ಕೃಷಿ ಸಾಧನ, ಕಂಕಿ ತೆಗೆಯಲು ಉಪಯೋಗಿಸುವರು.

ಮೆಟ್ಟು : ಮೆಟ್ನಾಲಿಗೆ, ರಾಶಿತೂರಿ ಕಾಳು ಹಸನು ಮಾಡಲು ಉಪಯೋಗಿಸುವ ಮೂರು ಕಾಲಿನ ಸಾಧನ.

ಹಂತಿ : ಮೇಟಿ (ಆಧಾರ ಕಂಬ)ಯ ಸುತ್ತ ಎತ್ತು ಕಟ್ಟಿ ತುಳಿಸಿ, ತೆನೆಯಿಂದ ಧಾನ್ಯ ಬೇರ್ಪಡಿಸುವ ಕ್ರಿಯೆ.

ಕಂಕಿ : ಬರಿತೆನೆ, ಕಾಳು ಬಿಚ್ಚಿದ ನಂತರ ಉಳಿದ ಖಾಲಿತೆನೆ.

ಮದ : ಹಂತಿ ತುಳಿದಾದ ಮೇಲೆ ಉಳಿಯುವ ರಾಶಿ.

ಸುಂಕ : ಕಾಳಿನೊಂದಿಗೆ ಬೆರೆತಿರುವ ದೂಳು.

ಸೆಳ್ಳು : ಉತ್ತರಾಣಿ ಕಡ್ಡಿಯ ಕಸಬರಿಕೆ, ಒಂದು ಜಾತಿಯ ಕಸಬರಿಕೆ.

ಸೆಳ್ಳು ಹೊಡೆ : ಕಾಳಿನ ಜೊತೆ ಬರುವ ಹೊಟ್ಟನ್ನು ಕಸಬರಿಕೆಯಿಂದ ಗುಡಿಸುವುದು.



ಆ. ಕೆಳಗಿನ ಪ್ರಶ್ನೆಗಳಿಗೆ ಉತ್ತರ ಹೇಳಿರಿ.

೧) ಗಾಂಧಿತಾತ ರೈತನ ಬಗ್ಗೆ ಏನು ಹೇಳಿದರು?
೨) ಯಾವುದರಿಂದ ಕಂಕಿ ತೆಗೆಯುವರು?
೩) ರೈತನು ಮದವನ್ನು ಎಲ್ಲಿ ನಿಂತು ತೂರುತ್ತಾನೆ?
೪) ರೈತನು ಸುಂಕ ಕಳೆದು ಏನು ಹೊಡೆಯುವನು?
೫) ನೇಗಿಲಯೋಗಿ ಪದ್ಯವನ್ನು ಯಾವ ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿದೆ?

ವ್ಯಾಕರಣ ಮಾಹಿತಿ

ಅ. ಕ್ರಿಯಾಪದ

ಕರ್ತೃವಿನ ಕ್ರಿಯೆಯನ್ನು ಹೇಳುವ ಪದವೇ ಕ್ರಿಯಾಪದ. ಇದು ಕರ್ತೃವು ಮಾಡುವ ಕೆಲಸವನ್ನು ತಿಳಿಸುವುದರಿಂದ ವಾಕ್ಯದಲ್ಲಿ ಪ್ರಧಾನ ಪಾತ್ರ ವಹಿಸುತ್ತದೆ.

ಉದಾ: ರಾಮನು ನದಿಯಲ್ಲಿ ಈಜಿದನು.
ಇಲ್ಲಿ 'ಈಜು' ಪದವು ಕ್ರಿಯೆಯನ್ನು ಸೂಚಿಸುತ್ತದೆ.

ಕೆಳಗಿನ ವಾಕ್ಯಗಳಲ್ಲಿ ಕಂಡುಬರುವ ಕ್ರಿಯಾಪದಗಳನ್ನು ಓದಿ ತಿಳಿಯಿರಿ:

೧. ರೈತನು ಗದ್ದೆಯಲ್ಲಿ ದುಡಿಯುವನು.
೨. ರೈತನು ಭತ್ತವನ್ನು ಚೀಲದಲ್ಲಿ ತುಂಬುವನು.
೩. ಎತ್ತುಗಳು ಗದ್ದೆಯಲ್ಲಿ ನೇಗಿಲನ್ನು ಎಳೆಯುವವು.

ಆ. ಓದಿಗೆ ಮನ್ನಣೆ

೧. ಈ ಪದ್ಯವನ್ನು ಸಾಮೂಹಿಕವಾಗಿ ಹಾಡಿರಿ.
೨. ಈ ಪದ್ಯದಲ್ಲಿ ಬರುವ ಕ್ರಿಯೆಗಳನ್ನು ಅಭಿನಯದೊಂದಿಗೆ ರಾಗ ಬದ್ಧವಾಗಿ ಹಾಡಿರಿ.
೩. ಭತ್ತದ ಕೃಷಿ ಮಾಡುವ ವಿವರಗಳನ್ನು ನೋಡಿ, ಕೇಳಿ ತಿಳಿಯಿರಿ.

ಇ. ಶುಭನುಡಿ

೧. ಕಾಯಕವೇ ಕೈಲಾಸ.
೨. ದುಡಿಮೆಯೇ ಜೀವನದ ಬಹುಮುಖ್ಯ ಗುರಿ.
೩. ರೈತನೇ ದೇಶದ ಬೆನ್ನೆಲುಬು.

ಪೂರಕ ಪಾಠ : ನನ್ನ ರಟ್ಟೆಯ ಬಲವು ಹಿಗ್ಗುತಿರಲಿ



ನನಗೆ ಹಂಬಲವೊಂದೆ
ದುಡಿದೆ ದುಡಿವುದೆ ಸತತ
ಲೆಕ್ಕಿಸದೆ ದುಃಖವನು
ಎಲುಬು, ಕಬ್ಬಿಣದಂತೆ ಗಟ್ಟಿಗೊಳಲಿ

ಈ ಹಗಲು ಇನ್ನಷ್ಟು ಉದ್ದವಾಗಲಿ,
ಮಣ್ಣಿನಲಿ, ಕಣ್ಣಿನಲಿ
ಗದ್ದೆಯಲಿ, ಗೆಡ್ಡೆಯಲಿ
ಸುರಿಸುವೆನು ಬೆಮರು ಹೊಳೆ
ನಾ ದುಡಿವ ನಾಡ ನೆಲ ಹಿರಿದಾಗಲಿ!
ನನ್ನ ಹೆಮ್ಮೆಗೆ ಸದಾ ಗರಿಯೊಡೆಯುತಿರಲಿ,

ನೆಲಕೆ ಗೆಯ್ಯುವ ಕರ್ಮ
ನನ್ನ ಜೀವನ ಧರ್ಮ
ಅಖಂಡ ಕಾಯಕ ತಪಸು
ಮಣ್ಣ ಕಣ ಕಣ ನನ್ನ ಸಿರಿಯಾಗಲಿ

ದುಡಿವುದೊಂದೇ ನಿರಂತರ ಛಲವಾಗಲಿ
ನನ್ನ ಪ್ರಾಮಾಣಿಕತೆಗೆ
ಈ ನೆಲ-ಜಲ-ಬಾನು
ತಕ್ಕಂತೆ ಫಲ ನೀಡಲಿ
ನನ್ನ ರೆಟ್ಟೆಯ ಬಲವು ಹಿಗ್ಗುತಿರಲಿ!

-ಬುದ್ದಣ್ಣ ಹಿಂಗಮಿರೆ

ಪ್ರಶ್ನೆಗಳು

1. ರೈತನ ಹಂಬಲ ಯಾವುದು?
2. ರೈತನ ನಿರಂತರ ಛಲ ಯಾವುದು?
3. ರೈತನು ಯಾವುದಕ್ಕೆ ತಕ್ಕಫಲ ನೀಡಲೆಂದು ಆಶಿಸುತ್ತಾನೆ?
4. ನಾಡನೆಲ ಏನಾಗಲೆಂದು ರೈತ ಹಂಬಲಿಸುತ್ತಾನೆ?
5. ರೈತನು ಯಾವುದು ಸಿರಿಯಾಗಲಿ ಎನ್ನುತ್ತಾನೆ?



ಧೀರ ಸೇನಾನಿ



ಭಾರತದಲ್ಲಿ ಅನೇಕ ಜನ ಮೇಧಾವಿಗಳು, ವೀರಯೋಧರು, ವಿಜ್ಞಾನಿಗಳು, ಸಾಧಕರು ಜನ್ಮ ತಾಳಿದ್ದಾರೆ. ಅಂತಹ ಸಾಧಕರ ಸಾಲಿನಲ್ಲಿ ಧೀರಸೇನಾನಿ ಮಹಾದಂಡನಾಯಕ ಜನರಲ್ ಜಿ.ಜಿ.ಬೇವೂರರು ಒಬ್ಬರು.

ಕರ್ನಾಟಕದ ಬಾಗಲಕೋಟೆ ಜಿಲ್ಲೆಯ ಬೇವೂರ ಗ್ರಾಮದವರಾದ ಸರ್. ಗುರುನಾಥರಾವ್ ಹಾಗು ರುಕ್ಮಿಣಿಬಾಯಿಯವರ ಪುತ್ರನೇ ಗೋಪಾಲರಾವ್. ಇವರು ದಿನಾಂಕ ೧೧.೦೮.೧೯೧೬ ರಂದು ಜನಿಸಿದರು. ತಂದೆಯ ಮಾರ್ಗದರ್ಶನ ತಾಯಿಯ ದೇಶಾಭಿಮಾನಿ ಭಾವನೆಗಳೊಂದಿಗೆ ಗೋಪಾಲರಾಯರು ಬೆಳೆದರು. ರಾಯಲ್ ಇಂಡಿಯನ್ ಮಿಲಿಟರಿ ಕಾಲೇಜಿನಲ್ಲಿ ಮತ್ತು ಇಂಡಿಯನ್ ಮಿಲಿಟರಿ ಅಕಾಡೆಮಿಯಲ್ಲಿ ಸೈನಿಕ ಶಿಕ್ಷಣ ಪಡೆದರು. ಶಿಸ್ತು, ಕಠಿಣ ಶ್ರಮಗಳಿಂದ ತಮ್ಮ ವಿದ್ಯಾರ್ಥಿ ಜೀವನದಲ್ಲಿಯೇ 'ಗೌರವಖಡ್ಗ' ಮತ್ತು ಚಿನ್ನದ ಪದಕಗಳನ್ನು ಪಡೆದುಕೊಂಡ ಕೀರ್ತಿ ಅವರದು. ೧೯೩೭ ರಲ್ಲಿ ಬೇವೂರರು ಭಾರತೀಯ ಸೇನಾಪಡೆ ಸೇರಿದರು.

ಜನರಲ್ ಜಿ.ಜಿ.ಬೇವೂರರೊಳಗಿನ ನಿಜವಾದ ಯೋಧನನ್ನು ದೇಶ ಗುರುತಿಸಿದ್ದು ಬಾಂಗ್ಲಾ ಯುದ್ಧದಲ್ಲಿ. ೧೯೭೧ರಲ್ಲಿ ಬಾಂಗ್ಲಾದೇಶ ಹಾಗು ಪಾಕಿಸ್ತಾನಗಳ ನಡುವೆ ಯುದ್ಧ ನಡೆಯಿತು. ಆ ಯುದ್ಧದಲ್ಲಿ ಪಾಕ್‌ಸೈನಿಕರು ಮಾನವ ಹಕ್ಕುಗಳನ್ನು ಉಲ್ಲಂಘಿಸಿದರು. ಬಾಂಗ್ಲಾ ಸ್ವಾತಂತ್ರ್ಯ ಹೋರಾಟದಲ್ಲಿ ಬಾಂಗ್ಲಾದೇಶಕ್ಕೆ ಭಾರತದ ಸೇನೆ ಸಹಕರಿಸಿತು. ಆಗ ಬೇವೂರರು ಪಶ್ಚಿಮ ಪಾಕಿಸ್ತಾನದ ಕಡೆಗೆ ನುಗ್ಗಿದರು. ಸೇನಾ ತುಕಡಿಯ ಮುಖ್ಯಸ್ಥರಾಗಿ ರಾಜಸ್ಥಾನ ಮತ್ತು ಕಚ್ಛ್‌ದ ದುರ್ಗಮ ಪ್ರದೇಶಗಳಲ್ಲಿ ಸಾವಿರಾರು ಚದರಮೈಲು ಪಾಕ್ ನೆಲವನ್ನು ಆಕ್ರಮಿಸಿಕೊಂಡರು. ಈ ಸಂದರ್ಭದಲ್ಲಿ ಸೇನಾ ಮಹಾದಂಡನಾಯಕರಾಗಿದ್ದ ಫೀಲ್ಡ್ ಮಾರ್ಷಲ್ ಮಾಣಿಕ ಶಹಾ ಅವರು ಬೇವೂರರನ್ನು ಅಭಿಮಾನದಿಂದ ಬಿಗಿದಪ್ಪಿ ಪ್ರಶಂಸಿಸಿದರು. ಬೇವೂರರ ಸಾಹಸ ದೇಶದಲ್ಲಿ ಮನೆಮಾತಾಯಿತು. ಅವರು ತೋರಿದ ಶೌರ್ಯ ಸಾಹಸಕ್ಕೆ ರಾಷ್ಟ್ರಮಟ್ಟದ ಗೌರವವೂ ದೊರೆಯಿತು.

ಕಾಲೇಜು ವಿದ್ಯಾರ್ಥಿಗಳಿಗೆ ಎನ್.ಸಿ.ಸಿ.ಯು ಕಲಿಕೆಯ ಅಂಗವಾದಾಗ ಬೇವೂರರು ಅದರ ಪ್ರಥಮ ನಿರ್ದೇಶಕರಾದರು. "ಯುವಜನರು ನಾಳೆಯ ದೇಶ ರಕ್ಷಕರಾಗಬೇಕು" ಎಂಬುದು ಅವರ ಬಯಕೆಯಾಗಿತ್ತು.



ಅದಕ್ಕಾಗಿ ಅವರು ಹಗಲಿರುಳೆನ್ನದೆ ಶ್ರಮಿಸಿದರು. ೧೯೭೩ ಜನವರಿ ೧೫ ರಂದು ಗೋಪಾಲರಾವ್ ಗುರುನಾಥ ರಾವ್ ಬೇವೂರರು ಭಾರತದ ಭೂಸೇನೆಯ ಒಂಬತ್ತನೆಯ ಮಹಾದಂಡನಾಯಕರಾದರು.

ಜನರಲ್ ಜಿ.ಜಿ.ಬೇವೂರರ ಕರ್ತವ್ಯನಿಷ್ಠೆ, ದಕ್ಷಆಡಳಿತ ಕಂಡು ಭಾರತ ಸರ್ಕಾರವು ಅವರಿಗೆ 'ಪದ್ಮಭೂಷಣ ಪ್ರಶಸ್ತಿ' ಹಾಗೂ ಪರಮ ವಿಶಿಷ್ಠ ಸೇವಾಪದಕವನ್ನು ಕೊಟ್ಟು ಗೌರವಿಸಿತು. ಮುಂದೆ ಡಾರ್ಜಿಲಿಂಗ್‌ನಲ್ಲಿ ಕಟ್ಟಿಸಿದ ಯುದ್ಧ ಸ್ಮಾರಕ ಭವನಕ್ಕೆ ಜನರಲ್ ಜಿ.ಜಿ.ಬೇವೂರರ ಹೆಸರಿಡಲಾಯಿತು..

ಒಮ್ಮೆ ಬೇವೂರಿನ ಆದರ್ಶ ವಿದ್ಯಾವರ್ಧಕ ಸಂಘಕ್ಕೆ ಜನರಲ್ ಜಿ.ಜಿ.ಬೇವೂರರು ಅತಿಥಿಗಳಾಗಿ



ಆಗಮಿಸಿದ್ದರು. ಜಿಲ್ಲಾಧಿಕಾರಿಯವರು ಅವರ ರಕ್ಷಣೆಯ ಜವಾಬ್ದಾರಿಯನ್ನು ಅತ್ಯುತ್ತಮ ರೀತಿಯಲ್ಲಿ ಮಾಡಿದ್ದರು. ಗ್ರಾಮದ ಬೀದಿಯಲ್ಲಿ ಮೆರವಣಿಗೆ ಮಾಡಲೆಂದು ಅಲಂಕೃತ ಜೀಪೊಂದನ್ನು ತರಿಸಿದ್ದರು. ಅದರ ಸುತ್ತ ಬಂದೂಕುಧಾರಿಗಳಾದ ಪೋಲಿಸರನ್ನು ಕಾವಲಿರಿಸಿದ್ದರು. ಅದನ್ನು ಕಂಡ ಜನರಲ್ ಜಿ.ಜಿ.ಬೇವೂರರು, 'ನಾನೊಬ್ಬ ಸೈನಿಕ. ನನಗೇಕೆ ರಕ್ಷಣೆ? ಇದು ನನ್ನ ಊರು, ಇವರೆಲ್ಲ ನನ್ನ ಜನ' ಎಂದರು. ಜೀಪಿನಲ್ಲಿ ಕುಳಿತುಕೊಳ್ಳದೆ ತಮ್ಮ ಹೆಂಡತಿ ರಾಧಿಕಾಬಾಯಿಯವರೊಡನೆ ರೈತನ ಗಾಡಿಯೊಂದರಲ್ಲಿ ಹತ್ತಿ ಕುಳಿತರು. ಅನಂತರ ತಮ್ಮ ಊರಿನ ಜನರನ್ನು ಮಾತನಾಡಿಸುತ್ತ ಗ್ರಾಮದ ಓಣಿಗಳಲ್ಲಿ ನಡೆದುಕೊಂಡು ಹೋದರು. ಇದು ಅವರ ಸಜ್ಜನಿಕೆಯನ್ನು ತಿಳಿಸಿಕೊಡುತ್ತದೆ.

'ಮಾತಿಗಿಂತ ಕೃತಿ ಲೇಸು' ಎಂಬ ತತ್ವ ಜನರಲ್ ಬೇವೂರ ಅವರದು. ನಿವೃತ್ತಿಯ ಅನಂತರ ಬೇವೂರರ ಸೇವೆಯು ಭಾರತ ಸರಕಾರಕ್ಕೆ ಅವಶ್ಯವಾಯಿತು. ಅವರ ಆಡಳಿತ ವೈಖರಿಯನ್ನು ಗುರುತಿಸಿ ಭಾರತ ಸರಕಾರವು ಡೆನ್ಮಾರ್ಕಿನ ರಾಯಭಾರಿಯನ್ನಾಗಿ ಎರಡು ವರ್ಷದ ಅವಧಿಗೆ ನೇಮಿಸಿತು.

ಬೇವೂರಿನ ವರಪುತ್ರ ಭಾರತದ ಒಂಬತ್ತನೆಯ ಮಹಾದಂಡನಾಯಕರಾಗಿ ಸೇವೆ ಸಲ್ಲಿಸಿದ ಸಹೃದಯಿಯಾದ ಜಿ.ಜಿ.ಬೇವೂರರು ೧೯೮೯ಅಕ್ಟೋಬರ್೨೪ ರಂದು ಇಹಲೋಕದಿಂದ ಯಾತ್ರೆೈದರು. ಅವರ ಸಾಹಸದ ಗಾಥೆಗಳು ಭಾರತದ ಮಹಾದಂಡನಾಯಕರ ಚರಿತ್ರೆಯಲ್ಲಿ ಅಮರವಾಗಿ ಉಳಿದಿದೆ.

ಕ್ಷೇತ್ರ : ಬರೆಯುವುದು.

ಸಾಮರ್ಥ್ಯ : ಸರಳ ಕ್ರಿಯಾತ್ಮಕ ಸಾಂದರ್ಭಿಕ ಭಾಷಾಂಶ ನಿಯಮಗಳನ್ನು ಅರ್ಥಮಾಡಿಕೊಂಡು ಅವುಗಳನ್ನು ಬರವಣಿಗೆಯಲ್ಲಿ ಬಳಸುವುದು.

ಆಶಯ

ನಮ್ಮ ದೇಶ ತ್ಯಾಗ, ಬಲಿದಾನಗಳಿಗೆ ಹೆಸರುವಾಸಿಯಾಗಿದೆ. ಇಲ್ಲಿ ಪುರಾಣ ಕಾಲದಿಂದ ಮೊದಲ್ಗೊಂಡು ಕಾರ್ಗಿಲ್ ಹೋರಾಟದವರೆಗೂ ಅನೇಕಾನೇಕ ಯುದ್ಧಗಳು ನಿರಂತರವಾಗಿ ನಡೆದಿವೆ. ಲೋಕಮಹಾಯುದ್ಧಗಳಲ್ಲೂ ಭಾರತೀಯರು ಸಾಹಸವನ್ನು ಮೆರೆದಿದ್ದಾರೆ. ದೇಶದ ರಕ್ಷಣೆಯ ಮಾತು ಬಂದಾಗ ಜೀವದ ಹಂಗು ತೊರೆದು ಹೋರಾಡಿದ ಅದೆಷ್ಟೋ ಮಹನೀಯರು ನಮ್ಮ ಕಣ್ಣಮುಂದೆ ಹಾದುಹೋಗುತ್ತಾರೆ. ಅಂಥವರು ನಮ್ಮ ಪಾಲಿಗೆ ಪ್ರಾತಃಸ್ಮರಣೀಯರು.



ಲೇಖಕರ ಪರಿಚಯ



ಡಾ.ಬಸವರಾಜ ಹದ್ಲಿಯವರು ೦೧-೦೬-೧೯೫೫ ರಂದು ಬಾಗಲಕೋಟೆ ಜಿಲ್ಲೆಯ ಬೇವೂರಿನಲ್ಲಿ ಜನಿಸಿದರು. ತಂದೆ ಚನ್ನಪ್ಪ, ತಾಯಿ ಚನ್ನವ್ವ. ಲೇಖಕರು ೧೯೭೭ರಲ್ಲಿ ಮುಳಗುಂದದ ಬಾಲಲೀಲಾ ಮಹಾಂತ ಶಿವಯೋಗಿಗಳ ಕುರಿತ ಮಹಾಪ್ರಬಂಧಕ್ಕೆ ಡಾಕ್ಟರೇಟ್ ಪದವಿ ಪಡೆದಿದ್ದಾರೆ. ಶ್ರೀ ತಮ್ಮಣ್ಣಪ್ಪ ಚಿಕ್ಕೋಡಿ ಕಲಾ ಮಹಾವಿದ್ಯಾಲಯದಲ್ಲಿ ಕಳೆದ ೨೫ ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ. ಬೇವೂರಿನ ಅಪರೂಪದವರು, ಅಕ್ಕನ ಬಳಗ ಮುಂತಾದವು ಅವರ ಕೃತಿಗಳು. ಪ್ರಸ್ತುತ ಪಾಠವನ್ನು ಅವರ 'ವೀರಸೇನಾನಿ ಜನರಲ್ ಜಿ.ಜಿ.ಬೇವೂರ' ಎಂಬ ಪುಸ್ತಕದಿಂದ ಆಯ್ದುಕೊಳ್ಳಲಾಗಿದೆ.

ಅ. ಅರ್ಥ ತಿಳಿ.

ಜನ್ಮತಾಳು– ಹುಟ್ಟು, ಜನಿಸು. ದುರ್ಗಮ–ಹೋಗಲು ಅಸಾಧ್ಯವಾದ. ನೇತೃತ್ವ– ಮುಂದಾಳತ್ವ, ಹಿರಿತನ. ಉತ್ತುಂಗ–ಶ್ರೇಷ್ಠ, ಎತ್ತರಕ್ಕೇರಿದ. ಅಲಂಕೃತ–ಅಲಂಕಾರ ಮಾಡಿದ, ಸಿಂಗರಿಸಿದ. ಕಾವಲಿರಿಸು–ಕಾಯು. ರಕ್ಷಿಸು. ಗಾಡಿ–ಚಕ್ಕಡಿ, ಬಂಡಿ, ಎತ್ತಿನಗಾಡಿ. ಗ್ರಾಮದ ಓಣಿ–ಹಳ್ಳಿಯ ಬೀದಿ. ಸಜ್ಜನಿಕೆ–ಒಳ್ಳೆಯತನ. ಕೃತಿ– ಕೆಲಸ, ಮಾಡಿದ ಕೆಲಸ. ಲೇಸು–ಒಪ್ಪಿತ. ಮಾರ್ಷಲ್–ಪರಿಣತ. ಫೀಲ್ಡ್–ಭೂಭಾಗ. ಗಾಥೆ–ಕತೆ, ಘಟನೆ.

ಆ. ವಿವರ ತಿಳಿ.

ಮಹಾದಂಡನಾಯಕ : ಸೇನಾ ವರಿಷ್ಠ, ಸೈನ್ಯದ ಅತಿ ಹಿರಿಯ ಅಧಿಕಾರಿ.

ಫೀಲ್ಡ್ ಮಾರ್ಷಲ್ : ಭೂಸೇನೆಯಲ್ಲಿ ವಿಶೇಷ ಪರಿಣತಿಯನ್ನು ಪಡೆದವರಿಗೆ ಕೊಡುವ ಅತ್ಯುನ್ನತ ಪದವಿ.

ಇ. ಕೆಳಗಿನ ಪ್ರಶ್ನೆಗಳಿಗೆ ಉತ್ತರ ಹೇಳಿರಿ.

೧. ಬೇವೂರರು ಯಾವಾಗ ಜನಿಸಿದರು?

೨. ಬೇವೂರರ ತಂದೆ ತಾಯಿಯರ ಹೆಸರೇನು?

೩. ಗೋಪಾಲರಾಯರ ಸ್ವಂತ ಊರು ಯಾವುದು?

೪. ಬೇವೂರರನ್ನು ಬಿಗಿದಪ್ಪಿ ಪ್ರಶಂಸಿಸಿದವರು ಯಾರು?

೫. ಭಾರತ ಸರಕಾರವು ಬೇವೂರರನ್ನು ಎರಡು ವರ್ಷದ ಅವಧಿಗೆ ಯಾವ ಕಾರ್ಯಕ್ಕೆ ನೇಮಿಸಿತು?



ವ್ಯಾಕರಣ ಮಾಹಿತಿ

ಅ. ಸಮಾನಾರ್ಥಕ ಪದಗಳು

ಒಂದು ವ್ಯಕ್ತಿ, ಪ್ರಾಣಿ, ವಸ್ತು ಇತ್ಯಾದಿಗಳಿಗೆ ಅದೇ ಅರ್ಥವನ್ನು ಸೂಚಿಸುವ ಹಲವಾರು ಇತರ ಪದಗಳು ಇರುತ್ತವೆ. ಹೀಗೆ ಒಂದು ಶಬ್ದಕ್ಕೆ ಸಮಾನವಾದ ಅರ್ಥವನ್ನು ಕೊಡುವ ಮತ್ತೊಂದು ಶಬ್ದಕ್ಕೆ ಸಮಾನಾರ್ಥಕ ಪದ ಎನ್ನುವರು.

ಉದಾ:–ಕಾಯಕ= ಕೆಲಸ, ಉದ್ಯೋಗ, ಕಸಬು, ಊಳಿಗ, ದುಡಿಮೆ.

ತಂಡ= ಪಕ್ಷ, ಬಣ, ಗುಂಪು, ಪಡೆ, ದಳ, ಹಿಂಡು, ಸಮೂಹ.

ಪದ್ಮ= ಕಮಲ, ತಾವರೆ, ಅರವಿಂದ, ವನಜ, ಸರೋಜ

ಭಾಷೆ=ಮಾತು, ನುಡಿ, ವಚನ, ಆಣೆ, ಪ್ರತಿಜ್ಞೆ, ನಂಬಿಗೆಯ ನುಡಿ, ಬೆಂಬಲದ ವಚನ.

ಆ. ನಾನಾರ್ಥಕ ಪದಗಳು

ಒಂದು ಶಬ್ದವು ಇತರ ಹಲವಾರು ಅರ್ಥಗಳನ್ನು ಸೂಚಿಸುವಂತಿದ್ದರೆ ಅದನ್ನು ನಾನಾರ್ಥಕ ಪದವೆಂದು ಕರೆಯುವರು.

ಉದಾ:	ದಂಡ	=	೧. ಶಿಕ್ಷೆ,	೨. ಕೋಲು,	೩. ಸೈನ್ಯ
	ದಳ	=	೧. ಸೈನ್ಯ,	೨. ಎಲೆ,	೩. ಗುಂಪು
	ಅಂಗ	=	೧. ಭಾಗ,	೨. ದೇಹ	
	ಮಡಿ	=	೧. ಸಾಯು,	೨. ಶುದ್ಧವಾದದ್ದು	

ಇ. ಓದಿಗೆ ಮನ್ನಣೆ

೧. ದೇಶಕ್ಕಾಗಿ ಹೋರಾಡಿದ ಗಣ್ಯರ ಜೀವನ ಚರಿತ್ರೆ ಸಂಗ್ರಹಿಸಿ ಓದಿರಿ.

೨. ಸ್ವಾತಂತ್ರ್ಯ ಹೋರಾಟಗಾರರ ಭಾವಚಿತ್ರಗಳನ್ನು ಸಂಗ್ರಹಿಸಿರಿ.

ಈ. ಶುಭ ನುಡಿ

೧. ದೇಶಕ್ಕಾಗಿ ದುಡಿಯೋಣ, ದೇಶಕ್ಕಾಗಿ ಬಾಳೋಣ.

೨. ದೇಶ, ಭಾಷೆ, ಸಂಸ್ಕೃತಿಗಳ ಬಗ್ಗೆ ಸದಾ ಅಭಿಮಾನವಿರಲಿ.

೩. ನಮ್ಮ ದೇಶ ಭಾರತ, ಹೇಳಿರೆಲ್ಲ ಹಿಗ್ಗುತ.

ಪೂರಕ ಪಾಠ : ವೀರಯೋಧ



ಪಾಕಿಸ್ತಾನದ ಸೈನಿಕರು ಜೋಗಿಲ ಕಣಿವೆಯನ್ನು ಆಕ್ರಮಿಸಿಕೊಂಡರು. ಅಲ್ಲಿ ಇದ್ದ ಭಾರತ ಸೈನ್ಯದ ತುಕಡಿಯು ದಾಳಿಗೆ ಸಿಕ್ಕಿಕೊಂಡಿತು. ಭಾರತದ ವೀರ ಸೇನಾಧಿಕಾರಿಯೊಬ್ಬರಿಗೆ ಈ ಮಾಹಿತಿ ತಿಳಿಯಿತು. ಅವರು ವಿಮಾನದಲ್ಲಿ ಪರ್ವತಗಳ ಮಧ್ಯೆ ಹೊರಟರು. ಭಾರತ ಸೈನ್ಯದ ತುಕಡಿಗೆ ಆಹಾರ ಒದಗಿಸಿದರು. ಬಳಿಕ ಭೂತಾಕಾರದ ಟ್ಯಾಂಕರ್‌ಗಳನ್ನು ನುಗ್ಗಿಸಿದರು. ಕಣಿವೆಯಲ್ಲಿದ್ದ ಶತ್ರು ಸೈನಿಕರನ್ನು ಮಣಿಸಿದರು. ಅವರೇ ಜನರಲ್ ಕೆ. ಎಸ್. ತಿಮ್ಮಯ್ಯ.

ಜನರಲ್ ತಿಮ್ಮಯ್ಯನವರ ತಂದೆ ಕೊಡಗಿನ ಕೊಡಂದೇರ ತಿಮ್ಮಯ್ಯ. ತಾಯಿ ಸೀತಮ್ಮ ಇವರು ೧೯೦೬ ಮಾರ್ಚ್ ೨೧ ರಂದು ಜನಿಸಿದರು. ಬೆಂಗಳೂರಿನ ಬಿಷಪ್ ಕಾಟನ್ ಶಾಲೆಯಲ್ಲಿ ಓದಿದರು. ಆಟೋಟಗಳ ಬಗೆಗೆ ತಿಮ್ಮಯ್ಯನವರಿಗೆ ವಿಶೇಷ ಒಲವು. ಇದನ್ನು ಕಂಡ ಹೆತ್ತವರು ಮಗನನ್ನು ಡೆಹರಾಡೂನಿನ ಮಿಲಿಟರಿ ಶಾಲೆಗೆ ಸೇರಿಸಿದರು. ಮುಂದೆ ಉನ್ನತ ಶಿಕ್ಷಣಕ್ಕಾಗಿ ಇಂಗ್ಲೆಂಡಿಗೆ ಕಳುಹಿಸಿದರು. ಅಲ್ಲಿನ ಸೈನಿಕ ತರಬೇತಿ ಕಾಲೇಜಿನಲ್ಲಿ ಸೈನಿಕ ಶಿಕ್ಷಣ ಪಡೆದರು. ಭಾರತೀಯ ಸೈನ್ಯದಲ್ಲಿ ಅಧಿಕಾರಿಯಾಗಿ ಸೇವೆಗೆ ಸೇರಿದರು. ಭಾರತದ ಕ್ವೆಟ್ಟದಲ್ಲಿ ೧೯೩೫ರಲ್ಲಿ ಭಯಂಕರ ಭೂಕಂಪವಾಯಿತು. ಆಗ ಅಲ್ಲಿಯ ಜನರು ತೊಂದರೆಗೆ ಒಳಗಾದರು. ತಿಮ್ಮಯ್ಯನವರು ಆ ಜನರಿಗೆ ಹಲವು ರೀತಿಯಲ್ಲಿ ನೆರವು ನೀಡಿದರು.

ಎರಡನೆಯ ಜಾಗತಿಕ ಯುದ್ಧದ ಸಮಯ ಆಗ ಬರ್ಮಾದಲ್ಲಿ ಯುದ್ಧ ನಡೆಯಿತು. ಆ ಯುದ್ಧದಲ್ಲಿ ತಿಮ್ಮಯ್ಯನವರು ಭಾಗವಹಿಸಿದರು. ಅವರು ಅಪಾಯವನ್ನು ಎದುರಿಸಲು ತಾವೇ ಮೊದಲು ಸಿದ್ಧರಾಗುತ್ತಿದ್ದರು. ಸೈನ್ಯದಲ್ಲಿ ಉನ್ನತಾಧಿಕಾರಿಯಾದರೂ ಸಾಮಾನ್ಯ ಸೈನಿಕರೊಂದಿಗೆ ಬೆರೆಯುತ್ತಿದ್ದರು. ಅವರ ಗೌರವ ಪ್ರೀತಿಗಳಿಗೆ ಪಾತ್ರರಾಗಿದ್ದರು.

೧೯೫೭ರ ಮೇ ೮ರಂದು ಭಾರತ ಸೈನ್ಯದ ಮಹಾದಂಡನಾಯಕ ಹುದ್ದೆಯನ್ನು ವಹಿಸಿಕೊಂಡರು. ಅವರ ಸೇವೆಯನ್ನು ಗಮನಿಸಿ ಭಾರತ ಸರ್ಕಾರವು ತಿಮ್ಮಯ್ಯನವರಿಗೆ ಪದ್ಮ ಭೂಷಣ ಪ್ರಶಸ್ತಿಯನ್ನು ನೀಡಿ ಗೌರವಿಸಿತು.

೧೯೬೪ ರಲ್ಲಿ ಸೈಪ್ರಸ್ ದ್ವೀಪದಲ್ಲಿ ಗೊಂದಲವೆದ್ದಿತು. ಅಲ್ಲಿ ಶಾಂತಿ ಕಾಪಾಡಲು ವಿಶ್ವಸಂಸ್ಥೆಯು ಸೈನ್ಯವನ್ನು ಕಳುಹಿಸಿತು. ಈ ಸೈನ್ಯದ ನಾಯಕತ್ವವನ್ನು ಜನರಲ್ ತಿಮ್ಮಯ್ಯನವರು ವಹಿಸಿದ್ದರು. ೧೯೬೫ರ ಡಿಸೆಂಬರ್ ೧೮ರಂದು ಅವರು ಸೈಪ್ರಸ್‌ನಲ್ಲೇ ಹೃದಯಾಘಾತದಿಂದ ನಿಧನರಾದರು. ಭಾರತದ ವೀರ ಸೇನಾನಿಯೊಬ್ಬರು ಚರಿತ್ರೆಯ ಪುಟಗಳಿಗೆ ಸೇರಿ ಅಮರರಾದರು.

ಪ್ರಶ್ನೆಗಳಿಗೆ ಉತ್ತರ ಹೇಳಿರಿ.

೧) ಹೆತ್ತವರು ತಿಮ್ಮಯ್ಯನವರನ್ನು ಡೆಹರಾಡೂನಿನ ಯಾವ ಶಾಲೆ ಸೇರಿಸಿದರು?

೨) ತಿಮ್ಮಯ್ಯನವರ ತಂದೆ ತಾಯಿಯರ ಹೆಸರೇನು?

೩) ತಿಮ್ಮಯ್ಯನವರು ಮಹಾದಂಡನಾಯಕ ಹುದ್ದೆಯನ್ನು ಯಾವಾಗ ವಹಿಸಿಕೊಂಡರು?

೪) ಎರಡನೆಯ ಜಾಗತಿಕ ಯುದ್ಧದ ಸಮಯದಲ್ಲಿ ಎಲ್ಲಿ ಯುದ್ಧ ನಡೆಯಿತು?

5) ತಿಮ್ಮಯ್ಯನವರಿಗೆ ಭಾರತ ಸರಕಾರ ಯಾವ ಪ್ರಶಸ್ತಿ ನೀಡಿ ಗೌರವಿಸಿತು?





ಮೂಡಲ ಮನೆ

ನಮ್ಮೂರ ಅಗಸ್ಯಾಗ ಆಲದ ಮರ ಬೆಳೆದು
ಹಾದಿ ಬೀದೆಲ್ಲಾ ತಂಪು ನೆರಳ ।
ನೆತ್ತಿಗೂದಲ ಹರವಿ ತಪವ ಮಾಡೋನ್ಯಾರ ?
ಜಡಿಮುನಿಯ ಜಡಿಯ ಹಾಂಗ ಬಿಳಲ ॥
ರೆಂಬಿ ಕೊಂಬಿಯ ಮ್ಯಾಲ ಗೂಡ ಕಟ್ಟಿದಾವ
ರೆಕ್ಕೆ ಬಲಿತ ಹಕ್ಕಿ
ಗೂಡಿನಾಗ । ಮಲಗ್ಯಾವ ಮರಿಹಕ್ಕಿ ॥
ದೂರ ದೇಶದ ವಲಸಿಗ ಹಕ್ಕಿಗು
ಐತಿ ಜಾಗ ಒಳಗ ।
ಬನ್ನಿರಿ । ನೀವು ನಮ್ಮ ಬಳಗ ॥
ಹಳೆಯ ಬಾವಿಯ ತಳದ ನೀರಿನಾಗ
ಹಸರು ಚಿಗರತಾವ ।
ಬೇರಿಗೆ ಮೊಳಕಿ ಒಡಿಯತಾವ ॥
ಭೂತ ಬೇತಾಳ ಜೋತ ಬಾವಲಿ
ಮ್ಯಾಲ ಕೂಗತಾವ ।
ಮರದಾಗ ॥ ಕರಗ ಕುಣಿಯತಾವ ॥
ಮರದ ಎಲೆ ನೆರಳು ಮನೆಯ ಗೋಡೆ ಮ್ಯಾಲ
ಆಡತಾವ ಆಟ
ಮೂಡ್ಯಾವ । ತೊಗಲ ಗೊಂಬಿಯಾಟ ॥
ಕರುಳ ಬಳ್ಳಿಯ ಕತೆಯ ಹೇಳತಾವ
ನೋಡ್ರಿ ಶಾಂತ ಚಿತ್ತ ।
ನಾವೂನು ಅದರ ಭಾಗ ಮಾತ್ರ ॥

– ಚಂದ್ರಶೇಖರ ಕಂಬಾರ



ಕ್ಷೇತ್ರ : ಮಾತನಾಡುವುದು.
ಸಾಮರ್ಥ್ಯ : ಸನ್ನಿವೇಶಕ್ಕೆ ತಕ್ಕಂತೆ ಆಡುಭಾಷೆ ಮತ್ತು ಗ್ರಾಂಥಿಕ ಭಾಷೆಯನ್ನು ಬಳಸುವುದು.

ಆಶಯ

ನಾವು ವಿವಿಧ ಜಾತಿಗಳಿಂದ ವಿವಿಧ ಮತಗಳಿಂದ ಬಂದಿರಬಹುದು. ಆದರೆ ಒಂದೇ ದೇಶದಲ್ಲಿ ಬಾಳಿ ಬದುಕುತ್ತೇವೆ. ಹಬ್ಬ ಹರಿದಿನಗಳನ್ನು ಆಚರಿಸುತ್ತ ಮೇಲು-ಕೀಳುಗಳನ್ನು ಮರೆಯುತ್ತಾ, ಭಾರತ ಮಾತೆಯೆಂಬ ಒಂದೇ ತಾಯಿ ಮರದ ವಿಶಾಲ ಬಾಹುಗಳಡಿಯಲ್ಲಿ ಜೀವಿಸಬೇಕಾದ ಸತ್ಯವನ್ನು ಪ್ರಸ್ತುತ ಕವನದಲ್ಲಿ ಕಂಡುಕೊಳ್ಳುತ್ತೇವೆ.

ಲೇಖಕರ ಪರಿಚಯ



ಡಾ. ಚಂದ್ರಶೇಖರ ಕಂಬಾರರು ದಿನಾಂಕ: ೦೨.೦೧.೧೯೩೭ರಲ್ಲಿ ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ಘೋಡಗೆರೆ ಗ್ರಾಮದಲ್ಲಿ ಜನಿಸಿದರು. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿ ಹಾಗೂ ಡಾಕ್ಟರೇಟ್ ಪದವಿ ಪಡೆದರು. ೨೦೦೪ ರಿಂದ ೨೦೧೦ರ ವರೆಗೆ ವಿಧಾನ ಪರಿಷತ್ ಸದಸ್ಯರಾಗಿದ್ದರು. ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷರಾಗಿದ್ದರು. ಶ್ರೀಯುತರು ಹಂಪಿ ಕನ್ನಡ ವಿಶ್ವವಿದ್ಯಾಲಯದ ಪ್ರಥಮ ಉಪಕುಲಪತಿಗಳಾಗಿದ್ದರು.

ಪ್ರಸಿದ್ಧ ಜಾನಪದ ವಿದ್ವಾಂಸರಾದ ಡಾ|| ಕಂಬಾರರು ೨೪ ನಾಟಕಗಳು, ೧೦ ಕವನ ಸಂಕಲನಗಳು, ೫ ಕಾದಂಬರಿಗಳು ಮತ್ತು ಹಲವು ಇತರ ಕೃತಿಗಳನ್ನು ರಚಿಸಿದ್ದಾರೆ. 'ಚಕೋರಿ' ಅವರ ಮಹಾಕಾವ್ಯ. ಸಂಗ್ಯಾಬಾಳ್ಯಾ, ಜೋಕುಮಾರಸ್ವಾಮಿ, ಸಿರಿಸಂಪಿಗೆ, ಶಿವರಾತ್ರಿ ಮುಂತಾದವು ನಾಟಕಗಳು, ಕರಿಮಾಯಿ, ಸಿಂಗಾರವ್ವ ಮತ್ತು ಅರಮನೆ, ಶಿಖರ ಸೂರ್ಯ ಮುಂತಾದವು ಕಾದಂಬರಿಗಳು.

ಶ್ರೀಯುತರು ೨೦೧೦ರ **ಜ್ಞಾನಪೀಠಪ್ರಶಸ್ತಿಯನ್ನು** ಪಡೆದಿದ್ದಾರೆ. ಕನ್ನಡಕ್ಕೆ ಜ್ಞಾನಪೀಠ ಪ್ರಶಸ್ತಿಯನ್ನು ತಂದು ಕೊಟ್ಟವರಲ್ಲಿ ಇವರು ಎಂಟನೆಯವರಾಗಿದ್ದಾರೆ. ಕೇಂದ್ರ ಸರ್ಕಾರದ ಪದ್ಮಶ್ರೀ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕೇಂದ್ರ ಸಂಗೀತ ಮತ್ತು ನಾಟಕ ಅಕಾಡೆಮಿ ಪ್ರಶಸ್ತಿ ಮುಂತಾದ ಹಲವಾರು ಪ್ರಶಸ್ತಿಗಳು ಶ್ರೀಯುತರಿಗೆ ಲಭಿಸಿವೆ. ಪ್ರಸ್ತುತ **'ಮೂಡಲಮನೆ'** ಕವನವನ್ನು ಅವರ **'ಎಲ್ಲಿದೆ ಶಿವಾಪುರ'** ಎಂಬ ಕವನ ಸಂಕಲನದಿಂದ ಆಯ್ದು ಕೊಳ್ಳಲಾಗಿದೆ.



ಅ. ಅರ್ಥ ತಿಳಿಯಿರಿ.

ಅಗಸಿ – ಊರಿನ ಪ್ರವೇಶದ್ವಾರ, ಊರ ಹೆಬ್ಬಾಗಿಲು. ನೆತ್ತಿ – ತಲೆಯ ಮಧ್ಯಭಾಗ. ಹರವು – ಹರಡು ವಿಸ್ತರಿಸು ಕೆದರು. ತಪ – ತಪಸ್ಸು, ಧ್ಯಾನ. ಜಡಿ – ಜಡೆ, ಉದ್ದವಾದ ಕೂದಲ ರಾಶಿ, ಜಟೆ. ಬಿಳಲ – ಬಿಳಲು. ಮರದ ಕೊಂಬೆಗಳಿಂದ ನೇತಾಡುವ ಬಿಳಲ್. ಬಲಿತ – ಬೆಳೆದ, ಶಕ್ತಿಯುತವಾದ, ಬಲಿಷ್ಠ. ಗೂಡಿನ್ಯಾಗ – ಗೂಡಿನಲ್ಲಿ, ಗೂಡಿನೊಳಗೆ. ವಲಸಿಗ– ಬೇರೆಡೆಯಿಂದ ಬಂದ, ಬೇರೆಡೆಗೆ ಹೋದ. ಐತಿ – ಇದೆ , ಇರುವುದು. ಬಳಗ – ಗುಂಪು, ಬಂಧುಗಳ ಸಮೂಹ. ತಳ – ಕೆಳಭಾಗ, ಸಮತಟ್ಟಾದ ಪ್ರದೇಶ, ಹಸರ – ಹಸಿರು, ಮ್ಯಾಲ – ಮೇಲೆ, ಶಾಂತಚಿತ್ತ – ಶಾಂತಮನಸ್ಸು, ತೃಪ್ತ ಮನಸ್ಸು. ನಾವೂನು – ನಾವೂಸಹ, ನಾವೆಲ್ಲರೂ. ಭಾಗ – ಅಂಶ, ಒಂದು ಪಾಲು.

ಆ. ವಿವರ ತಿಳಿಯಿರಿ.

ಜಡಿಮುನಿ	: ವಿಶೇಷವಾಗಿ ಜಡೆಯನ್ನು ಬೆಳೆಸಿದ ಸನ್ಯಾಸಿ.
ಮೊಳಕೆ ಒಡಿ	: ಮೊಳಕೆ ಬರುವುದು, ಚಿಗುರುವುದು
ಭೂತ ಬೇತಾಳ	: ದೆವ್ವ, ಪಿಶಾಚಿ
ಜೋತ ಬಾವಲಿ	: ರಾತ್ರಿಯ ಹೊತ್ತು ಸಂಚರಿಸುವ, ಮರದ ರೆಂಬೆಗಳಲ್ಲಿ ನೇತಾಡುವ, ಹಾರುವ ಒಂದು ಪ್ರಾಣಿ.
ಕರಗ	: ಒಂದು ಉತ್ಸವದ ಹೆಸರು. ತಲೆಯ ಮೇಲೆ ಕಲಶ ಹೊತ್ತುಕೊಂಡ ಕುಣಿಯುವ ಒಂದು ನೃತ್ಯ.
ತೊಗಲುಗೊಂಬೆಯಾಟ	: ಚರ್ಮ ಬಳಸಿ ಸಿದ್ಧ ಪಡಿಸಿದ ಗೊಂಬೆಗಳನ್ನು ಬಳಸಿ ಆಡುವ ಆಟ.
ಕರುಳಬಳ್ಳಿ	: ಸಂಬಂಧವನ್ನು ಕುರಿತು ಹೇಳುವಾಗ ಬಳಸುವ ಪದ.

ಇ. ಕೆಳಗಿನ ಪ್ರಶ್ನೆಗಳಿಗೆ ಉತ್ತರ ಹೇಳಿರಿ.

೧. ಆಲದ ಮರ ಎಲ್ಲಿ ಬೆಳೆದು ನಿಂತಿದೆ?

೨. ರೆಂಬೆ ಕೊಂಬೆಯ ಮೇಲೆ ಯಾರು ಗೂಡು ಕಟ್ಟಿದ್ದಾರೆ?

೩. ಬನ್ನಿರಿ, ನೀವು ನಮ್ಮ ಬಳಗ ಎಂದು ಕವಿ ಯಾರಿಗೆ ಹೇಳುತ್ತಿದ್ದಾರೆ?



೪. ಮರದಲ್ಲಿ ಯಾರೆಲ್ಲಾ ಸೇರಿ ಕರಗ ಕುಣಿಯುತ್ತಾರೆ ?

೫. ಮರದ ಎಲೆಗಳ ನೆರಳಾಟ ಎಲ್ಲಿ ನಡೆಯುತ್ತಿದೆ?

೬. ಕವಿ ಇಲ್ಲಿ ದೇಶವನ್ನು ಯಾವುದಕ್ಕೆ ಹೋಲಿಸಿದ್ದಾರೆ ?

ಅ. ವ್ಯಾಕರಣ ಮಾಹಿತಿ

೧) ಪ್ರಕೃತಿ ಭಾವ.

ಕೆಲವು ಸಲ ಸ್ವರಕ್ಕೆ ಸ್ವರವು ಪರವಾದಾಗ ಯಾವ ರೀತಿಯ ಸಂಧಿ ಕಾರ್ಯವು ನಡೆವುದಿಲ್ಲ ಇದನ್ನು ಪ್ರಕೃತಿ ಭಾವ ಎನ್ನುತ್ತೇವೆ.

ಉದಾ: ಅಣ್ಣಾ+ಓಡಿ ಬಾ = ಅಣ್ಣಾ ಓಡಿ ಬಾ.

ಇಲ್ಲಿ 'ಅಣ್ಣಾ' ಮತ್ತು 'ಓಡಿ ಬಾ' ಎಂಬ ಎರಡು ಪದಗಳ ನಡುವೆ ಸಂಧಿಕಾರ್ಯ ನಡೆಯದೆ ಆ ಪದಗಳು ಹಾಗೆಯೇ ಉಳಿದುಕೊಂಡಿವೆ.

ಇದೇ ರೀತಿ ಕೆಲವು ಉದಾಹರಣೆಗಳನ್ನು ಗಮನಿಸಿರಿ.

ಕೃಷ್ಣ +ಎಲ್ಲಿದ್ದೀಯಾ = ಕೃಷ್ಣ ಎಲ್ಲಿದ್ದೀಯಾ ?

ಅಕ್ಕಾ +ಎಲ್ಲಿರುವೆ =ಅಕ್ಕಾ ಎಲ್ಲಿರುವೆ?

ಆ +ಅಂಗಡಿ =ಆ ಅಂಗಡಿ

ಈ+ಮನೆ= ಈ ಮನೆ

೨) ವಿರುದ್ಧಾರ್ಥಕ ಪದಗಳು.

ದಿನ ನಿತ್ಯ ಮಾತನಾಡುವಾಗ,ಬರೆಯುವಾಗ ಬಳಸುವ ಪದಗಳಲ್ಲಿ ವಿರುದ್ಧವಾದ ಅರ್ಥವಿರುವ ಕೆಲವು ಪದಗಳನ್ನು ಇಲ್ಲಿ ಕೊಡಲಾಗಿದೆ.

ಪದ		ವಿರುದ್ಧಾರ್ಥಕ ಪದ
ಅನುಭವ	x	ಅನನುಭವ
ಆದಿ	x	ಅನಾದಿ
ಉತ್ತಮ	x	ಅಧಮ



ಉನ್ನತಿ x ಅವನತಿ
ಗರ್ವಿ x ನಿಗರ್ವಿ
ಯಶಸ್ವಿ x ಅಯಶಸ್ವಿ

ಆ. ಓದಿಗೆ ಮನ್ನಣೆ

೧. ಚಂದ್ರಶೇಖರ ಕಂಬಾರರ 'ಕಿಟ್ಟಿ ಕತೆ' ನಾಟಕವನ್ನು ಸಂಪಾದಿಸಿ ಓದಿರಿ.
೨. ದೇಶದ ಬಗ್ಗೆ ದಿನಕರ ದೇಸಾಯಿಯವರ ಚೌಪದಿಗಳನ್ನು ಓದಿರಿ.
೩. ವಿವಿಧ ದೇಶಭಕ್ತಿ ಗೀತೆಗಳನ್ನು ಸಂಗ್ರಹಿಸಿ ಗುಂಪಿನಲ್ಲಿ ಹಾಡಿರಿ.

ಇ. ಶುಭ ನುಡಿ

೧. ಜೀವನ ಬಲುಚಿಕ್ಕದು. ಅದನ್ನು ಆದಷ್ಟು ಚೊಕ್ಕವಾಗಿ ಕಳೆಯೋಣ.
೨. ನಿನ್ನ ದೇಶಕ್ಕಾಗಿ ನೀನು ಯಾವ ತ್ಯಾಗಕ್ಕಾದರೂ ಸಿದ್ಧನಾಗು.
೩. ಭಾಷೆಯು ಭಾವನೆಯ ಪ್ರತಿಬಿಂಬ.
೪. ಭಾಷೆಯು ವಿಚಾರಗಳಿಗೆ ತೊಡಿಸುವ ಪೋಷಾಕು ಇದ್ದಂತೆ.



ನೋಡಬನ್ನಿ ಶಿಲ್ಪ ಸಿರಿ



ಒಲವಿನ ಪ್ರವಾಸ ಪ್ರಿಯರೆ,

ನಮಸ್ಕಾರ. ನಮ್ಮ ಕನ್ನಡ ನಾಡಿನ ಅದೆಷ್ಟೋ ಶಿಲಾದೇಗುಲಗಳನ್ನು ನೀವು ನೋಡಿದ್ದೀರಿ. ಬೇಲೂರು, ಹಳೆಬೀಡು, ಐಹೊಳೆ, ಪಟ್ಟದಕಲ್ಲು, ಶ್ರವಣಬೆಳಗೊಳ, ಸೋಮನಾಥಪುರಗಳ ವಿವರಗಳು ನಿಮ್ಮ ನಾಲಗೆಯಲ್ಲಿ ನಲಿದಾಡುತ್ತಿರಬಹುದು. ಶಿಲ್ಪಕಲೆಗಳ ಬಗ್ಗೆ ಅಷ್ಟೊಂದು ಕುತೂಹಲವುಳ್ಳ ನಿಮಗೆ ನನ್ನ ಬಗ್ಗೆ ತಿಳಿಯುವ ಆಸಕ್ತಿಯಿಲ್ಲವೆ?

ಅಂದಹಾಗೆ ನಾನು ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲೂಕಿನ ಅಮೃತಾಪುರವೆಂಬ ಗ್ರಾಮದಲ್ಲಿರುವ ಅಮೃತೇಶ್ವರ ದೇವಾಲಯ. ನನ್ನ ಬಗ್ಗೆ ಇನ್ನೂ ಅನೇಕರಿಗೆ ಗೊತ್ತಿಲ್ಲ. ನಾನು ಈ ಗ್ರಾಮದಲ್ಲಿ ಸದ್ದುಗದ್ದಲವಿಲ್ಲದೆ ನೆಲೆಸಿರುವೆ. ನನ್ನೊಳಗಿನ ಶಿಲ್ಪಕಲಾಸಿರಿಯನ್ನು ನೀವು ಒಮ್ಮೆ ಬಂದು ನೋಡಿದರೆ ಖಂಡಿತವಾಗಿ ಮನಸೋಲುತ್ತೀರಿ.

ನನ್ನನ್ನು ಹೊಯ್ಸಳ ದೊರೆಯಾದ ಎರಡನೇ ವೀರ ಬಲ್ಲಾಳನು ೧೧೯೬ರಲ್ಲಿ ತನ್ನ ನೆಚ್ಚಿನ



ದಂಡನಾಯಕ ಅಮೃತನ ಶಾಶ್ವತ ನೆನಪಿಗಾಗಿ ಕಟ್ಟಿಸಿದ. ಹೀಗಾಗಿ ನನ್ನನ್ನು ಅಮೃತೇಶ್ವರ ದೇವಾಲಯವೆಂದೂ, ನಾನು ಇರುವ ಊರನ್ನು ಅಮೃತಾಪುರವೆಂದೂ ಕರೆಯುತ್ತಾರೆ. ನನ್ನನ್ನು ಮಲ್ಲಿತಮ್ಮ ಎಂಬ ಮುಖ್ಯ ಶಿಲ್ಪಿಯು ನೂರಾರು ಸಹಶಿಲ್ಪಿಗಳ ನೆರವಿನಿಂದ ೪೨ ವರ್ಷಗಳ ಕಾಲ ಕೆತ್ತನೆ ಮಾಡಿ ನಿರ್ಮಿಸಿದನಂತೆ. ಇಷ್ಟು ಸುಂದರವಾಗಿ ನನ್ನನ್ನು ನಿರ್ಮಿಸಲು ಅವರೆಷ್ಟು ಶ್ರಮಪಟ್ಟಿರಬೇಕು?

ನನ್ನ ನಿರ್ಮಾಣಕ್ಕಾಗಿ ಕುಂಟಿನಮಡುವಿನ ಕೇತಗೌಡ, ಎರಕಗೌಡ, ಮಾಳಗೌಡ ಎಂಬವರು ತಮ್ಮ ಜಮೀನುಗಳನ್ನೇ ದಾನ ಮಾಡಿದ್ದರಂತೆ. ನನ್ನನ್ನು ಕೆತ್ತಲು ಬಳಪದ ಕಲ್ಲುಗಳನ್ನು ಬಳಸಲಾಗಿದೆ.

ವಿಶೇಷವೆಂದರೆ ನಾನು ಹೊಯ್ಸಳರ ಕಾಲದವನಲ್ಲವೇ? ಆದ್ದರಿಂದ ಹೊಯ್ಸಳ ಶಿಲ್ಪಕಲೆ ನನ್ನಲ್ಲಿ ಮೈಗೂಡಿದೆ. ಕರ್ನಾಟಕದ ಪ್ರಸಿದ್ಧ ಹೊಯ್ಸಳ ದೇವಾಲಯಗಳ ಸಾಲಿನಲ್ಲಿ ನನಗೂ ವಿಶೇಷ ಸ್ಥಾನವಿದೆ ಎಂದು ತಜ್ಞರು ಅಭಿಪ್ರಾಯ ಪಡುತ್ತಾರೆ. ಆದರೆ ಅದು ಸಾಬೀತಾಗಬೇಕಿದ್ದರೆ ನಿಮ್ಮೆಲ್ಲರ ಪ್ರೋತ್ಸಾಹ ಬೇಕಲ್ಲವೆ?

ನನ್ನ ಗೋಡೆಯ ಮೇಲ್ಭಾಗದಲ್ಲಿ ಸುತ್ತಲೂ ನೂರಾರು ಚಿಕ್ಕದೊಡ್ಡ ಶಿಖರಗಳಿವೆ. ಶಿಖರಗಳ ಮಧ್ಯದಲ್ಲಿ ಹೊಯ್ಸಳ ಲಾಂಛನಗಳ ಕೆತ್ತನೆ ಮಾಡಲಾಗಿದೆ. ಕಟಾಂಜನ ಗೊತ್ತಲ್ಲವೆ? ಅದರ ಮೇಲೆ ಮತ್ತು ಕೆಳಗೆ ಬಳ್ಳಿಸಾಲು ಕೆತ್ತಲಾಗಿದ್ದು ನಡುವೆ ಹೂವು, ನವಿಲು, ಹಂಸಗಳು ಕುಣಿದಾಡುತ್ತಿವೆ. ಇನ್ನೂ ವಿಶೇಷವೆಂದರೆ ನನ್ನ ಕಟಾಂಜನದ ಹಲಗೆಗಳ ಮೇಲೆ ರಾಮಾಯಣ ಮತ್ತು ಮಹಾಭಾರತ ಕಥಾಪ್ರಸಂಗಗಳನ್ನು ಕೆತ್ತನೆ ಮಾಡಲಾಗಿದೆ. ಒಂದು ಕಡೆಯಿಂದ ನೋಡುತ್ತಾ ಸಾಗಿದಾಗ ರಾಮಾಯಣವೂ ತಿರುಗಿ ಇನ್ನೊಂದು ಕಡೆಯಿಂದ ಸಾಗಿದಾಗ ಮಹಾಭಾರತವೂ ನಿಮ್ಮ ಕಣ್ಣ ಮುಂದೆ ಬಂದು ನಿಲ್ಲುತ್ತದೆ.

ರಾಮಾಯಣ ಕಥಾಭಾಗದಲ್ಲಿ ದಶರಥನ ಪುತ್ರಕಾಮೇಷ್ಟಿ, ಆತನ ಓಲಗ, ವಿಶ್ವಾಮಿತ್ರನೊಂದಿಗೆ ರಾಮಲಕ್ಷ್ಮಣರು ಕಾಡಿಗೆ ಪ್ರಯಾಣಿಸುವುದು, ಸೀತಾಸ್ವಯಂವರ, ರಾಮನ ವನವಾಸ, ಸೀತಾಪಹರಣ, ಹನುಮಂತನ ಭೇಟಿ, ವಾಲಿಸುಗ್ರೀವರ ಕಾಳಗ, ರಾಮ-ರಾವಣರ ಯುದ್ಧ ಇವೆಲ್ಲವೂ ಕಟಾಂಜನದ ಭಿತ್ತಿಗಳಲ್ಲಿ ಅರಳಿ ನಿಂತಿವೆ.

ಇನ್ನು ಮಹಾಭಾರತ. ಇಲ್ಲಿ ನೋಡಿ ಪ್ರವಾಸಿಗರೆ, ಪಾಂಡವರು ಮತ್ತು ಕೌರವರು ಚಿಕ್ಕವರಾಗಿದ್ದಾಗ ಆಡುತ್ತಿದ್ದ ಆಟ, ಕಲಿಯುತ್ತಿದ್ದ ವಿದ್ಯೆ, ಎಲ್ಲವೂ ಚಿತ್ರಿತವಾಗಿದೆ. ಬಕಾಸುರನ ವಧೆ, ದ್ರೌಪದಿ ಸ್ವಯಂವರ, ಪಾಂಡವರ ವನವಾಸ, ಕುರುಕ್ಷೇತ್ರ ಯುದ್ಧ, ಇವೆಲ್ಲವನ್ನು ನನ್ನಲ್ಲಿ ಕಾಣಬಹುದು.

ನನ್ನ ಉತ್ತರ ದಿಕ್ಕಿನಲ್ಲಿ ಭಾಗವತದ ಕಥೆಯು ಕೆತ್ತಲ್ಪಟ್ಟಿದೆ, ನೀವು ಇದನ್ನು ನೋಡಲೇಬೇಕು. ಇಲ್ಲಿ ಶ್ರೀಕೃಷ್ಣನ ಜನನ, ಆತ ಬೆಣ್ಣೆ ಕದಿಯುವುದು, ನಂದಗೋಕುಲದಲ್ಲಿ ಆತನ ತುಂಟಾಟ, ಕಾಳಿಂಗಮರ್ದನ ಇತ್ಯಾದಿ ಶ್ರೀಕೃಷ್ಣನ ಬಾಲಲೀಲೆಗಳನ್ನು ನೀವು ನೋಡಬಹುದು.



ನನ್ನ ಗರ್ಭಗುಡಿಯಲ್ಲಿ ಅಮೃತೇಶ್ವರ ಸ್ವಾಮಿ ಲಿಂಗರೂಪದಲ್ಲಿ ಕುಳಿತಿದ್ದಾನೆ. ನಾರಾಯಣ, ಸರಸ್ವತಿ, ಸುಬ್ರಹ್ಮಣ್ಯ, ಕಾಲಭೈರವ, ಇವರೆಲ್ಲ ನನ್ನ ನಾಲ್ಕೂ ಗೋಡೆಗಳಲ್ಲಿ ಜಾಗಹಿಡಿದಿದ್ದಾರೆ. ನಿಮಗೆ ಇನ್ನೊಂದು ವಿಶೇಷ ಹೇಳುತ್ತೇನೆ ಕೇಳಿ. ಪ್ರತಿವರ್ಷ ಮಕರ ಸಂಕ್ರಾಂತಿ ದಿವಸ ಸೂರ್ಯಕಿರಣವು ಸ್ವಾಮಿ ಅಮೃತೇಶ್ವರನ ಮೇಲೆ ಬೀಳುತ್ತದೆ. ಅದನ್ನು ನೋಡುವುದೇ ಒಂದು ರೋಚಕ ಅನುಭವ.

ನನ್ನ ನವರಂಗದ ಮೇಲ್ಛಾವಣಿಯಲ್ಲಿ ಶಿವನ ತಾಂಡವ ನೃತ್ಯದ ಕೆತ್ತನೆ ಇದೆ. ಗರ್ಭಗುಡಿಯ ಗೋಪುರದ ಮುಂಭಾಗದಲ್ಲಿ ಸಳನು ಹುಲಿಯನ್ನು ಸಂಹರಿಸುವ ಚಿತ್ರಣವಿದೆ. ಸಳನ ವಂಶಜರು ಹೊಯ್–ಸಳರಾದ ಕತೆ ಗೊತ್ತಲ್ಲ! ಎಲ್ಲವನ್ನು ನಾನೇ ವಿವರಿಸಿಬಿಟ್ಟರೆ ನೋಡಲು ಬರುವ ನಿಮಗೇನು ಸ್ವಾರಸ್ಯ ಉಳಿಯುವುದು. ಪ್ರವಾಸಿಗರೇ, ಬನ್ನಿ. ನಿಮಗಾಗಿ ನಾನು ನಿತ್ಯವೂ ಕಾಯುತ್ತಿರುತ್ತೇನೆ.

ಕ್ಷೇತ್ರ : ಓದುವುದು.
ಸಾಮರ್ಥ್ಯ : ಸುಮಾರು ಐದು ಸಾವಿರ ಪದಗಳನ್ನು ಓದಿ ಗ್ರಹಿಸುವುದು.
ಬರವಣಿಗೆಯಲ್ಲಿ ಬಳಸುವುದು.

ಆಶಯ

ನಮ್ಮ ನಾಡು ಶಿಲ್ಪಕಲೆಗಳ ತವರೂರು. ವಿವಿಧ ಶಿಲ್ಪ ವಿನ್ಯಾಸಗಳಿಂದ ಕೂಡಿದ ಹಲವು ಪ್ರಸಿದ್ಧ ದೇವಾಲಯಗಳು ಇಲ್ಲಿವೆ. ಪ್ರಸಿದ್ಧಿಗೆ ಬಾರದ, ಆದರೆ ಅತ್ಯುತ್ತಮ ಶಿಲ್ಪ ಸಿರಿಯಿಂದ ಕೂಡಿದ ದೇವಾಲಯಗಳು ಇನ್ನೂ ನಮ್ಮ ನಾಡಿನಲ್ಲಿವೆ. ಅಂತಹ ಅದ್ಭುತ ಶಿಲ್ಪಕಲಾ ವೈಭವವನ್ನು ಮೈಗೂಡಿಸಿಕೊಂಡು ಸದ್ದಿಲ್ಲದೆ ಕುಳಿತ ದೇಗುಲವೊಂದನ್ನು ಬೆಳಕಿಗೆ ತರುವುದು ಈ ಪಾಠದ ಆಶಯ.

ಅ. ಅರ್ಥ ತಿಳಿಯಿರಿ.

ಶಿಲ್ಪಕಲೆ–ಕಲ್ಲಿನ ಕೆತ್ತನೆ. ದಂಡನಾಯಕ–ಸೇನೆಯ ಮುಖ್ಯಸ್ಥ. ಸಂಚು–ಮೋಸ, ಉಪಾಯಹೂಡು. ಜಮೀನು–ಕೃಷಿಗೆ ಬಳುಸುವ ಭೂಮಿ. ಲಾಂಛನ–ಗುರುತು, ಚಿಹ್ನೆ. ಶಿಖರ–ಗೋಪುರ. ಕಟಾಂಜನ–ಕಟಕಟೆ. ಭಿತ್ತಿ–ಗೋಡೆ. ಮನತಣಿಸು–ಮನಸ್ಸಿಗೆ ಸಂತೋಷ ಕೊಡು, ಹಿತ ನೀಡು. ತಜ್ಞರು–ಪಂಡಿತರು, ಪರಿಣತರು.

ಆ. ವಿವರ ತಿಳಿಯಿರಿ.

ಮಲ್ಲಿತಮ್ಮ : ಹೊಯ್ಸಳರ ದೇವಾಲಯ ನಿರ್ಮಾಣ ಕಾಲದ ಪ್ರಧಾನ ಶಿಲ್ಪಿಗಳಲ್ಲೊಬ್ಬ.
ಪಗಡೆ ಆಟ : ಕೌರವರು ಪಾಂಡವರನ್ನು ಪಂದ್ಯದಲ್ಲಿ ಮೋಸದಿಂದ ಸೋಲಿಸಲು ಬಳಸಿದ ಬಳಸಿದ ಒಂದು ಬಗೆಯ ಜೂಜು.



ಪುತ್ರಕಾಮೇಷ್ಟಿ : ಮಕ್ಕಳನ್ನು ಬಯಸಿ ಮಾಡುವ ಯಾಗ.
ಕಾಳಿಂಗ ಮರ್ದನ : ಕಾಳಿಂಗ ಎಂಬ ವಿಷಸರ್ಪವನ್ನು ಸಂಹಾರ ಮಾಡುವುದು.
ನವರಂಗ : ಗರ್ಭಗುಡಿಯ ಮುಂಭಾಗದ ವಿಶಾಲವಾದ ಎತ್ತರವಾದ ಸ್ಥಳ.
ಸಳ : ಹೊಯ್ಸಳ ವಂಶದ ಮೂಲ ಪುರುಷ.

ಇ. ಕೆಳಗಿನ ಪ್ರಶ್ನೆಗಳಿಗೆ ಉತ್ತರ ಹೇಳಿರಿ

೧. ಅಮೃತಾಪುರ ಎಲ್ಲಿದೆ?
೨. ವೀರಬಲ್ಲಾಳ ಅರಸರು ಯಾರ ನೆನಪಿಗಾಗಿ ಈ ದೇವಾಲಯ ಕಟ್ಟಿಸಿದರು?
೩. ಅಮೃತೇಶ್ವರ ದೇವಾಲಯ ನಿರ್ಮಾಣದ ಮುಖ್ಯ ಶಿಲ್ಪಿ ಯಾರು?
೪. ಅಮೃತೇಶ್ವರ ದೇವಾಲಯಕ್ಕೆ ಜಮೀನು ನೀಡಿದ ದಾನಿಗಳು ಯಾರು?
೫. ಸೂರ್ಯಕಿರಣ ಅಮೃತೇಶ್ವರಸ್ವಾಮಿ ವಿಗ್ರಹದ ಮೇಲೆ ಯಾವ ದಿನ ಬೀಳುತ್ತದೆ?

ವ್ಯಾಕರಣ ಮಾಹಿತಿ

ಅ. ಕಾಲಗಳು

ನಡೆದ, ನಡೆಯುತ್ತಿರುವ, ಮತ್ತು ನಡೆಯಬಹುದಾದ ಕ್ರಿಯೆಗಳನ್ನು ಸೂಚಿಸುವುದೇ ಕಾಲಗಳು. ಇವುಗಳಲ್ಲಿ ಮೂರು ವಿಧ : ೧)ಭೂತ ಕಾಲ. ೨) ವರ್ತಮಾನ ಕಾಲ. ೩) ಭವಿಷ್ಯತ್ ಕಾಲ.

೧)ಭೂತ ಕಾಲ (ನಡೆದ)

ಮಹೇಂದ್ರನು ಮನೆಗೆಲಸ <u>ಮಾಡಿದನು.</u>
ರಾಣಿ ಮಾರುಕಟ್ಟೆಗೆ <u>ಹೋದಳು.</u>
ಗುರುಗಳು ಪಾಠ <u>ಹೇಳಿದರು.</u>

೨) ವರ್ತಮಾನ ಕಾಲ. (ನಡೆಯುತ್ತಿರುವ)

ರಾಜು ತೋಟದಲ್ಲಿ ಕೆಲಸ <u>ಮಾಡುತ್ತಾನೆ.</u>
ಲಕ್ಷ್ಮಿ ಶಾಲೆಗೆ <u>ಹೋಗುತ್ತಾಳೆ.</u>
ಅವರು ಜಮೀನಿನಲ್ಲಿ <u>ದುಡಿಯುತ್ತಾರೆ.</u>

೩)ಭವಿಷ್ಯತ್ ಕಾಲ (ನಡೆಯುವ)

ಪ್ರಸಾದ್ ಶಿಕ್ಷಕ <u>ಆಗುವನು.</u>
ಶಾಲಿನಿ ನಟಿ <u>ಆಗುವಳು.</u>
ವೈದ್ಯರು ನಮ್ಮ ಮನೆಗೆ <u>ಬರುವರು.</u>



ಕೆಳಗಿನ ಕೋಷ್ಟಕವನ್ನು ಗಮನಿಸಿ ಓದಿರಿ.

ಕಾಲಗಳು

ಭೂತ ಕಾಲ	ವರ್ತಮಾನಕಾಲ	ಭವಿಷ್ಯತ್ ಕಾಲ
ಆಡಿದೆನು	ಆಡುತ್ತೇನೆ	ಆಡುವೆನು
ನೋಡಿದೆನು	ನೋಡುತ್ತೇನೆ	ನೋಡುವೆನು
ಬೇಡಿದಳು	ಬೇಡುತ್ತಾಳೆ	ಬೇಡುವಳು
ಓಡಿದನು	ಓಡುತ್ತಾನೆ	ಓಡುವನು
ನಡೆಯಿತು	ನಡೆಯುತ್ತದೆ	ನಡೆಯುವುದು

ಆ. ಓದಿಗೆ ಮನ್ನಣೆ

೧. ಹೊಯ್ಸಳರ ದೇವಾಲಯಗಳಿಗೆ ಸಂಬಂಧಿಸಿದಂತೆ ಮಾಹಿತಿಗಳನ್ನು ಸಂಗ್ರಹಿಸಿ ಓದಿರಿ.

೨. ದಿನಪತ್ರಿಕೆಗಳಲ್ಲಿ ಬರುವ ವಿವಿಧ ದೇವಾಲಯಗಳ ಕುರಿತು ಮಾಹಿತಿ ಸಂಗ್ರಹಿಸಿರಿ.

ಇ. ಶುಭನುಡಿ

೧. ಕನ್ನಡ ನಾಡು ಶಿಲ್ಪಕಲೆಗಳ ಬೀಡು.

೨. ಶಿಲ್ಪಕಲೆಯ ರಕ್ಷಣೆ ಎಲ್ಲರ ಹೊಣೆ.

೩. ಶಿಲೆಯಲ್ಲ ಗುಡಿಯು, ಕಲೆಯ ಬಲೆಯು.

ಪ್ಯಾರೀಸ್‌ನ ಮೆಟ್ರೋ



ಮೆಟ್ರೋ ಎಂಬುದೊಂದು ಪ್ಯಾರೀಸ್ ನಗರದ ರೈಲು ವ್ಯವಸ್ಥೆ. ಅದನ್ನು ಹೊರತುಪಡಿಸಿ ಪ್ಯಾರೀಸ್ಸನ್ನು ಕಲ್ಪಿಸಿಕೊಳ್ಳುವುದೂ ಅಸಂಭವ. ಪ್ಯಾರೀಸ್‌ನ ಭೂಮಿಯ ಒಳಗಡೆ ಈ ರೈಲುಗಳು ಅಂತರ್ಗತವಾಗಿದ್ದರೆ, ಈ ರೈಲುಗಳು ಪ್ಯಾರಿಸ್ಸಿಯನ್ನರ ಬದುಕಿನಲ್ಲಿ ಅಂತರ್ಗತವಾಗಿದೆ. ಸ್ವಂತ ಕಾರುಳ್ಳವರೂ ಅದನ್ನು ವೀಕ್‌ಎಂಡ್‌ಗೆ ಮೀಸಲಿಟ್ಟು ಕಛೇರಿಗೆ ಮೆಟ್ರೋ ರೈಲಿನಲ್ಲಿ ಓಡಾಡುತ್ತಾರೆ. ಮೈಕೇಲ್ ಕೂಡ ಹಾಗೆಯೇ ಮಾಡುತ್ತಿದ್ದ.

ಅವರೆಂಥ ಜಾಣರು ನೋಡಿ, ಮಣ್ಣ ಮೇಲೆ ನೀವು ನೂರೆಂಟು ಕಟ್ಟಡ ಕಟ್ಟಬಹುದು. ಭವ್ಯ ಮ್ಯೂಸಿಯಂ ತೆರೆಯಬಹುದು. ಆದರೆ ಮಣ್ಣ ಒಳಗೆ ಮಾಡುವುದೇನು? ಭೂಮಿ ಕೊರೆದು ರೈಲು ಮಾರ್ಗಹಾಕಿದ್ದಾರೆ. ಮೆಟ್ರೋ (METRO) ಎಂದು ಬೋರ್ಡ್ ಕಂಡಕಡೆ ಮೆಟ್ಟಿಲುಗಳಿರುತ್ತವೆ. ಯಾವ ರಸ್ತೆಯಂಚಲ್ಲಿ ಕಂಡರೂ ಮೆಟ್ರೋ ಫಲಕ ಕರೆಯುತ್ತದೆ. ಈ ಮೆಟ್ರೋ ಸ್ಟೇಷನ್‌ಗಳಿಗಾಗಿ ನೀವು ಮೈಲಿಗಟ್ಟಲೆ ನಡೆಯಬೇಕಾಗಿಲ್ಲ. ಕೆಳಗಿಳಿಯುವ ಮೆಟ್ಟಲು ಶ್ರಮತರುತ್ತವೆ ಎನ್ನುವಂತಿಲ್ಲ. ಎಸ್ಕಲೇಟರ್ ಹತ್ತಿನಿಲ್ಲಬಹುದು. ಕೆಳಗಿಳಿದ ಕೂಡಲೇ ಅಲ್ಲೊಂದು ಪುಟ್ಟ ರೈಲ್ವೆ ನಿಲ್ದಾಣವೇ ಎದುರಾಗುತ್ತದೆ. ಮಣ್ಣ ಒಳಗೆ ಹೊಸದೊಂದು ಲೋಕವೇ ಇರುವ ಹಾಗೆ. ಮೆಟ್ರೋಗೆ ಒಂದೇ ಒಂದು ಅಥವಾ ರಿಯಾಯಿತಿ ಟಿಕೆಟ್ಟುಗಳ ಪುಸ್ತಿಕೆಯನ್ನೇ ನೀವು ಕೊಳ್ಳಬಹುದು. ತುಂಬಾ ಅಗ್ಗವಾದ ಬೆಲೆಗೆ. ರೆಪ್ಪೆ ಮಿಟುಕಿಸುವಷ್ಟರಲ್ಲಿ ಭೂಮಿಯೊಳಗಿನ ಕತ್ತಲ ಗುಹೆಯಿಂದ ಅಬ್ಬರಿಸಿಕೊಂಡು ವಿದ್ಯುತ್ ರೈಲು ಬರುತ್ತದೆ. ಎದುರಿಗೆ ಫಲಕ

ಗುರಿಯನ್ನು ಬರೆದಿರುತ್ತದೆ. ನೀವೊಂದು ಮೆಟ್ರೋ ಮ್ಯಾಪ್ ಹಿಡಿದು ಕುಳಿತರೆ ಸಾಕು. ಕ್ಷಣ ಮಾತ್ರದಲ್ಲಿ ನಿಮಗೆ ಆ ವ್ಯವಸ್ಥೆ ಅರ್ಥವಾಗುತ್ತದೆ. ರೈಲು ನಿಂತಕೂಡಲೇ ಸ್ವಯಂಚಾಲಿತ ಹೆಬ್ಬಾಗಿಲುಗಳು ತೆರೆದುಕೊಳ್ಳುತ್ತವೆ. ಕೆಲವು ಸೆಕೆಂಡುಗಳಲ್ಲಿ ಹತ್ತುವ–ಇಳಿಯುವ ಸದ್ದಿಲ್ಲದ ಕ್ರಿಯೆ ನಡೆದು ಹೋಗುತ್ತದೆ. ರೈಲು ಹೊರಡುವ ಮುನ್ನ ಸಣ್ಣ ಅಲಾರಾಂ ಮಾಡಿ ಎಚ್ಚರಿಸಿ ಬಾಗಿಲು ಹಾಕಿಕೊಳ್ಳುತ್ತದೆ. ಕಛೇರಿ ಬಿಡುವ ವೇಳೆಯಲ್ಲಿ, ಕೆಲವು ಮಾರ್ಗಗಳಲ್ಲಿ ಮಾತ್ರ ಸೀಟು ಸಿಗದಿರಬಹುದು. ಉಳಿದಂತೆ ಮೆಟ್ರೋ ಪ್ರಯಾಣ ನಿರಾತಂಕ, ನಿರಾಯಾಸ.

ಪ್ಯಾರೀಸ್‌ನ ರೈಲು ಮತ್ತು ನಗರ ಸಾರಿಗೆ ಬಸ್ಸುಗಳಿಗೆ ಒಂದೇ ಆಡಳಿತವಿರುವುದರಿಂದ ಒಂದೇ ಟಿಕೆಟನ್ನು ಎರಡೂ ಕಡೆ ಬಳಸಬಹುದು. ದೂರದ ಬಡಾವಣೆಗೆ ಹೋಗುವ ವೇಗದ ರೈಲುಗಳನ್ನು ಬಿಟ್ಟರೆ ಉಳಿದ ರೈಲುಗಳೆಲ್ಲ ನಗರದ ಕೇಂದ್ರ ಭಾಗದಲ್ಲಿ ಸಂಚರಿಸುತ್ತವೆ. ರೈಲು ಗುಹೆಯೊಳಗೆ ಚಲಿಸುವಾಗ ಗಾಳಿ ಬೆಳಕಿನ ವ್ಯವಸ್ಥೆಗೇನೂ ಧಕ್ಕೆ ಇಲ್ಲ. ಮತ್ತೊಂದು ಸ್ಟೇಷನ್ ಬರುತ್ತಿದ್ದಂತೆ ಸ್ಟೇಷನ್‌ನ ದೀಪಗಳು ಅಡಿಗಡಿಗೂ ಎಚ್ಚರಿಸಿ ನೆನಪಿಸುತ್ತವೆ. ದಾರಿ ತಪ್ಪುವ ಸಂಭವವೇ ಇಲ್ಲ. ಮೂರ್‍ನಾಲ್ಕು ದಾರಿಗಳು ಕೂಡುವ ಸ್ಟೇಷನ್‌ನಲ್ಲಿ ಕೂಡಾ ನೀವು ಭೂಮಿಯೊಳಗೇ ತಿರುಗಾಡಿ ಜಂಕ್ಷನ್ ಬದಲಿಸಬಹುದು. ಸೂಚನಾಫಲಕಗಳು ದಾರಿ ತಪ್ಪದಂತೆ ನೋಡಿಕೊಳ್ಳುತ್ತವೆ. ರೈಲು ತಪ್ಪಿದರೆ ಚಿಂತೆ ಇಲ್ಲ. ಮತ್ತೊಂದು ರೈಲಿಗೆ ಎರಡು ನಿಮಿಷಕ್ಕಿಂತ ಹೆಚ್ಚು ಕಾಯಬೇಕಾಗಿಲ್ಲ. ನಮ್ಮ ಮಹಾನಗರಗಳಿಗೆ ಇಂಥ ವ್ಯವಸ್ಥೆ ಇದ್ದರೆ ಖಾಸಗಿ ವಾಹನ ಬಳಕೆ ಕಡಿಮೆಯಾಗಿ ಇಂಧನ ಉಳಿತಾಯ ಸಾಧ್ಯ. ಪರಿಸರ ಮಾಲಿನ್ಯ ಹಾಗೂ ವಾಯುಮಾಲಿನ್ಯ ಕಡಿಮೆಯಾಗುವುದೂ ಸಾಧ್ಯ.

–ನಾಗತಿಹಳ್ಳಿ ಚಂದ್ರಶೇಖರ್ ಅವರ 'ಅಯನ' ಪ್ರವಾಸ ಕಥನದಿಂದ ಆಯ್ದ ಭಾಗ.

ಕೆಳಗಿನ ಪ್ರಶ್ನೆಗಳಿಗೆ ಉತ್ತರ ಹೇಳಿರಿ :

೧. ಮೆಟ್ರೋ ಎಂದರೇನು?

೨. ಪ್ಯಾರಿಸಿಯನ್ನರು ಕಛೇರಿಗೆ ಯಾವುದರ ಮೂಲಕ ಓಡಾಡುತ್ತಾರೆ?

೩. ಮೆಟ್ರೋ ಎಂದು ಬೋರ್ಡ್ ಕಂಡಕಡೆ ಏನಿರುತ್ತವೆ?

೪. ಕತ್ತಲೆ ಗುಹೆಯಿಂದ ಅಬ್ಬರಿಸಿಕೊಂಡು ಬರುವುದು ಏನು?

೫. ಮೆಟ್ರೋ ವ್ಯವಸ್ಥೆ ಎಂತಹ ನಗರಗಳಿಗೆ ಪ್ರಯೋಜನಕಾರಿ?



ಪದ ಖಜಾನೆ

ಎರಡನೆಯ ಸೆಮಿಸ್ಟರ್

ಅ

ಅಂಗಡಿ : ವಸ್ತುಗಳನ್ನು ಮಾರುವ ಕೊಳ್ಳುವ ತಾಣ, ಮಳಿಗೆ, ಮಾಲ್

ಅಕ್ಕರ : ಅಕ್ಕರೆ, ಪ್ರೀತಿ

ಅಕ್ಕಸ : ರೋಷ, ರೊಚ್ಚು, ಈರ್ಷೆ

ಅತ್ತಲೆ : ಅತ್ತಕಡೆಗೆ, ಆ ದಿಕ್ಕಿಗೆ

ಅನಿಸು : ಮನಸ್ಸಿಗೆ ತೋರು

ಅಳುಕು : ಹೆದರು, ನಡುಗು, ಹಿಂಜರಿ

ಆ

ಆತುರ : ಅವಸರ, ಅತಿಬೇಗ

ಆಳ : ತಗ್ಗು, ಗಹನ

ಇ

ಇಕ್ಕು : ಇಡು, ಸುರಿಯು, ಹಾಕು

ಇಚ್ಛೆ : ಆಸೆ, ಬಯಕೆ

ಇತ್ತೀಚೆ : ಈವರೆಗೆ, ಇಲ್ಲಿಯ ತನಕ

ಉ

ಉತ್ತುಂಗ : ಶ್ರೇಷ್ಠ, ಎತ್ತರಕ್ಕೇರಿದ

ಉತ್ಸಾಹ : ಹುರುಪು, ಉಲ್ಲಾಸ

ಎ

ಎಡವು : ಮುಗ್ಗರಿಸು

ಏ

ಏರಿ : ಎತ್ತರದ ತಾಣ, ಏರುವಿಕೆ

ಒ

ಒಪ್ಪಿಸು : ಸಲ್ಲಿಸು, ಒಪ್ಪುವಂತೆ ಮಾಡು

ಒಸರು : ಜಿನುಗು, ತೊಟ್ಟಿಕ್ಕು

ಓ

ಓಣಿ : ಕಿರುದಾರಿ, ಬೀದಿ, ಗಲ್ಲಿ

ಓಲಗ : ರಾಜ ಸಭೆ, ಸಭೆ ನಡೆಯುವ ಸ್ಥಳ

ಕ

ಕಂಕಣ : ೧) ಬಳೆ, ಕಡಗ, ೨) ಸಂಕಲ್ಪ

ಕಂಗಾಲಾಗು : ಗಾಬರಿಗೊಳ್ಳು, ಏನೂ ತೋಚದಂತಾಗು

ಕಂಗೆಡು : ಗಾಬರಿಯಾಗು, ದಿಕ್ಕು ತೋಚದಂತಾಗು

ಕಂಟಿ : ಮುಳ್ಳುಗಿಡ,ಪೊದೆ

ಕಟಕಟೆ : ಸಾಕ್ಷಿಕಟ್ಟೆ,ಕಟಾಂಜನ

ಕಣ್ಣಂಚು : ಕಣ್ಣಿನ ತುದಿ

ಕರಡಿಗೆ : ಸಂಪುಟ, ಭರಣಿ, ಲಿಂಗದ ಪೆಟ್ಟಿಗೆ

ಕಾಣೆಯಾಗು : ಮರೆಯಾಗು, ಕಣ್ಮರೆಯಾಗು

ಕಾಯಕ : ಕೆಲಸ, ದುಡಿಮೆ

ಕಾವಲು : ರಕ್ಷಣೆ

ಕಿತ್ತುಹೋಗು : ಮೇಲೆದ್ದುಬರು, ತೆಗೆದುಹಾಕು

ಕುಟುಂಬ : ಮನೆತನ, ಒಕ್ಕಲು

ಕುಡುಗೋಲು : ಬಾಗಿದ ಬಾಯುಳ್ಳ ಕತ್ತಿ

ಕುತೂಹಲ : ವಿಸ್ಮಯ, ತವಕ

ಕುಮಂತ್ರ : ದುರ್ಬೋಧನೆ, ಕುತಂತ್ರ

ಕುಹಕ : ಮೋಸ,ವಂಚನೆ



ಕೃತಿ : ಕಾರ್ಯಮಾಡುವಿಕೆ, ಗ್ರಂಥ ರಚನೆ

ಕೆಸರು : ರಾಡಿ, ನೀರು ಬೆರೆತ ಮಣ್ಣು, ಕೊಚ್ಚೆ

ಕೇಂದ್ರ : ಮುಖ್ಯಸ್ಥಳ, ನಡುಭಾಗ

ಕೈಲಾಗು : ಮಾಡಲು ಸಾಧ್ಯವಾಗು

ಕೊನೆ : ತುದಿ, ಮುಕ್ತಾಯ, ಚಿಗುರು

ಕೋರು : ಕೇಳಿಕೊಳ್ಳು, ಬಯಸು, ಪ್ರಾರ್ಥಿಸು

ಕೋರ್ಟು : ನ್ಯಾಯಾಲಯ

ಗ

ಗದ್ದಲ : ಗೊಂದಲ, ಗಲಾಟೆ

ಗರ್ಭಗುಡಿ : ಗುಡಿಯ ವಿಗ್ರಹ ಇರುವ ಜಾಗ

ಗುಂಡಿ : ಹೊಂಡ, ಗುಣಿ

ಗುದ್ದಲಿ : ಪಿಕ್ಕಾಸು, ನೆಲವನ್ನು ಅಗೆಯುವ ಕಬ್ಬಿಣದ ಸಾಧನ

ಗುರುತು : ಚಿಹ್ನೆ,ಲಾಂಛನ, ಕುರುಹು

ಗೊತ್ತು ಪಡಿಸು : ತಿಳುವಳಿಕೆ ಹೇಳು, ತಿಳಿಸಿಕೊಡು

ಗೋಪುರ : ಶಿಖರ, ಪುರದ ಮಹಾದ್ವಾರ, ಗುಮ್ಮಟ

ಚ

ಚಪ್ಪಡಿಕಲ್ಲು : ಹಾಸುಕಲ್ಲು

ಚಿರಪರಿಚಿತ : ಎಲ್ಲರಿಗೂ ಗೊತ್ತಿರುವ, ಜನಪ್ರಿಯ

ಚುರುಕು : ಚತುರತೆ, ಲವಲವಿಕೆ

ಛ

ಛಲ : ಹಠ, ದೃಢನಿಶ್ಚಯ

ಜ

ಜವಾಬ್ದಾರಿ : ಹೊಣೆಗಾರಿಕೆ

ಜಾತಕ : ಜನ್ಮಕುಂಡಲಿ

ಜೀವದಾನ : ಬದುಕಿಸುವಿಕೆ, ಜೀವಕೊಡುವಿಕೆ

ತ

ತಂಗುದಾಣ : ತಂಗುವ ಜಾಗ, ನಿಲ್ದಾಣ

ತಪ : ತಪಸ್ಸು

ತಲುಪು : ಸೇರು,ಮುಟ್ಟು

ತಿಕ್ಕು : ಉಜ್ಜು, ಹೊಸೆ

ತಿನಿಸು : ತಿನ್ನುವ ಪದಾರ್ಥ

ತೀರ್ಪು : ತೀರ್ಮಾನ, ನಿರ್ಧಾರ

ತುರಿಕೆ : ಕೆರೆತ, ಕಡಿತ

ತೂರಿ : ಪ್ರವೇಶಿಸಿ, ಒಳನುಗ್ಗಿ

ತೋಡು : ಕಾಲುವೆ, ಅಗೆ, ಹೊಂಡಮಾಡು

ಥ

ಥಟ್ಟನೆ : ಕೂಡಲೆ, ತಡವಿಲ್ಲದೆಯೆ

ದ

ದಂಡನಾಯಕ : ಸೇನಾಪತಿ, ಸೇನಾನಾಯಕ

ದರ್ಶನ : ಕಾಣು, ಕಾಣ್ಕೆ

ದುಗುಡ : ದುಃಖ, ಉಮ್ಮಳ

ದುರ್ಗಮ : ಹೋಗಲಸಾಧ್ಯವಾದ

ದೂರಮಾಡು : ಪರಿಹರಿಸು, ನಿವಾರಿಸು

ದೊರಕು : ಲಭಿಸು, ಸಿಗು



ಧ

ಧರಿಸು : ಉಡು, ತೊಡು

ನ

ನ್ಯಾಯಾಧೀಶ : ತೀರ್ಪು ನೀಡುವವರು

ನ್ಯಾಯಾಲಯ : ತೀರ್ಪುಕೊಡುವ ಜಾಗ

ನಿಧಾನ : ಸಾವಕಾಶ, ತಡ

ನಿರುತ್ತರ : ಉತ್ತರವಿಲ್ಲದಿರುವಿಕೆ, ಮೌನ

ನಿರ್ಧಾರ : ನಿಶ್ಚಯ, ಸಂಕಲ್ಪ

ನೆರವು : ಸಹಾಯ, ಬೆಂಬಲ

ನೇತೃತ್ವ : ಮುಂದಾಳತ್ವ, ಹಿರಿತನ

ಪ

ಪಡೆ : ದೊರಕು, ಸೈನ್ಯ

ಪಣತೊಡು : ದೃಢನಿರ್ಧಾರ ತೆಗೆದುಕೊಳ್ಳು

ಪ್ರಕರಣ : ಪ್ರಸಂಗ, ಘಟನೆ

ಪ್ರತಿಷ್ಠಾಪಿಸು : ಸ್ಥಾಪನೆ ಮಾಡು

ಪಾಲಿಸು : ಅನುಸರಿಸು

ಪ್ರಾರಂಭ : ಮೊದಲು, ಆರಂಭ

ಪುಟಾಣಿ : ಹುರಿಗಡಲೆ, ಚಿಕ್ಕಮಗು

ಪುರಿ : ಮಂಡಕ್ಕಿ, ಅಕ್ಕಿಯ ತಿನಿಸು

ಪೂರ್ತಿ : ಸಂಪೂರ್ಣ, ಸಮಗ್ರ

ಪೇಳ್ವ : ಹೇಳುವ

ಫ

ಫೀಲ್ಡ್ : ಭೂಭಾಗ, ಗದ್ದೆ

ಫೀಲ್ಡಿಂಗ್ : ಕ್ಷೇತ್ರರಕ್ಷಣೆ

ಬ

ಬಗೆಯ : ವಿಧದ, ಬೇರೆ ರೀತಿಯ

ಬಗೆಹರಿ : ಈಡೇರು, ನೆರವೇರು

ಬಗ್ಗೆ : ಕುರಿತು

ಬರೀ : ಬರಿಯ, ಕೇವಲ

ಬಲು : ಬಹಳ, ಹೆಚ್ಚು

ಬಹುತೇಕ : ಬಹುಮಟ್ಟಿಗೆ

ಬ್ಯಾಂಕ್ : ಹಣದ ವಿನಿಮಯ ನಡೆಸುವ ಕೇಂದ್ರ

ಬಿಂಕ : ಗರ್ವ, ಜಂಭ

ಬಿಗಿದು : ಕಟ್ಟಿ

ಬಿರುಸು : ರಭಸ, ಜೋರು

ಬೀಗರು : ನೆಂಟರು, ಮದುವೆಯಿಂದ ಸಂಬಂಧ

ಬೀರು : ಚೆಲ್ಲು, ಹರಡು

ಬುತ್ತಿ : ಪ್ರಯಾಣದ ವೇಳೆ ಕಟ್ಟಿ ಕೊಂಡೊಯ್ಯುವ ಆಹಾರ

ಬೆರಗಾಗು : ಅಚ್ಚರಿಪಡು

ಭ

ಭಾಸವಾಗು : ತೋರು, ಅನಿಸು

ಭಿತ್ತಿ : ಗೋಡೆ

ಭೂಶಿರ : ಭೂಖಂಡದ ಕೊನೆ, ಮೇಲ್ಭಾಗ



ಮ

ಮಂಡಿ : ಮೊಣಕಾಲು, ಸಗಟು ವ್ಯಾಪಾರದ ಅಂಗಡಿ
ಮೊಟು : ಅಲುಗಿಸು, ಬೆರಳಿನಿಂದ ನುಡಿಸು
ಮುಕ್ಕರಿಸು : ಮುಗ್ಗರಿಸು, ಎಡವು
ಮುಗ್ಧಭಾವ : ಶಾಂತಸ್ಥಿತಿ, ನಿಷ್ಕಪಟತೆ

ಯ

ಯಥಾವತ್ತಾಗಿ : ಸರಿಯಾಗಿ, ಇದ್ದದ್ದು ಇದ್ದ ಹಾಗೆ
ಯಥೇಚ್ಛ : ಮನಸ್ಸಿಗೆ ಬಂದಷ್ಟು, ಬೇಕಾದಷ್ಟು

ರ

ರಮಿಸು : ಸಂತೈಸು, ಪ್ರೀತಿಯಿಂದ ಸಮಾಧಾನ ಪಡಿಸು
ರೇಗಿಸು : ಸಿಟ್ಟಿಗೆಬ್ಬಿಸು, ಕೆರಳಿಸು

ಲ

ಲಭ್ಯ : ಸಿಕ್ಕತಕ್ಕ, ದೊರಕುವ
ಲೇಸು : ಸಮಂಜಸ, ಚೆನ್ನಾದ

ವ

ವಕೀಲ : ನ್ಯಾಯವಾದಿ, ಕಾಯಿದೆ ಪಂಡಿತ
ವಾಸ್ತವ : ನೈಜವಾದ, ಸಹಜವಾದ
ವಿಶೇಷ : ಅತಿಶಯ, ಹೆಚ್ಚಿನಗುಣ

ಶ

ಶೀಘ್ರ : ವೇಗ, ಜರೂರು
ಶುಲ್ಕ : ತೆರಿಗೆ, ಸುಂಕ
ಶೋಷಣೆ : ತುಳಿತ

ಸ

ಸಂಗ್ರಹಿಸು : ಶೇಖರಿಸು, ಒಟ್ಟು ಗೂಡಿಸು
ಸಂಘ : ಸಮೂಹ, ಜನರ ಒಕ್ಕೂಟ
ಸಂತೈಸು : ಉಪಚಾರ ಮಾಡು, ಆಧರಿಸು
ಸಂಪರ್ಕ : ಸಂಬಂಧ, ಸೇರಿಕೆ
ಸಂಭ್ರಮ : ಸಡಗರ, ಅದ್ದೂರಿ
ಸಜ್ಜನಿಕೆ : ಒಳ್ಳೆಯತನ
ಸದಸ್ಯ : ಸಂಘಗಳಲ್ಲಿ ಸೇರಿರುವಾತ, ಮೆಂಬರು
ಸಮಗ್ರ : ಎಲ್ಲ, ಪೂರ್ಣವಿವರ
ಸಮಸ್ಯೆ : ಜಟಿಲ ವಿಚಾರ, ತೊಡಕಿನ ವಿಷಯ
ಸಲಹೆ : ಅಭಿಪ್ರಾಯ, ಬುದ್ಧಿವಾದ ಹೇಳುವಿಕೆ
ಸಲಿಕೆ : ಸಲಕೆ, ಕೆರೆಯುವ ಸಾಧನ
ಸವಿಯು : ಆಸ್ವಾದಿಸು, ರುಚಿಯನ್ನು ಅನುಭವಿಸು
ಸಹಕಾರ : ನೆರವು,ಸಹಾಯ
ಸಹೋದರಿ : ಅಕ್ಕ, ಅಥವಾ ತಂಗಿ, ಒಡಹುಟ್ಟಿದವಳು
ಸಳ್ಳು : ಕಡ್ಡಿಯ ಕಸಬರಿಗೆ



ಸ್ವಚ್ಛತೆ : ಶುದ್ಧ, ಹಸನು, ನಿರ್ಮಲ

ಸಾಕ್ಷಿ : ಪ್ರತ್ಯಕ್ಷದರ್ಶಿ, ಕಣ್ಣಾರೆ ಕಂಡವ

ಸಿಡಿ : ಚಿಮ್ಮು, ಸ್ಫೋಟಗೊಳ್ಳು

ಸಿದ್ಧ : ಅಣಿಯಾದ, ತಯಾರಾದ

ಸುಸ್ತು : ಆಯಾಸ, ಬಳಲಿಕೆ

ಸುಳಿನುಡಿ : ಸುತ್ತಿಬಳಸಿ ಆಡುವ ಮಾತು

ಸೇದು : ಜಗ್ಗು, ಮೇಲೆತ್ತು

ಸೊಪ್ಪು : ಎಲೆ, ತೊಪ್ಪಲು

ಹ

ಹಂಗಿಸು : ಮೂದಲಿಸು, ಹೀಯಾಳಿಸು

ಹಗೆ : ದ್ವೇಷ, ಶತ್ರು

ಹಠ : ಛಲ, ಆಗ್ರಹ

ಹರಟೆ : ವ್ಯರ್ಥಾಲಾಪ, ಸರಸ ಸಲ್ಲಾಪ

ಹಾರೆ : ನೆಲ ಅಗೆಯುವ ಕಬ್ಬಿಣದ ಸಲಕರಣೆ

ಹಿಂಡು : ಗಟ್ಟಿಯಾಗಿ ಅದುಮು, ಗುಂಪು

ಹಿರಿಮೆ : ಶ್ರೇಷ್ಠತೆ, ದೊಡ್ಡತನ

ಹುರುಪು : ಉತ್ಸಾಹ, ಸಂಭ್ರಮ